# ಗೊಮ್ಮಟ

## ಮಹಾಮಸ್ತಕಾಭಿಷೇಕ – 2018



ಡಾ. ಪದ್ಮರಾಜ ದಂಡಾವತಿ




# ಗೊಮ್ಮಟ

## ಮಹಾಮಸ್ತಕಾಭಿಷೇಕ – 2018

# ಗೊಮ್ಮಟ

ಮಹಾಮಸ್ತಕಾಭಿಷೇಕ 2018

ಡಾ. ಪದ್ಮರಾಜ ದಂಡಾವತಿ

ಎಫ್-1, ಎಸ್.ವಿ.ಪ್ಯಾರಡೈಸ್, ಜೈನ ಬಸದಿ ಎದುರು,

5ನೇ ಅಡ್ಡರಸ್ತೆ, ಪುಟ್ಟೇನಹಳ್ಳಿ, ಜೆ.ಪಿ.ನಗರ 7ನೇ ಹಂತ.

ಬೆಂಗಳೂರು-560078.

ಮೊಬೈಲ್: 91-98453-20489

ಪ್ರಕಾಶಕರು :

**ಆಯುಕ್ತರು**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ಇನ್ಫೆಂಟ್ರಿ ರಸ್ತೆ, ಬೆಂಗಳೂರು - 01.

© ಲೇಖಕರದು

ಪ್ರತಿಗಳು : 5000

ಪ್ರಥಮ ಮುದ್ರಣ : 2006

ದ್ವಿತೀಯ ಮುದ್ರಣ : 2018

ಮುದ್ರಣ :

ಆರ್.ಕೆ. ಪ್ರಿಂಟರ್,

ಎ-6, ಜಿಲ್ಲಾ ಗುರುಭವನ್, ಹಳೇ ಅಂಚೆ ಕಛೇರಿ ರಸ್ತೆ,

ಹಾಸನ - 573201.

ಭಗವಾನ್ ಬಾಹುಬಲಿಯ ದಿವ್ಯ ಸಂದೇಶ

ಅಹಿಂಸೆಯಿಂದ ಸುಖ – ತ್ಯಾಗದಿಂದ ಶಾಂತಿ

ಮೈತ್ರಿಯಿಂದ ಪ್ರಗತಿ – ಧ್ಯಾನದಿಂದ ಸಿದ್ಧಿ

# ಪರಿಚಯ

ಪದ್ಮರಾಜ ದಂಡಾವತಿ (1955) ಓದಿದ್ದು ಕನ್ನಡ ಸಾಹಿತ್ಯ, ಒದಗಿ ಬಂದುದು ಪತ್ರಿಕೋದ್ಯಮ. ಪುಟ್ಟ ಪುಟ್ಟ ಹೆಜ್ಜೆ ಇಡುತ್ತ ತಲುಪಿದ್ದು ಉನ್ನತ ಹುದ್ದೆ, ಪ್ರಜಾವಾಣಿಯ ಕಾರ್ಯ ನಿರ್ವಾಹಕ ಸಂಪಾದಕನಾಗಿ ಸುಮಾರು ಹತ್ತು ವರ್ಷ ದುಡಿಮೆ. ಪ್ರತಿ ಭಾನುವಾರ 'ನಾಲ್ಕನೇ ಆಯಾಮ' ಎಂಬ ಜನಪ್ರಿಯ ಅಂಕಣ ಬರೆದುದು ಎಂಟು ವರ್ಷಕ್ಕೂ ಮಿಗಿಲು ಅವಧಿಗೆ, ಎರಡೂ ಒಂದು ದಾಖಲೆ, ಅಂಕಣದ ವಿಸ್ತಾರ ಮತ್ತು ಹರಹು ದೊಡ್ಡದು. ರಾಜಕೀಯ, ಕೃಷಿ, ಶಿಕ್ಷಣ, ಮಾಧ್ಯಮ, ಸಾಹಿತ್ಯ, ನಾಟಕ, ಸಿನಿಮಾ ಹೀಗೆ ಅದರ ವಸ್ತು ಸಾಮಗ್ರಿ ವೈವಿಧ್ಯಮಯವಾದುದು. ಅದೆಲ್ಲ 'ನಾಲ್ಕನೇ ಆಯಾಮ' ದ ಆರು ಸಂಪುಟಗಳಲ್ಲಿ ಈಗ ದಾಖಲಿತ. ಜೊತೆಗೆ, 'ಚೌಕಟ್ಟಿನಾಚೆ', 'ಹೆಜ್ಜೆ ಮೂಡಿಸಿದ ಹಾದಿ', 'ಆರಂಭ', 'ಅವಲೋಕನ', 'ಪತ್ರಿಕಾ ಭಾಷೆ, 'ರಿಪೋರ್ಟಿಂಗ್' ಅವರ ಪ್ರಕಟಿತ ಪುಸ್ತಕಗಳು, ಕನ್ನಡ, ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪ್ರಕಟವಾದ 'ಗೊಮ್ಮಟ' ಶ್ರವಣ ಬೆಳಗೊಳದ ಪ್ರಾಗಿತಿಹಾಸ ತಿಳಿಸುವ ಮಹತ್ವದ ಪುಸ್ತಕ. ಅಮೆರಿಕ ಸರ್ಕಾರದ ಅಂತರ ರಾಷ್ಟ್ರೀಯ ನಾಯಕತ್ವ ಶಿಬಿರಕ್ಕೆ ಆಯ್ಕೆ; ಜಿ 8, ಜಿ 5 ಶೃಂಗ ಸಭೆಗೆ ಪ್ರಧಾನಿ ಜೊತೆ ಪ್ರಯಾಣ. ಪೂರ್ವದಿಂದ ಪಶ್ಚಿಮದ ವರೆಗೆ ಹತ್ತು ಹಲವು ದೇಶಗಳ ಪ್ರವಾಸ, ರಾಜ್ಯೋತ್ಸವ, ಮಾಧ್ಯಮ ಅಕಾಡೆಮಿ, ಖಾದ್ರಿ ಶಾಮಣ್ಣ ಪತ್ರಿಕೊದ್ಯಮ, ಚಾವುಂಡರಾಯ ದತ್ತಿ, ಆಳ್ವಾಸ್ ನುಡಿಸಿರಿಗಳಂಥ ಹಲವು ಪ್ರಶಸ್ತಿ ಹಾಗೂ ಗೌರವ ಡಾಕ್ಟರೇಟ್ಗಳ ಗರಿ.

# ಪರಿವಿಡಿ


| | | |
|---|---|---|
| 1. | ಎರಡು ಮಾತು (ಪರಿಷ್ಕೃತ ಮುದ್ರಣ) | 7 |
| 2. | ಶ್ರವಣಬೆಳಗೊಳ : ಶಿಲ್ಪ-ಸಂಸ್ಕೃತಿಯ ತಾಣ | 8 |
| 3. | ಭರತ-ಬಾಹುಬಲಿಯ ರೋಚಕ ಕಥಾನಕ | 18 |
| 4. | ಬೆಳಗೊಳದ ಗೊಮ್ಮಟನ ಇತಿಹಾಸ | 24 |
| 5. | ಮಹಾ ಮಸ್ತಕಾಭಿಷೇಕ : ಒಂದು ನೋಟ | 30 |
| 6. | ಜೈನ ಧರ್ಮ ಮತ್ತು ಅದರ ಪ್ರಸ್ತುತತೆ | 38 |
| 7. | ಕರ್ನಾಟಕದ ಮಹತ್ವದ ಜೈನ ಕೇಂದ್ರಗಳು | 46 |
| 8. | ಚಾರುಕೀರ್ತಿ ಶ್ರೀಗಳು ಮತ್ತು ಜೈನ ಮಠದ ಉನ್ನತ ಪರಂಪರೆ | 54 |
| 9. | ಪ್ರಾಕೃತ ಅಧ್ಯಯನ ಕೇಂದ್ರ ಮತ್ತು ಬೆಳವಣಿಗೆ | 60 |
| 10. | ಗೊಮ್ಮಟ : ಕವಿಗಳ ಕಾಣ್ಕೆ | 64 |
| 11. | ಚಿತ್ರ ಸಂಪುಟ | 69 |
| 12. | ಆಕರ ಗ್ರಂಥಗಳು | 80 |

# ಎರಡು ಮಾತು

2006 ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಹೊರತಂದ ಈ ಪುಸ್ತಕದ ಉಪಯುಕ್ತತೆ ಗಮನಿಸಿ ಇದರ ಪರಿಷ್ಕೃತ ಆವೃತ್ತಿಯನ್ನು ಈಗ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆ ಪ್ರಕಟ ಮಾಡುತ್ತಿದೆ. ಶ್ರವಣಬೆಳಗೊಳದ ಸಮಗ್ರ ಪ್ರಾಗಿತಿಹಾಸದ ಮಹತ್ವ ತಿಳಿಸುವ ಹಾಗೂ ಒಬ್ಬರೇ ಲೇಖಕರು ಮೂರು ಭಾಷೆಗಳಲ್ಲಿ ಬರೆದ ಏಕೈಕ ಪುಸ್ತಕವಿದು ಎಂಬುದನ್ನು ಅತ್ಯಂತ ನಮ್ರವಾಗಿ ಇಲ್ಲಿ ಉಲ್ಲೇಖಿಸಲು ಬಯಸುವೆ. ಇಂಥ ಪರಿಷ್ಕೃತ ಆವೃತ್ತಿಯನ್ನು ಹೊರಗೆ ತರುವಂತೆ ಕೋರಿಕೊಂಡ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು, ಪುಸ್ತಕದ ಮುದ್ರಣಕ್ಕೆ ಅನುವು ಮಾಡಿಕೊಟ್ಟ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎ. ಮಂಜು, 2018 ಮಹಾಮಸ್ತಕಾಭಿಷೇಕ ಮಹೋತ್ಸವ ರಾಜ್ಯ ವಲಯದ ವಿಶೇಷ ಅಧಿಕಾರಿ ಶ್ರೀ ರಾಕೇಶ್ ಸಿಂಗ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಶ್ರೀ ಮಣಿವಣ್ಣನ್, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ|. ಪಿ.ಎಸ್.ಹರ್ಷ, ಜಿಲ್ಲಾಧಿಕಾರಿ ಶ್ರೀಮತಿ ರೋಹಿಣಿ ಸಿಂಧೂರಿ, ಪ್ರಸಕ್ತ ಮಹಾಮಸ್ತಕಾಭಿಷೇಕ ಸಮಿತಿಯ ಕಾರಾಧ್ಯಕ್ಷರಾದ ಶ್ರೀ ಎಸ್. ಜಿತೇಂದ್ರಕುಮಾರ್, ಮಹಾ ಮಸ್ತಕಾಭಿಷೇಕ 2018ರ ಹಾಸನ ಜಿಲ್ಲಾ ವಿಶೇಷ ಅಧಿಕಾರಿ ಶ್ರೀ ವರಪ್ರಸಾದ್ ರೆಡ್ಡಿ, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾದ ಎಚ್.ಬಿ. ದಿನೇಶ್ ಹಾಗೂ ಬಸವರಾಜ ಕಂಬಿ, ಹಾಸನ ಜಿಲ್ಲಾ ಹಿರಿಯ ಸಹಾಯಕ ನಿರ್ದೇಶಕ ವಿನೋದ್ಚಂದ್ರ ಅವರನ್ನು ಈ ಪುಸ್ತಕ ಹೊರಬರುತ್ತಿರುವ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುವೆ.

ಈ ಪುಸ್ತಕದ ಮರುಮುದ್ರಣ ಬರುತ್ತಿದೆ ಎಂದು ತಿಳಿಸಿದಾಗ ಸಂತೋಷಪಟ್ಟು ಆಶೀರ್ವಾದದ ಹರಕೆ ಮಾಡಿದವರು ಶ್ರವಣಬೆಳಗೊಳದ ಜೈನ ಮಠದ ಪೀಠಾಧಿಪತಿಗಳಾದ ಸ್ವಸ್ತಿಶ್ರೀ ಜಗದ್ಗುರು ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು. ಅವರು ನನ್ನ ಬಗೆಗೆ ತೋರುತ್ತಿರುವ ವಿಶ್ವಾಸ ಅಸೀಮವಾದುದು. ಅದು ದೈವಕೃಪೆಯಂಥದು. ಅವರಿಗೆ ನನ್ನ ಕೃತಜ್ಞತೆಯ ಪ್ರಣಾಮಗಳು.

ನಾಡಿನ ಪ್ರಸಿದ್ಧ ಛಾಯಾಗ್ರಾಹಕ ಶ್ರೀ ಯಜ್ಞ ಅವರು 2006ರ ಮಹಾಮಸ್ತಕಾಭಿಷೇಕದ ಅಪರೂಪದ ಛಾಯಾಚಿತ್ರಗಳನ್ನು ಒದಗಿಸಿದ್ದಾರೆ. ಅದಕ್ಕೆ ಸ್ನೇಹಿತರಾದ ಶ್ರೀ ಅಮೃತಮಲ್ಲ ಅವರು ನೆರವಾಗಿದ್ದಾರೆ. 'ಗೊಮ್ಮಟ' ಪುಸ್ತಕದ ಬಗೆಗೆ ನಮ್ಮ ನಾಡಿನ ಖ್ಯಾತ ವಿದ್ವಾಂಸರಾದ ಡಾ.ಹಂಪ.ನಾಗರಾಜಯ್ಯ ಅವರು ಮೊದಲ ಆವೃತಿ ಪ್ರಕಟವಾದಾಗ ತುಂಬು ಮೆಚ್ಚುಗೆ ವ್ಯಕ್ತಪಡಿಸಿ, ಇದರ ಪರಿಷ್ಕೃತ ಆವೃತ್ತಿಯೂ ಬರಬೇಕು ಎಂದು ಹಾರೈಸಿದವರು. ಗೊಮ್ಮಟವಾಣಿಯ ಸಂಪಾದಕರೂ, ನನ್ನ ಹಿತೈಷಿಗಳೂ ಆದ ಶ್ರೀ.ಎಸ್.ಎನ್.ಅಶೋಕಕುಮಾರ್ ಅವರು ಈ ಪುಸ್ತಕದ ಬಗೆಗೆ ಅನೇಕ ಸಾರಿ ಪ್ರಸ್ತಾಪಿಸಿದ್ದೂ ಅಲ್ಲದೇ, ಅದರ ಬಗೆಗೆ ಗೊಮ್ಮಟವಾಣಿಯಲ್ಲಿ ಮೆಚ್ಚುಗೆಯ ಮಾತುಗಳನ್ನು ಬರೆದು


ಪ್ರೋತ್ಸಾಹಿಸಿದ್ದರು. ಈ ಆವೃತ್ತಿಗೆ ಕೆಲವು ಅಪರೂಪದ ಛಾಯಾ ಚಿತ್ರಗಳನ್ನು ಶ್ರೀ ಮದನಗೌಡರು ಒದಗಿಸಿದ್ದಾರೆ. ಅವರನ್ನೆಲ್ಲ ಇಲ್ಲಿ ಕೃತಜ್ಞತೆಯಿಂದ ಸ್ಮರಿಸುವೆ. ಅಂದವಾದ ಪುಟ ವಿನ್ಯಾಸ ಮಾಡಿ ಮುದ್ರಿಸಿಕೊಟ್ಟ ಹಾಸನದ ಆರ್.ಕೆ.ಪ್ರಿಂಟರ್ನ ಮಾಲೀಕರಾದ ಶ್ರೀ ಆರ್. ಜಿ. ತುಳಸಿ ಪ್ರಸಾದ್ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು.

ನನ್ನ ಎಲ್ಲ ಕಾರ್ಯಗಳಲ್ಲಿ ಬೆಂಬಲವಾಗಿ ನಿಲ್ಲುವ ನನ್ನ ಪತ್ನಿ ಲಲಿತಾ, ಮಗ ಅಶ್ವಿನ್ ಕುಮಾರ್, ಸೊಸೆ ಶ್ವೇತಾ ಹಾಗೂ ಮಗಳು ವರ್ಷಾ ಅವರನ್ನು ಈ ಪುಸ್ತಕ ಹೊರಬರುತ್ತಿರುವ ಸಂದರ್ಭದಲ್ಲಿ ಪ್ರೀತಿಯಿಂದ ನೆನೆಯುತ್ತೇನೆ. –

-ಡಾ. ಪದ್ಮರಾಜ ದಂಡಾವತಿ, ಬೆಂಗಳೂರು.



ಶ್ರವಣಬೆಳಗೊಳದ ಇತಿಹಾಸ ಎಂದರೆ ಕರ್ನಾಟಕದಲ್ಲಿ ಜೈನ ಧರ್ಮದ ಇತಿಹಾಸ ಎಂಬ ಮಾತು ಇದೆ. ಶ್ರವಣಬೆಳಗೊಳದ ಇತಿಹಾಸದ ಮೇಲೆ ಮೊದಲು ಮೌಲಿಕವಾದ ಬೆಳಕು ಚೆಲ್ಲಿದವರು ಪ್ರಖ್ಯಾತ ಇತಿಹಾಸ ತಜ್ಞರಾದ ಡಾ. ಎಸ್. ಶೆಟ್ಟರ್ ಅವರು, ಅವರಿಗಿಂತ ಮುಂಚೆ ಬಿ.ಎಲ್.ರೈಸ್ ಮತ್ತು ಆರ್. ನರಸಿಂಹಾಚಾರ್ ಅವರು ಈ ಕ್ಷೇತ್ರದ ಐತಿಹಾಸಿಕ ಮಹತ್ವದ ಮೇಲೆ ಕೆಲಸ ಮಾಡಿದರು. ಆದರೆ, ಇಲ್ಲಿನ ಅಗಾಧ ಸಂಖ್ಯೆಯ ಶಾಸನಗಳನ್ನು ಬೆಳಕಿಗೆ ತಂದ ಶೆಟ್ಟರ್ ಅವರು ಬೆಳಗೊಳದ ಇತಿಹಾಸದ



ಮೇಲೆ ಹೊಸ ಬೆಳಕನ್ನೇ ಚೆಲ್ಲಿದರು. ಅದರಲ್ಲೂ ಅವರು ರಚಿಸಿದ, 'ಇನ್ವೈಟಿಂಗ್ ಡೆತ್' ಮತ್ತು 'ಪರ್ಸೂಯಿಂಗ್ ಡೆತ್' ಗ್ರಂಥಗಳು ಸಂಶೋಧನ ಕ್ಷೇತ್ರದ ಮೇರು ಕೃತಿಗಳು. ಈ ಕೃತಿಗಳಲ್ಲಿಯೇ ಜೈನರಲ್ಲಿನ ಸಲ್ಲೇಖನ ಎಂಬ ಸಾವಿನ ಪರಿಕಲ್ಪನೆಯ ಬಗೆಗೆ ಮಹತ್ವದ ಒಳನೋಟದ ದಾಖಲೆಗಳು ಇವೆ. ಸಲ್ಲೇಖನಕ್ಕೂ ಶ್ರವಣಬೆಳಗೊಳದ ಚಿಕ್ಕ ಬೆಟ್ಟ ಚಂದ್ರಗಿರಿಗೂ ಕರುಳು ಬಳ್ಳಿಯ ಸಂಬಂಧವಿದೆ. ಈಗ ಈ ಗ್ರಂಥಗಳು ಕನ್ನಡದಲ್ಲಿಯೂ ಪ್ರಕಟವಾಗಿವೆ. ಅವು ಕ್ರಮವಾಗಿ 'ಸಾವನ್ನು ಸ್ವಾಗತಿಸಿ' ಮತ್ತು 'ಸಾವನ್ನುಅರಸಿ.

ಬೆಳಗೊಳದ ದೊಡ್ಡ ಬೆಟ್ಟದ ಮೇಲೆ ಬಾಹುಬಲಿ ಮೂರ್ತಿ ನಿಂತಿದ್ದು, ವಿಶ್ವದ ಗಮನವನ್ನು ಈ ಮೂರ್ತಿಯ ಮೂಲಕ ತನ್ನ ಕಡೆಗೆ ವಿಂಧ್ಯಗಿರಿ ಸೆಳೆಯುತ್ತಿದ್ದರೂ, ಅದರ ಎದುರಿನ ಚಂದ್ರಗಿರಿ ಬೆಟ್ಟಕ್ಕೆ ಹೆಚ್ಚಿನ ಐತಿಹಾಸಿಕ ಮಹತ್ವವಿದೆ. ಕ್ರಿ.ಪೂ 3ನೇ ಶತಮಾನದಿಂದ ಕ್ರಿ.ಶ 12ನೇ ಶತಮಾನದ ನಡುವಿನ ಅವಧಿಯಲ್ಲಿ ಚಿಕ್ಕಬೆಟ್ಟವು ಬೆಳಗೊಳದ ಜೀವಾಳವಾಗಿತ್ತು. ಅಷ್ಟೇ ಏಕೆ ಜೈನ ಧರ್ಮದ ಕೇಂದ್ರವೂ ಆಗಿತ್ತು. ಈ ಬೆಟ್ಟದ ಮೇಲಿನ ಅತ್ಯಂತ ಪುರಾತನವಾದ ಕ್ರಿ.ಶ 600ರ ಕಾಲದ ಒಂದು ಶಾಸನದಲ್ಲಿ ಭದ್ರಬಾಹು ಮುನಿಗಳು ಚಂದ್ರಗುಪ್ತ ಮೌರ್ಯ ದೊರೆಯ ಜತೆಗೆ ಬೆಳಗೊಳಕ್ಕೆ ಬಂದ ಕಥೆ ಇದೆ. ಚಿಕ್ಕ ಬೆಟ್ಟದ ಮೇಲಿನ ಚಂದ್ರಗುಪ್ತ ಬಸದಿಯ ಜಾಲಂಧ್ರದಲ್ಲಿ ಭದ್ರಬಾಹು ಮುನಿ ಮತ್ತು ಚಂದ್ರಗುಪ್ತರು ಬೆಳಗೊಳಕ್ಕೆ ಬಂದ ಸರಣಿ ಚಿತ್ರಗಳು ಇವೆ.


ಉತ್ತರ ಭಾರತದಲ್ಲಿ 12 ವರ್ಷಗಳ ಕಾಲ ಭೀಕರ ಬರ ಬಿದ್ದ ಸಂದರ್ಭದಲ್ಲಿ ಭದ್ರಬಾಹು ಮುನಿಗಳು ತಮ್ಮ ಮುನಿ ಸಂಘ ಹಾಗೂ ಮೌರ್ಯ ದೊರೆ ಚಂದ್ರಗುಪ್ತನ ಜತೆಗೆ ಕ್ರಿ.ಪೂ. ಮೂರನೇ ಶತಮಾನದಲ್ಲಿ ಬೆಳಗೊಳಕ್ಕೆ ಬಂದರು. ಆಗ ಈ ಬೆಟ್ಟ ನಿರ್ಜನವಾಗಿತ್ತು. ಸುತ್ತಲೂ ದಟ್ಟ ಕಾಡು, ಕ್ರೂರ ಮೃಗಗಳು ಮಾತ್ರ ಇದ್ದವು. ಬೆಟ್ಟದ ಮೇಲೆ ತಪಸ್ಸು ಮಾಡಲು ಪ್ರಶಸ್ತ ಜಾಗಗಳು ಇದ್ದುವು. ಕ್ರಿ.ಶ. 7ನೇ ಶತಮಾನದಿಂದ ಚಿಕ್ಕಬೆಟ್ಟವು ಸಮಾಧಿ ಅಥವಾ ಇಚ್ಛಾ ಮರಣಕ್ಕೆ ಮುಖ್ಯ ತಾಣವಾಯಿತು. ಅದಕ್ಕಾಗಿಯೇ ಇದಕ್ಕೆ ಸಮಾಧಿ ಬೆಟ್ಟ ಎಂಬ ಹೆಸರು ಬಂತು. ಅದನ್ನೇ ಕಟವಪ್ರ ಎಂದು ಕರೆಯಲಾಗುತ್ತದೆ. ಬೆಳಗೊಳದಲ್ಲಿ ಶ್ರಮಣರ ಸಮಾಧಿಗಾಗಿ ನಿರ್ಮಿಸಿದ ಸ್ಮಾರಕಗಳ ಪೈಕಿ 92 ಸ್ಮಾರಕಗಳು ಚಿಕ್ಕ ಬೆಟ್ಟದ ಮೇಲೆಯೇ ಇವೆ.





ಶೆಟ್ಟರ್ ಅವರ ಪ್ರಕಾರ, 9-10ನೇ ಶತಮಾನದಲ್ಲಿ ಚಿಕ್ಕ ಬೆಟ್ಟವು ತನ್ನ ಸ್ವರೂಪ ಬದಲಿಸಿಕೊಂಡು ತೀರ್ಥಕ್ಷೇತ್ರದ ಸ್ವರೂಪ ಪಡೆದುಕೊಂಡಿತು. ಕ್ರಿ. ಶ. 980ರಲ್ಲಿ ಚಾವುಂಡರಾಯ ಬಸದಿ ಇಲ್ಲಿ ನಿರ್ಮಾಣಗೊಂಡಿತು. ಚಿಕ್ಕಬೆಟ್ಟದ ಮೇಲೆ ಈಗ ನಾವು ಕಾಣುತ್ತಿರುವ ಬಸದಿ ಮತ್ತು ಇತರ ಕಟ್ಟಡಗಳು 12ನೇ ಶತಮಾನದ ಮಧ್ಯಭಾಗದಲ್ಲಿ ನಿರ್ಮಾಣಗೊಂಡುವು. ಗಂಗರಾಜರು, ಅವರ ಕುಟುಂಬ ವರ್ಗದವರು, ನಾಟ್ಯರಾಣಿ ಶಾಂತಲೆ, ಅವಳ ತಾಯಿ, ಅನೇಕ ಅಧಿಕಾರಿಗಳು, ವರ್ತಕರು ಇಲ್ಲಿ ಬಸದಿ ಮತ್ತು ನಿಷಿಧಿ ಕಲ್ಲುಗಳನ್ನು ಕಟ್ಟಿಸಿದರು. ನಿಷಿಧಿಗಳು ಎಂದರೆ ಮುನಿಗಳು ಸಮಾಧಿ ಮರಣ ಹೊಂದಿದ ನಂತರ ಅವರ ಅಂತ್ಯಸಂಸ್ಕಾರ ಮಾಡಿದ ಜಾಗದಲ್ಲಿ ನಿರ್ಮಿಸಿದ ಸ್ಮಾರಕಗಳು. ವಿಚಿತ್ರ ಎಂದರೆ ಒಂದು ಕಾಲದಲ್ಲಿ ಶ್ರಮಣರಿಂದ ತುಂಬಿ ತುಳುಕುತ್ತಿದ್ದ ಈ ಬೆಟ್ಟದ ಮೇಲೆ ಜನವಸತಿ ಹೆಚ್ಚಿದಂತೆ, ಸಲ್ಲೇಖನ ವ್ರತಧಾರಣೆ ಕಡಿಮೆಯಾಯಿತು. ಐತಿಹಾಸಿಕ ಘಟನೆಗಳು ಕಡಿಮೆಯಾದಂತೆ ಶಾಸನಗಳ ಸಂಖ್ಯೆಯೂ ಕಡಿಮೆಯಾಯಿತು. 13ನೇ ಶತಮಾನದ ನಂತರ ಇಲ್ಲಿ ಯಾವುದೇ ಕಟ್ಟಡ ನಿರ್ಮಾಣ ಕಾರ್ಯ ನಡೆದಿಲ್ಲ. ಆ ಕಾಲಘಟ್ಟ ಒಂದು ರೀತಿಯಲ್ಲಿ ಜೈನ ಧರ್ಮದ ಪ್ರಭಾವ ಕಡಿಮೆ ಆಗುತ್ತ ನಡೆದ ಕಾಲ ಎಂದೇ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ಅನ್ಯ ಧರ್ಮಗಳ ಪ್ರಭಾವ ಹೆಚ್ಚಾದುದು, ಜೈನ ಧರ್ಮಕ್ಕೆ ರಾಜ್ಯಾಶ್ರಯ ತಪ್ಪಿದ್ದು ಮುಖ್ಯ ಕಾರಣ. ಹೊಯ್ಸಳ ದೊರೆ

ಬಿಟ್ಟಿದೇವನು ಮೊದಲು ಜೈನನಾಗಿದ್ದನು. ಅವರು ವೈಷ್ಣವ ಧರ್ಮ ಸ್ವೀಕರಿಸಿ ವಿಷ್ಣುವರ್ಧನ ಆಗುವುದರೊಂದಿಗೆ ಜೈನ ಧರ್ಮದ ಪ್ರಭಾವ ಕಡಿಮೆ ಆಗುತ್ತ ಹೋಯಿತು.



**ಭದ್ರಬಾಹು ಗುಹೆ :**

ಚಿಕ್ಕಬೆಟ್ಟಕ್ಕೆಹೋಗುವ ಮೆಟ್ಟಿಲುಗಳನ್ನು ಏರಿ ದೇವಸ್ಥಾನಗಳಿರುವ ಆವರಣವನ್ನು ಕೋಟೆಯ ಪ್ರವೇಶಿಸುವುದಕ್ಕಿಂತ ಮುಂಚೆ ಬಲ ಬದಿಯಲ್ಲಿ ಭದ್ರಬಾಹು ಮುನಿಯ ಗುಹೆ ಇದೆ. ಈಗ ಅದರ ಮುಂದೆ ಇರುವ ಮಂಟಪ ಹೊಸದಾಗಿ ನಿರ್ಮಿಸಿದ್ದು ಎಂದು ಇತಿಹಾಸಕಾರರು ಭಾವಿಸಿದ್ದಾರೆ. ಆದರೆ, ಈ ಗುಹೆಯಲ್ಲಿಯೇ ಮುನಿ ತಪಸ್ಸು ಮಾಡಿ, ಸಲ್ಲೇಖನ ವ್ರತವನ್ನೂ ಆಚರಿಸಿದರು ಎಂದು ನಂಬಲಾಗಿದೆ. ಈ ಗುಹೆಯ ಒಳಗೆ ಮುನಿಯ ಪಾದಗಳನ್ನು



ಅರಳಿದ ಕಮಲದ ನಡುವೆ ಕೆತ್ತಲಾಗಿದೆ. ಇದು ನಂತರದ ಕಾಲದಲ್ಲಿ ಶಿಲ್ಪಿಯೊಬ್ಬ ಮಾಡಿದ್ದಾದರೂ ಭದ್ರಬಾಹು ಮುನಿ ಬೆಟ್ಟಕ್ಕೆ ಬಂದ ಬಗೆಗೆ ಬೆಟ್ಟದ ಮೇಲೆಯೇ ಅನೇಕ ಶಾಸನಾಧಾರಿತ ದಾಖಲೆಗಳು ಇವೆ. ಚಿಕ್ಕಬೆಟ್ಟವು 'ಕವಿ ರನ್ನನ ಹಸ್ತಾಕ್ಷರ' ಎಂದೇ ಹೆಸರಾಗಿರುವ ಕವಿರತ್ನ ಬಿರುದಿನ ಶಾಸನ ಮತ್ತು ಚಾವುಂಡರಾಯ ಬಸದಿಗೆ ಹೆಸರುವಾಸಿಯಾಗಿದೆ.

ರನ್ನನ ಹಸ್ತಾಕ್ಷರವು ಚಾವುಂಡರಾಯ ಬಸದಿಯ ಪಕ್ಕದಲ್ಲಿಯೇ ಇದ್ದು ಆ ಮಹಾಕವಿ ಈ ಕ್ಷೇತ್ರಕ್ಕೆ ಬಂದ ಕುರುಹು ಆಗಿದೆ. "ಗದಾಯುದ್ಧ' ಹಾಗೂ 'ಅಜಿತ ಪುರಾಣ' ಬರೆದ ಕವಿ ರನ್ನ ಕೆಲಕಾಲ ಚಾವುಂಡರಾಯನ ಆಶ್ರಯದಲ್ಲಿ ಇದ್ದ. ಚಾವುಂಡರಾಯನ ಬಸದಿಯನ್ನು ಚಾವುಂಡರಾಯನೇ ನಿರ್ಮಿಸಿರಬಹುದು ಇಲ್ಲವೇ ಅವನ ಗೌರವಾರ್ಥ ನಿರ್ಮಿಸಿರಬಹುದು. 10ನೇ ಶತಮಾನದ ಗಂಗರ ವಾಸ್ತು ಶಿಲ್ಪಕ್ಕೆ ಇದು ಒಳ್ಳೆಯ ಮಾದರಿ.

ಈ ದೇವಾಲಯದ ಕುಂಬಿಯ ಮೇಲಿನ ಉಬ್ಬು ಶಿಲ್ಪಗಳಲ್ಲಿ ನಸುನಗುತ್ತಿರುವ ಕನ್ಯೆಯೊಬ್ಬಳ ಮುಖದಲ್ಲಿನ ಮುಗ್ಧನಗೆ ಮತ್ತು ಅದರಿಂದ ಹೊರ ಹೊಮ್ಮುವ ಆನಂದವನ್ನು ಕಂಡಾಗ ಮೊನಾಲೀಸಾ ಒಬ್ಬಳೇ ಮುಗುಳ್ನಗೆಗೆ ಹೆಸರುವಾಸಿಯಲ್ಲ ಅನಿಸುತ್ತದೆ ಎಂದು ಶೆಟ್ಟರ್ ಬರೆಯುತ್ತಾರೆ. ಜತೆಗೆ ಚಾವುಂಡರಾಯ ಮತ್ತು ಆತನ ಪತ್ನಿ ಅಜಿತಾದೇವಿಯ ಉಬ್ಬು ಶಿಲ್ಪಗಳೂ ಈ ಬಸದಿಯ ಮೇಲೆ ಇವೆ. ರನ್ನನ ರುಜುವಿನಿಂದಾಗಿ ಶ್ರವಣಬೆಳಗೊಳವು ಕೇವಲ ಧಾರ್ಮಿಕ ಮತ್ತು ಶಿಲ್ಪಕಲೆ ದೃಷ್ಟಿಯಿಂದ ಮಾತ್ರ ಮಹತ್ವದ ತಾಣ ಎನಿಸದೆ ಕವಿಗಳನ್ನೂ ಆಕರ್ಷಿಸುತ್ತಿತ್ತು ಎಂದು ಗೊತ್ತಾಗುತ್ತದೆ. ಬಹುಶಃ ರನ್ನ ಕವಿ ಮೊದಲ ಮಹಾಮಸ್ತಕಾಭಿಷೇಕದ ಸಮಯದಲ್ಲಿ ಬೆಳಗೊಳಕ್ಕೆ ಬಂದಿರಬೇಕು ಎಂದೂ ಊಹಿಸಲಾಗುತ್ತಿದೆ.



ಈ ಬಸದಿಯ ಒಳಭಾಗದಿಂದ ಚಿಕ್ಕ ಚಿಕ್ಕ ಮೆಟ್ಟಿಲು ಹತ್ತಿ ಗೋಪುರದ ಬಳಿ ಹೋದರೆ ಚಾವುಂಡರಾಯನ ಮಗ ಜಿನದೇವಣ್ಣ, ಪ್ರತಿಷ್ಠಾಪಿಸಿದ ಪಾರ್ಶ್ವನಾಥ ಬಿಂಬವನ್ನು ನೋಡಬಹುದು.

ಇವು ಎರಡು ಮುಖ್ಯ ಉದಾಹರಣೆಗಳು ಮಾತ್ರ ಆದರೆ, ಈಗ ಚಿಕ್ಕಬೆಟ್ಟದ ಮೇಲೆ ಹತ್ತಾರು ಬಸದಿಗಳು ಇವೆ. ನಾಟ್ಯರಾಣಿ ಶಾಂತಲೆ ಕಟ್ಟಿಸಿದ ಸವತಿ ಗಂಧವಾರಣ ಬಸದಿ ಇದೆ. ಅಲ್ಲಿಯೇ ಇರುವ

ಈ ಶಾಸನಗಳ ಮೂಲಕ ಗಂಗ, ರಾಷ್ಟ್ರಕೂಟ, ಹೊಯ್ಸಳ ರಾಜವಂಶಗಳ ಸ್ಥಾಪನೆ, ಬೆಳವಣಿಗೆ, ಉತ್ಥಾನ; ವಿಜಯನಗರ ಮತ್ತು ಮೈಸೂರಿನ ಒಡೆಯ ಸಾಮ್ರಾಜ್ಯದ ಹಿರಿಮೆ ಮಾತ್ರವಲ್ಲದೆ ಕನ್ನಡ ಲಿಪಿ, ಅದರ ಗಾತ್ರ, ಭಾಷೆ, ಸಾಹಿತ್ಯ ಮತ್ತು ಶೈಲಿಯಲ್ಲಿ ಆದ ಬೆಳವಣಿಗೆಯ ಬಗೆಗೂ ಈ ಶಾಸನಗಳು ಮಹತ್ವದ ಬೆಳಕು ಚೆಲ್ಲುತ್ತವೆ ಎಂದು ಹಂಪನಾ ಬರೆಯುತ್ತಾರೆ.



ಶಾಸನಗಳನ್ನು ಬಿಟ್ಟರೆ ಬೆಟ್ಟದ ಮೇಲಿನ ಎಂಟು ಮಂಟಪಗಳಿಗೂ ಚಂದ್ರಗಿರಿ ಪ್ರಸಿದ್ಧವಾಗಿದೆ. ಈ ಕೆಲವು

ಮಂಟಪಗಳ ಅಡಿಯಲ್ಲಿ ನಿಷಿಧಿ ಕಲ್ಲುಗಳನ್ನು ನಿಲ್ಲಿಸಲಾಗಿದೆ. ನಿಷಿಧಿ ಕಲ್ಲುಗಳನ್ನು ಸಲ್ಲೇಖನ ವ್ರತ ಕೈಗೊಂಡು ಮರಣ ಹೊಂದಿದ ಮುನಿ-ವ್ಯಕ್ತಿಗಳ ಸ್ಮರಣೆಗಾಗಿ ನಿಲ್ಲಿಸಲಾಗುತ್ತದೆ.

ಶಾಂತಿನಾಥ ಬಸದಿ ಬಳಿಯಲ್ಲಿ ಭಗ್ನಗೊಂಡಿರುವ ಭರತನ ವಿಗ್ರಹವಿದೆ. ತೊಡೆಯ ಭಾಗದಿಂದ ಉಳಿದ ಕೆಳಗಿನ ಭಾಗ ಭೂಮಿಯಲ್ಲಿಯೇ ಇದೆ. ದೊಡ್ಡ ಬೆಟ್ಟದ ಮೇಲೆ ಬಾಹುಬಲಿ ಮೂರ್ತಿಯನ್ನು ಹೇಗೆ ಕೆತ್ತಲಾಯಿತು ಎಂಬುದಕ್ಕೆ ಚಿಕ್ಕ ಬೆಟ್ಟದ ಮೇಲಿನ ಭರತನ ಕ್ರಿ.ಶ. ಈ ವಿಗ್ರಹ ಮಾದರಿ. ಇದನ್ನೂ ಕ್ರಿ.ಶ. 981ನೇ ಇಸವಿಯಲ್ಲಿಯೇ ಕೆತ್ತಲಾಯಿತು. ಈ ಶಿಲ್ಪದ ಶಿಲ್ಪಿ ಕೂಡ ಅರಿಷ್ಟನೇಮಿಯೇ ಇರಬೇಕು ಎಂದು ಹಂಪನಾ ಭಾವಿಸುತ್ತಾರೆ.

ಚಿಕ್ಕ ಬೆಟ್ಟದ ಮೇಲಿನ ಬಸದಿಗಳ ವಿಶೇಷ ಎಂದರೆ ಎಲ್ಲ ಬಸದಿಗಳಲ್ಲಿ ನಿತ್ಯ ಪೂಜೆ ಆಗುತ್ತದೆ. ನೈರ್ಮಲ್ಯವನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಈ ದಿಸೆಯಲ್ಲಿ ಸ್ವಸ್ತಿಶ್ರೀ ಜಗದ್ಗುರು ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯರ ಕಾಳಜಿ ಹಾಗೂ ಶ್ರವಣ ಬೆಳಗೊಳದ ಜೈನ ಮಠದ ಆಡಳಿತ ವರ್ಗದ ಶ್ರಮ ದೊಡ್ಡದು.



**ದೊಡ್ಡಬೆಟ್ಟ**

ದೊಡ್ಡ ಬೆಟ್ಟದ ಮೇಲೆ ನಿಂತಿರುವ ಬಾಹುಬಲಿ ಮೂರ್ತಿ ಮತ್ತು ಅದರ ವೈಶಿಷ್ಟ್ಯದ ಬಗೆಗೆ ಈ ಪುಸ್ತಕದಲ್ಲಿ ಪ್ರತ್ಯೇಕ ಅಧ್ಯಾಯವೇ ಇದೆ. ಅದು ಬಿಟ್ಟರೂ ದೊಡ್ಡ ಬೆಟ್ಟದ ಮೇಲಿನ ಒದೆಗಲ್ ಬಸದಿ ಮತ್ತು ತ್ಯಾಗದ ಕಂಬ, ಅಖಂಡ ಬಾಗಿಲು, ಅದರ ಮೇಲಿನ ಪಟ್ಟಿಕೆಗಳು, ತೋರಣಗಳು ಶಿಲ್ಪಕಲೆಯ ದೃಷ್ಟಿಯಿಂದ ವಿಶೇಷವಾದುವು.

ಬೆಟ್ಟದ ಮೇಲೆ ಏರಿ ಮೊದಲ ಬಾಗಿಲನ್ನು ದಾಟಿ ವಿರಮಿಸುತ್ತಿದ್ದಂತೆಯೇ ಒದೆಗಲ್ ಬಸದಿ ಎದುರಾಗುತ್ತದೆ. ತುಂಬ ಎತ್ತರದಲ್ಲಿ ಇಳಿಜಾರಾದ ಬೆಟ್ಟದ ಮೇಲೆ ನಿರ್ಮಿಸಿರುವ ಈ ಬಸದಿಯ ಕೆಳಗೋಡೆಯ ಸುತ್ತಲೂ ಕೊರೆದ ಕಂಬಗಳನ್ನು ಆನಿಕೆಗಳ ಹಾಗೆ ನಿಲ್ಲಿಸಲಾಗಿದೆ. ಬಸದಿ ನಿರ್ಮಾಣಕ್ಕೆ ಬಳಸಿದ ಕಲ್ಲುಗಳ ಗಾತ್ರವೂ ಅಗಾಧವಾಗಿದೆ. ತ್ರಿಕೂಟ ಮಾದರಿಯ ಈ ಬಸದಿಯ ಹೊರಗೋಡೆಗಳಲ್ಲಿ ಯಾವುದೇ ಕೆತ್ತನೆಗಳು ಇಲ್ಲ. 14ನೇ ಶತಮಾನದ ಈ ಬಸದಿಯ ಮೂಲ ವಿಗ್ರಹ ಮೊದಲ ತೀರ್ಥಂಕರ ಆದಿನಾಥ ಸ್ವಾಮಿ. ಆತನ ಎರಡೂ ಬದಿಯ ಗರ್ಭಗುಡಿಯಲ್ಲಿ ಶಾಂತಿನಾಥ ಮತ್ತು ನೇಮಿನಾಥ ತೀರ್ಥಂಕರರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದೇ ಬಗೆಯ ದೊಡ್ಡ ಕಲ್ಲುಗಳನ್ನು ಇಟ್ಟು ಅಖಂಡ ಬಾಗಿಲಿನ ನಂತರದ ಕೋಟೆಯನ್ನೂ ನಿರ್ಮಿಸಲಾಗಿದೆ. ಈ ಕಲ್ಲುಗಳನ್ನು ಜೋಡಿಸಲು ಯಾವುದೇ ಗಾರೆ ಬಳಸಿದ ಪುರಾವೆ ಈಗ ಸಿಗುವುದಿಲ್ಲ. ಒರೆಗಲ್ ಬಸದಿಯ ಪಶ್ಚಿಮಕ್ಕೆ ಇರುವ ತ್ಯಾಗದ ಕಂಬದ ಬಳಿ ನಿಂತುಕೊಂಡು ಚಾವುಂಡರಾಯ ದಾನ ಮಾಡುತ್ತಿದ್ದ ಎಂದು ನಂಬಲಾಗಿದೆ. ಈ ಕಂಬವನ್ನು ದಾಟಿ ಎತ್ತರದ



ಮೆಟ್ಟಿಲುಗಳನ್ನು ಏರಿದರೆ ಅಖಂಡ ಬಾಗಿಲು ಬರುತ್ತದೆ. ಬೆಟ್ಟದ ಮೇಲೆ ಹತ್ತಲು ತ್ಯಾಗದ ಕಂಬದ ಬಳಿಯಿಂದಲೇ ಎತ್ತರದ ಮೆಟ್ಟಿಲುಗಳೂ ಪ್ರಾರಂಭವಾಗುತ್ತವೆ. ಆದರೆ, ಈ ಬಾಗಿಲು 'ಅಖಂಡವಲ್ಲ ಎಂದು ಡಾ.ಶೆಟ್ಟರ್ ಹೇಳುತ್ತಾರೆ. ಈ ಬಾಗಿಲ ಪಕ್ಕದಲ್ಲಿನ ಬಾಹುಬಲಿ ಮತ್ತು ಭರತನ ವಿಗ್ರಹಗಳು ಮಾತ್ರ ಅಖಂಡವಾಗಿವೆ. ಬಾಹುಬಲಿಯ ವಿಗ್ರಹದ ಪಕ್ಕದಲ್ಲಿಯ ಎತ್ತರದ ಕಲ್ಲಿನ ಮೇಲೆ ಸಿದ್ಧರ ಪುಟ್ಟ-ಪುಟ್ಟ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಅಖಂಡ ಬಾಗಿಲಿನ ಮೇಲೆ ನಿರ್ಮಿಸಿರುವ ಗಜಲಕ್ಷ್ಮಿಯ ಉಬ್ಬುಶಿಲ್ಪ ಇಡೀ ದೇಶದಲ್ಲಿ ಅತಿ ದೊಡ್ಡವಾದ (ಬಾಗಿಲುವಾಡದ ಮೇಲಿನ) ಶಿಲ್ಪ ಎಂದು ಶೆಟ್ಟ ಬಣ್ಣಿಸುತ್ತಾರೆ. ಗಜಲಕ್ಷ್ಮಿಯ ಅಕ್ಕಪಕ್ಕದಲ್ಲಿ ಎರಡು ಆನೆಗಳು ಸೊಂಡಿಲಲ್ಲಿ ಕಳಶ ಹಿಡಿದುಕೊಂಡು ಆಕೆಗೆ ಅಭಿಷೇಕ ಮಾಡುವ ದೃಶ್ಯವನ್ನು ಈ ಪಟ್ಟಿಕೆ ಒಳಗೊಂಡಿದೆ.

**ಭಂಡಾರಿ ಬಸದಿ :**

ಶ್ರವಣಬೆಳಗೊಳದ ಅತ್ಯಂತ ದೊಡ್ಡ ಜೈನ ಬಸದಿಗಳಲ್ಲಿ ಭಂಡಾರಿ ಬಸದಿಯೂ ಒಂದು, ಹೊಯ್ಸಳರ ಒಂದನೇ ದೊರೆ ನರಸಿಂಹನ ಭಂಡಾರಿಯಾಗಿದ್ದ ಹುಳ್ಳನು 12ನೇ ಶತಮಾನದ ಮಧ್ಯಭಾಗದಲ್ಲಿ ಈ ಬಸದಿಯನ್ನು ಕಟ್ಟಿಸಿದ. ಈ ಬಸದಿಯ ಗರ್ಭಗುಡಿಯಲ್ಲಿ ಸಾಲಾಗಿ ನಿಂತ 24 ತೀರ್ಥಂಕರರ ವಿಗ್ರಹಗಳಿಂದಾಗಿ ಇದಕ್ಕೆ ಚವೀಸ ತೀರ್ಥಂಕರ ಬಸದಿ ಎಂಬ ಹೆಸರೂ ಬಂದಿದೆ. ವಿಜಯನಗರ ಅರಸರ ಕಾಲದಲ್ಲಿ ಈ ಬಸದಿಗೆ ಮೊಗಸಾಲೆ ಮತ್ತು ವಿಶಾಲ ರಂಗಮಂಟಪ, ಮಹಾದ್ವಾರವುಳ್ಳ ಪ್ರಾಕಾರವನ್ನು ಸೇರಿಸಲಾಯಿತು.






'ಜೈನ ವೈಷ್ಣವರ ನಡುವೆ ಇದ್ದ ವಿರಸ ಕಡಿಮೆ ಮಾಡಿದ ದೊರೆ ಬುಕ್ಕರಾಯನ ಪ್ರಸಿದ್ಧ ಶಾಸನವೂ ಈ ಬಸದಿಯಲ್ಲಿಯೇ ಇದೆ. ಈ ಬಸದಿಯ ಸಭಾ ಮಂಟಪ ಎಷ್ಟು ದೊಡ್ಡದು ಇದೆ ಎಂದರೆ ಮುನಿಗಳ ಪ್ರವಚನ ಅಲ್ಲಿಯೇ ನಡೆಯುತ್ತದೆ. ಈ ಸಾರಿಯ ಅಂದರೆ 2018ರ ಮಹಾಮಸ್ತಕಾಬಿಷೇಕವನ್ನು ನೆಪವಾಗಿ ಇಟ್ಟುಕೊಂಡು ಈ ಬಸದಿಯ ಆವರಣದ ಗೋಡೆಯನ್ನು ಹಾಗೂ ಮೇಲು ಛಾವಣಿಯನ್ನು ಸಂಪೂರ್ಣವಾಗಿ ನವೀಕರಣ ಮಾಡಲಾಗಿದೆ. ವಿಂಧ್ಯಗಿರಿ ಬೆಟ್ಟದ ಮೇಲೆ ಹತ್ತುವಾಗ ಮೊದಲ ಕಮಾನಿನ ಬಳಿ ನಿಂತು ನೀವು ಹಿಂತಿರುಗಿ ಜೈನ ಮಠದ ಕಡೆಗೆ ನೋಡಿದರೆ ನವೀಕರಣಗೊಂಡ ಭಂಡಾರಿ ಬಸದಿಯ ಮೇಲು ಛಾವಣಿ ನಿಮಗೆ ಗೋಚರಿಸುತ್ತದೆ.

ಭಂಡಾರಿ ಬಸದಿಯ ಪರಿಸರದಲ್ಲಿನ ಶಾಂತೀಶ್ವರ ಬಸದಿ, ಅಕ್ಕನ ಬಸದಿ ಮತ್ತು ಮಾಂಗಾಯಿ ಬಸದಿಗಳೂ ಶಿಲ್ಪಕಲೆಯ ದೃಷ್ಟಿಯಿಂದ ಮಹತ್ವದವು. ಭಂಡಾರಿ ಬಸದಿಯ ಪಕ್ಕದಲ್ಲಿಯೇ ಜೈನ ಮಠ ಮತ್ತು ಚಂದ್ರಪ್ರಭ ಬಸದಿಗಳು ಇವೆ. ಈ ಬಸದಿಯ ಒಳಗೋಡೆಗಳ ಮೇಲೆ ಅತ್ಯಂತ ಅಪರೂಪದ ಗೋಡೆ ಚಿತ್ರಗಳು ಇವೆ. ಇವು ಹಂಪಿಯ ಲೇಪಾಕ್ಷಿ ಚಿತ್ರಗಳನ್ನು ಹೋಲುತ್ತವೆ ಎಂದು ಇತಿಹಾಸಕಾರರು ಹೇಳುತ್ತಾರೆ. ಜೈನ ಧರ್ಮಕ್ಕೆ ಸಂಬಂಧಿಸಿದ ವಿವಿಧ ಸನ್ನಿವೇಶಗಳನ್ನು ಈ ಗೋಡೆ ಚಿತ್ರಗಳಲ್ಲಿ ಚಿತ್ರಿಸಲಾಗಿದೆ.

ಒಂದು ಸಾರಿ ಶ್ರವಣಬೆಳಗೊಳ ಮತ್ತು ಪರಿಸರವನ್ನು ಸುತ್ತಿ ಬಂದು ಅದರ ಐತಿಹಾಸಿಕತೆ, ಪೌರಾಣಿಕತೆ, ಪರಂಪರೆಯನ್ನು ಒಂದು ಕ್ಷಣ ಧ್ಯಾನಿಸಿದರೆ, ಖ್ಯಾತ ವಿದ್ಯಾಂಸ ಡಾ.ಎಂ.ಚಿದಾನಂದಮೂರ್ತಿ ಅವರ ಮಾತುಗಳು ನೆನಪಿಗೆ ಬರುತ್ತವೆ :

.... ಶ್ರವಣಬೆಳಗೊಳವು ಪ್ರಾಚೀನ ಕರ್ನಾಟಕದ ಒಂದು ಸಂಸ್ಕೃತಿ ಕೇಂದ್ರವಾಗಿ ಕಾಣಿಸುವುದು ಮಾತ್ರವಲ್ಲದೆ ಕರ್ನಾಟಕದ ನಿರಂತರ ಇತಿಹಾಸವಿರುವ ಏಕೈಕ ಸಾಂಸ್ಕೃತಿಕ ಕೇಂದ್ರವಾಗಿಯೂ ನಮ್ಮ ಮುಂದೆ ನಿಲ್ಲುತ್ತದೆ. ಕರ್ನಾಟಕದ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳಲ್ಲಿ ಎರಡೇ ಗಮನಾರ್ಹವಾದುವು; ಕ್ರಿ.ಪೂ ಮೂರನೇ ಶತಮಾನದಿಂದ ಬೌದ್ಧ ಕೇಂದ್ರವಾಗಿದ್ದ ಬನವಾಸಿ. ಆ ಕಾಲಕ್ಕೋ ಅಥವಾ ಒಂದು ಶತಮಾನದ ಈಚೆಗೆ ಜೈನ ಕೇಂದ್ರವಾದ ಶ್ರವಣಬೆಳಗೊಳ, ಉಳಿದುವೆಲ್ಲ ಕಾಲದ ದೃಷ್ಟಿಯಿಂದ ಈಚಿನವು. ಅವುಗಳಲ್ಲಿ ಎಷ್ಟೋ ಬಹು ಹಿಂದೆಯೇ ತಮ್ಮ ಮಹತ್ವವನ್ನು ಕಳೆದುಕೊಂಡವು. ಬನವಾಸಿ ಕೂಡ. ಆದರೆ, ಕಳೆದ ಎರಡು ಸಾವಿರ ಇನ್ನೂರು ವರ್ಷಗಳಿಂದ ನಿರಂತರವಾಗಿ ಮತ್ತು ಚೈತನ್ಯ ಪೂರ್ಣವಾಗಿ ಕ್ರಿಯಾತ್ಮಕತೆಯನ್ನು ಉಳಿಸಿಕೊಂಡು ಬಂದಿರುವುದು ಬೆಳಗೊಳದ ವೈಶಿಷ್ಟ್ಯ. ಈ ಪ್ರಶಸ್ತಿ ಕರ್ನಾಟಕದ ಇನ್ನು ಯಾವುದೇ ಸಾಂಸ್ಕೃತಿಕ ಕೇಂದ್ರಕ್ಕೂ ಇರುವಂತೆ ಕಾಣದು.


ಉತ್ತಮ ಕಲೆಯ ಜೊತೆಗೆ ಪ್ರಬಲ ಧರ್ಮವೊಂದರ ಸಂಗಮವಾದಾಗ ಒಂದು ಸಾಂಸ್ಕೃತಿಕ ಕೇಂದ್ರ ತನ್ನ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಂಡು ಬರಲು ಸಾಧ್ಯ. ಕೊಪ್ಪಣ (ಈಗಿನ ಕೊಪ್ಪಳ) ಒಂದು ದೊಡ್ಡ ಜೈನ ಕೇಂದ್ರವಾದರೂ ಅದಕ್ಕೆ ಕಲೆಯ ಬೆಂಬಲ ದೊರಕಲಿಲ್ಲ.

'ಶ್ರೇಷ್ಠ ಕಲೆ ಮತ್ತು ಧರ್ಮಗಳೆರಡೂ ಎಲ್ಲ ಬಗೆಯ ಜನರನ್ನು ತಮ್ಮತ್ತ ಸೆಳೆಯುವುದರಿಂದ ಅಲ್ಲಿ ಒಂದು ಸಮೃದ್ಧ ಸಂಸ್ಕೃತಿ ರೂಪುಗೊಳ್ಳಲು ಕಾರಣವಾಗುತ್ತದೆ. ಚಿಕ್ಕ ಬೆಟ್ಟ ಮುಖ್ಯವಾಗಿ ಧರ್ಮಕ್ಕೆ, ದೊಡ್ಡ ಬೆಟ್ಟ ಮುಖ್ಯವಾಗಿ ಕಲೆಗೆ ಆಕರಗಳಾಗಿ, ಅವೆರಡೂ ಸೇರಿ ಶ್ರವಣಬೆಳಗೊಳ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದುದರ ಒಂದು ರೋಮಾಂಚ ಕಥೆ ನಮ್ಮ ಮುಂದೆ ಸುರುಳಿ ಬಿಚ್ಚಿಕೊಳ್ಳುತ್ತದೆ.

"ಶ್ರವಣಬೆಳಗೊಳ ಕರ್ನಾಟಕ ಸಂಸ್ಕೃತಿಯ ಸಂಕ್ಷಿಪ್ತಾಕೃತಿ. ಕರ್ನಾಟಕ ಸಂಸ್ಕೃತಿಯ ಉತ್ತಮಾಂಶಗಳನ್ನು ಒಂದು ಕಡೆ ಕಾಣಬೇಕು ಎಂದು ಬಯಸುವವರಿಗೆ ಇದರಂಥ ಮತ್ತೊಂದು ಸ್ಥಳ ದೊರಕಲಾರದು. ಕ್ರಿ.ಶ. 6ನೇ ಶತಮಾನದಿಂದ ಇಲ್ಲಿಯ ವರೆಗೆ ಕನ್ನಡ ಲಿಪಿ, ಭಾಷೆಗಳ ನಿರಂತರ ಬೆಳವಣಿಗೆ ನೋಡದೊರಕುವ ಏಕೈಕ ಪ್ರದೇಶ ಇದು. ಕ್ರಿ.ಶ. ಸುಮಾರು 550ರ ತಮಟಕಲ್ಲು ಶಾಸನ ಬಿಟ್ಟರೆ, ಮೊತ್ತ ಮೊದಲ ಉತ್ಕೃಷ್ಟ ಕಾವ್ಯವಾಗಲಿ, ಪದ್ಯಗಳಾಗಲಿ

ದೊರಕುವುದು ಇಲ್ಲಿಯೇ, ಮತ್ತು ಉದ್ದಕ್ಕೂ ಶಿವಕೋಟ್ಯಾಚಾರ, ಪಂಪ, ರನ್ನ, ಚಾವುಂಡರಾಯ, ಬೊಪ್ಪಣರಂತಹ ಶ್ರೇಷ್ಠ ಕವಿಗಳಿಗೆ ಅದು ಸ್ಫೂರ್ತಿಸ್ಥಾನವೂ ಆಗಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯಕ ಪರಂಪರೆಗಳ ಜೊತೆ ಅದಕ್ಕಿದ್ದ ಸಂಬಂಧ ಗಮನಾರ್ಹ. ರಾಷ್ಟ್ರಕೂಟ, ಗಂಗ, ಹೊಯ್ಸಳ, ವಿಜಯನಗರ ಹಾಗೂ ಮೈಸೂರುಗಳಂತಹ ಕರ್ನಾಟಕದ ಬಹುತೇಕ ಎಲ್ಲ ರಾಜವಂಶಗಳವರು ಶ್ರವಣಬೆಳಗೊಳವನ್ನು ಬೆಳಸಲು ಯತ್ನಿಸಿದ್ದಾರೆ. ಅದು ದೊಡ್ಡ ವಿದ್ಯಾ ಕೇಂದ್ರ; ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆಗಳ ಬೀಡು. ಇಂದ್ರರಾಜ ಚಾವುಂಡರಾಯ, ಅತ್ತಿಮಬ್ಬೆ, ಗಂಗರಾಜ, ಹುಳ್ಳ, ವಿಷ್ಣುವರ್ಧನ, ಶಾಂತಲೆಯರಂತಹ ವ್ಯಕ್ತಿಗಳು ಅದರ ಆಶ್ರಯದಲ್ಲಿ ತಮ್ಮ ಜೀವನ ಸಾಫಲ್ಯವನ್ನು ಕಂಡರು, ತೀರ್ಥಂಕರನಲ್ಲದಿದ್ದರೂ, ಮನುಷ್ಯನ ಅಸೀಮವಾದ ತ್ಯಾಗಕ್ಕೆ ಸಂಕೇತವಾಗಿರುವ ಗೊಮ್ಮಟನನ್ನು ತನ್ನ ತಲೆಯಲ್ಲಿ ಮುಡಿಯಿತು. ಪ್ರಮುಖವಾಗಿ ಜೈನ ಕೇಂದ್ರವಾದರೂ ಇತರ ಧರ್ಮಗಳಿಗೆ ಭೇದವಿಲ್ಲ ಎಂದು ಘೋಷಿಸಿದ ಬುಕ್ಕ ಚಕ್ರವರ್ತಿಯ ಶಾಸನವಿರುವುದೂ (ಭಂಡಾರಿ ಬಸದಿ) ಅಲ್ಲಿಯೇ. ಇದೆಲ್ಲದರ ಜೊತೆಗೆ ಅಲ್ಲಿಯ ಪ್ರಕೃತಿ ಸೌಂದರ್ಯ; ಸುತ್ತಮುತ್ತಣ ನೂರಾರು ಕೆರೆಗಳು, ಒಳ್ಳೆಯ ಮಳೆಯಿಂದಾಗಿ ಜನರ ಆರ್ಥಿಕ ಸ್ಥಿತಿ ಉತ್ತಮ. ಈ ಎಲ್ಲಾ ಅನುಕೂಲಗಳು ಕರ್ನಾಟಕದ ಇನ್ನಾವುದೇ ಸಾಂಸ್ಕೃತಿಕ ಕೇಂದ್ರಕ್ಕೂ ಒದಗಿಲ್ಲ ಎಂಬುದನ್ನು ನೆನೆದರೆ, ಕರ್ನಾಟಕ ಯಾವ ಮೌಲ್ಯಾದರ್ಶಗಳಿಗೆ ಮೊದಲಿನಿಂದ ತುಡಿದಿದೆಯೋ ಅವೆಲ್ಲವುಗಳ ಏಕೈಕ ಸಾಕಾರ ರೂಪ ಶ್ರವಣಬೆಳಗೊಳವೆಂದು ಹೇಳುವ ಮನಸ್ಸಾಗುತ್ತದೆ. ಅದು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ.

(ಶ್ರವಣಬೆಳಗೊಳ : ಒಂದು ಸಮೀಕ್ಷೆ : ಬೆಂಗಳೂರು ವಿಶ್ವ ವಿದ್ಯಾಲಯ 1983).


ಭರತ ಬಾಹುಬಲಿಯ
ರೋಚಕ ಕಥಾನಕ

ಜೈನರ ಅತ್ಯಂತ ಪವಿತ್ರ ಯಾತ್ರಾ ಕ್ಷೇತ್ರಗಳಲ್ಲಿ ಶ್ರವಣಬೆಳಗೊಳಕ್ಕೆ ಅಗ್ರಸ್ಥಾನ. ಅಲ್ಲಿರುವ ಬಾಹುಬಲಿ ಮೂರ್ತಿ ದಿವ್ಯವಾದುದು. ಮಗುವಿನಂತೆ ಮುಗ್ಧವಾದುದು. ಬೆಳಗೊಳದ ವಿಂಧ್ಯಗಿರಿ ಬೆಟ್ಟದ ಮೇಲೆ ನಿಂತಿರುವ 58 ಅಡಿ ಎತ್ತರದ ಬಾಹುಬಲಿ ವಿಗ್ರಹ ಇಡೀ ವಿಶ್ವದಲ್ಲಿಯೇ ದೊಡ್ಡದಾದ ಏಕಶಿಲೆಯ ಮೂರ್ತಿ.

ಬಾಹುಬಲಿ ತೀರ್ಥಂಕರನೇನೂ ಅಲ್ಲ. ಹಾಗಾದರೆ ಆತನಿಗೇಕೆ ಇಷ್ಟು ದೊಡ್ಡ ವಿಗ್ರಹ ಎಂಬ ಕುತೂಹಲ ಸಹಜ. ಆದರೆ, ಜೈನರ ಪ್ರಕಾರ ಬಾಹುಬಲಿ ಮೊದಲ ಮೋಕ್ಷಗಾಮಿ. ಆತನ ತಂದೆ ಜೈನರ ಮೊದಲ ತೀರ್ಥಂಕರನಾದರೂ ಆತನಿಗಿಂತ ಮೊದಲು ಬಾಹುಬಲಿಗೆ ಮೋಕ್ಷ ಪ್ರಾಪ್ತಿಯಾಯಿತು. ಮೋಕ್ಷ ಏಕೆ ದೊಡ್ಡದು ಎಂದರೆ ಅದು ಈ ಭವದ ವೃತ್ತದಿಂದ ಸಿಕ್ಕ ವಿಮೋಚನೆ ಎಂಬ ಕಾರಣಕ್ಕಾಗಿ.

ಬಾಹುಬಲಿಯದು ರೋಚಕ ಕಥೆ, ಜೈನ ಸಾಹಿತ್ಯದಲ್ಲಿ ಅದಕ್ಕೆ ದೊಡ್ಡ ಪರಂಪರೆಯೇ ಇದೆ. ಈ ಕಥೆಯ ನೀತಿ 'ಅಹಿಂಸೆಯಿಂದ ಸುಖ ; ತ್ಯಾಗದಿಂದ ಶಾಂತಿ' ಎಂಬುದು. ಈ ಕಥೆ ಕಾಲಾತೀತವಾದುದು. ಅದರ ನೀತಿ ಕೂಡ. ಅದು ಬಾಹುಬಲಿಯ ಜೀವನ ಮತ್ತು ಚರಿತ್ರೆಯ ವಿಶೇಷ. ಯುದ್ಧ ಮತ್ತು ಹಿಂಸೆಯಿಂದ ತಸ್ತವಾಗಿರುವ ಜಗತ್ತಿಗೆ ಇದಕ್ಕಿಂತ ನೆಮ್ಮದಿಯ ಮುಲಾಮು ಬೇರೆ ಇರಲಾರದು.

ಜೈನರ ಮೊದಲ ತೀರ್ಥಂಕರ ವೃಷಭನಾಥ ಅಯೋಧ್ಯೆಯ ರಾಜ. ವೃಷಭನಾಥರು ಜೈನ ಧರ್ಮದ ಆದಿ ಪ್ರವರ್ತಕ. ಇವರ ಕಾಲದಲ್ಲಿಯೇ ಜನಜೀವನ ಒಂದು ಸುವ್ಯವಸ್ಥೆಗೆ ಬಂತು. ಅವರು ಜನರಿಗೆ ಲೋಕವ್ಯವಹಾರವನ್ನು ಕಲಿಸಿದರು. ಕೃಷಿ, ಅಸಿ (ಖಡ್ಗದ ಉಪಯೋಗ), ಮಷೀ (ಆಟ), ಶಿಲ್ಪ, ವಾಣಿಜ್ಯ ಹಾಗೂ ವಿದ್ಯೆಗಳನ್ನು ಕಲಿಸಿದವರೇ ಅವರು ಎಂದು ಜೈನರು ನಂಬುತ್ತಾರೆ. ಅವರಿಗೆ ಇಬ್ಬರು ಹೆಂಡಿರು, ಮೊದಲನೆಯವಳು ಯಶಸ್ವತಿ. ಮಿರ್ಜಿ ಅಣ್ಣಾರಾಯರು ತಮ್ಮ 'ಜೈನಧರ್ಮ' (ಪ್ರಕಾಶನ : ಶಾಂತಿ ಸೇವಾ ಸದನ ಸೇಡಬಾಳ, ಬೆಳಗಾವಿ ಜಿಲ್ಲೆ) ಎಂಬ ವಿದ್ವತ್ ಗ್ರಂಥದಲ್ಲಿ ಮೊದಲ ಹೆಂಡತಿಯ ಹೆಸರು ನಂದಾ ಎಂದು ಅಭಿಪ್ರಾಯಪಟ್ಟಿದ್ದಾರೆ. ಎರಡನೆಯವಳು ಸುನಂದಾ.

ಸ್ವತಿಗೆ 99 ಜನ ಪುತ್ರರು ಮತ್ತು ಒಬ್ಬ ಪುತ್ರಿ ಅವರಲ್ಲಿ ಹಿರಿಯವ ಭರತ. ಸುನಂದೆಗೆ ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿ. ಪುತ್ರನೇ ಬಾಹುಬಲಿ. ಆತನಿಗೆ ಮನ್ಮಥ ಎಂದೂ ಹೆಸರು. ಅನೇಕ ಭವಗಳನ್ನು ಪೂರೈಸಿದ್ದ ಆದಿನಾಥರು ಒಂದು ದಿನ ತಮ್ಮ ಆಸ್ಥಾನದಲ್ಲಿ ಕುಳಿತಿದ್ದಾಗ ನೀಳಾಂಜನೆ ಎಂಬ ಅವರ ನರ್ತಕಿ ಬರುವಳು. ಅವಳ ನರ್ತನ ವಿಲಾಸವನ್ನು ಪಂಪ ತನ್ನ ಆದಿಪುರಾಣದಲ್ಲಿ ಅದ್ಭುತವಾಗಿ ಬಣ್ಣಿಸಿದ್ದಾನೆ. ಸಂಸಾರದ ನಶ್ವರತೆಯನ್ನು ಆ ಮೂಲಕ ಎತ್ತಿ ತೋರಿಸಿದ್ದಾನೆ. ನೀಳಾಂಜನೆ ನರ್ತನ ಮಾಡುತ್ತಿರುವಾಗಲೇ ಆಕೆಯ ಆಯುಷ್ಯ ಮುಗಿದು ಹೋಗುತ್ತದೆ. ಆದರೆ, ಚಕ್ರವರ್ತಿಗೆ ರಸಭಂಗವಾಗಬಾರದು ಎಂದು ಇಂದ್ರನು ಮತ್ತೆ ನೀಳಾಂಜನೆಯ ನರ್ತನವನ್ನು ಮುಂದುವರಿಸಲು ಏರ್ಪಡಿಸಿದರೂ ಮಿಂಚಿನ ವೇಗದಲ್ಲಿ ನಡೆದ ಈ ಬೆಳವಣಿಗೆ ಆದಿನಾಥರ ಗಮನಕ್ಕೆ ಬಂತು.

ಈ ಪ್ರಪಂಚವು ಕುಡುಮಿಂಚಿನ ಪೊಳೆಪು, ಇಂದ್ರನ ಬಿಲ್, ಬೊಬ್ಬುಳಿಕೆಯುರಿನಂತೆ' ಎಂದು ತಿಳಿದ ವೃಷಭದೇವರು 'ಇನ್ನು ತಿರಿಯಲಾರೆಂ ಭವಾಂಬೋಧಿಯೋಳ್' ಎಂದು ಮುಕ್ತಿ ಸಾಧನೆಗಾಗಿ ಹೊರಟು ಹೋದರು. ಅವರ ಪುತ್ರಿಯರ ಹೆಸರು ಬ್ರಾಹ್ಮ, ಇನ್ನೊಬ್ಬಳ ಹೆಸರು ಸುಂದರಿ. ಅವರಿಬ್ಬರನ್ನೂ ಒಂದೊಂದು ತೊಡೆಯ ಮೇಲೆ ಕೂಡ್ರಿಸಿಕೊಂಡು ಅಕ್ಷರಾಭ್ಯಾಸ ಮಾಡಿಸಿದ ವೃಷಭನಾಥರು ಸ್ತ್ರೀ ಶಿಕ್ಷಣದ, ಸಬಲೀಕರಣದ ಮೊದಲ ಅಧ್ವರ್ಯು.

ವೃಷಭನಾಥರ ಹಿರಿಯ ಮಗ ಭರತ, ಪರಮ ವೀರ, ಬಾಹುಬಲಿ ಅಸದಳ ವೀರ, ಮೇಲಾಗಿ ಮದನಕಾಯ. ಅವನಿಗಿಂತ ಸುಂದರರು ಯಾರೂ ಇಲ್ಲ. ಬೆಳಗೊಳದ ಮೂರ್ತಿ ಆತನ ಅಪ್ರತಿಮ ಸೌಂದರ್ಯಕ್ಕೆ ಕೇವಲ ಸಂಕೇತ.

ವೃಷಭನಾಥರು ಸಂಸಾರದ ಜಂಜಡವನ್ನು ತ್ಯಜಿಸಿ ತಪಸ್ಸಿಗೆ ತೆರಳಲು ನಿರ್ಧರಿಸಿದರು. ತಾವು ಕಾಡಿಗೆ ತೆರಳಿದ ನಂತರ ಸೋದರರು, ಅಂದರೆ ತಮ್ಮ ಮಕ್ಕಳು ಜಗಳವಾಡಬಾರದು ಎಂದು ರಾಜ್ಯವನ್ನು ಹಲವು ಭಾಗವಾಗಿ ಮಾಡಿದರು. ಭರತನಿಗೆ ಅಯೋಧ್ಯೆಯನ್ನು ಬಿಟ್ಟುಕೊಟ್ಟರೆ, ಬಾಹುಬಲಿಗೆ ಪೌದನಪುರದ ಆಡಳಿತ ವಹಿಸಿದರು. ಇತರ 98 ಜನ ಮಕ್ಕಳಿಗೂ ಒಂದೊಂದು ರಾಜ್ಯವನ್ನು ವಹಿಸಿಕೊಟ್ಟರು.

ಕೆಲವು ದಿನಗಳ ನಂತರ ಭರತನ ಶಸ್ತ್ರಾಗಾರದಲ್ಲಿ ಒಂದು ಚಕ್ರ ಕಾಣಿಸಿಕೊಂಡಿತು. ಅದರ ಸಂಕೇತ ಭರತನು ಚಕ್ರವರ್ತಿಯಾಗುತ್ತಾನೆ ಎಂಬುದು. ಆದರೆ, ಅದಕ್ಕಿಂತ ಮುಂಚೆ ಭರತ ಇಡೀ ಜಗತ್ತನ್ನು ಗೆದ್ದು ತಮ್ಮ ಆಧಿಪತ್ಯಕ್ಕೆ ಒಳಪಡಿಸಬೇಕು ಎಂಬುದು ಮುಖ್ಯ ಷರತ್ತು. ಭರತ ದಿಗ್ವಿಜಯಕ್ಕೆ ಹೊರಟ. ಆತನ ಶೌರದ ಮುಂದೆ ಅನೇಕ ಸಾಮ್ರಾಜ್ಯಗಳು ಮಣಿದು ಹೋದುವು. ಭರತ ವಾಪಸು ಅಯೋಧ್ಯೆಗೆ ಮರಳಿದ. ಕೋಟೆಯ ಬಾಗಿಲಲ್ಲೇ ಚಕ್ರ ನಿಂತುಕೊಂಡಿತು. ಭರತನಿಗೆ ಒಂದು ಕ್ಷಣ ಅನುಮಾನ, ದಿಗ್ಭ್ರಮೆ. ಜ್ಯೋತಿಷಿಗಳ ಸಲಹೆ ಕೇಳಿದಾಗ, 'ಪ್ರಭು ನೀನು ಜಗತ್ತನ್ನೇ ಜಯಿಸಿರಬಹುದು. ಆದರೆ, ನಿನ್ನ ಸೋದರರು ಇನ್ನೂ ನಿನ್ನ ಪ್ರಭುತ್ವವನ್ನು ಒಪ್ಪಿಕೊಂಡಿಲ್ಲ' ಎಂದರು. 'ಹಾಗಾದರೆ ಅವರಿಗೆ ನಾನು ಚಕ್ರವರ್ತಿ ಎಂದು ಒಪ್ಪಿಕೊಳ್ಳಲು ಹೇಳಿ' ಎಂದು ದೂತರನ್ನು ಕಳುಹಿಸಿದ. ಭರತನ ಸೋದರರಿಗೆ ಬೇಸರವಾಯಿತು. 'ಅಣ್ಣನಿಗೆ ಸಾಮ್ರಾಜ್ಯ ದಾಹ. ನಾವು ತಂದೆ ಕೊಟ್ಟ ರಾಜ್ಯದಲ್ಲಿ ಆಡಳಿತ ಮಾಡಿಕೊಂಡಿರಲೂ ಆತ ಬಿಡಲಾರ. ಅವನಿಗೆ ಅಡಿಯಾಳು ಆಗಿರುವ ಬದಲು ಸಾಮ್ರಾಜ್ಯವನ್ನೇ ತ್ಯಜಿಸಿ ಅಪ್ಪನ ಹಾದಿಯನ್ನು ನಾವೂ ಹಿಡಿದು ಬಿಡೋಣ' ಎಂದು ತಂದೆ ವೃಷಭನ ಬಳಿ ತೆರಳಿದ ಎಲ್ಲ 98 ಜನ ಸೋದರರು ತಾಪಸಿಗಳಾದರು. ಕೇಶ ಲೋಚನ ಮಾಡಿಸಿಕೊಂಡರು.

ಆದರೆ, ಬಾಹುಬಲಿ ಇದಕ್ಕೆ ಒಪ್ಪಲಿಲ್ಲ. ಮಾತ್ರವಲ್ಲ ಅಣ್ಣನನ್ನು ಚಕ್ರವರ್ತಿ ಎಂದು ಮನ್ನಿಸಲೂ ಸಿದ್ಧನಾಗಲಿಲ್ಲ. ತನ್ನ ದಿಗ್ವಿಜಯದಲ್ಲಿ ಪಾಲುಗೊಳ್ಳಬೇಕು ಎಂದು ಭರತನಿಂದ ಸಂದೇಶ ತಂದಿದ್ದ ದೂತನನ್ನು ಬಾಹುಬಲಿ ತರಾಟೆಗೆ ತೆಗೆದುಕೊಂಡ.

'ನಾನು ನನ್ನ ತಂದೆ ಕೊಟ್ಟ ಪೌದನಪುರ ಸಾಮ್ರಾಜ್ಯವನ್ನು ಆಳಿಕೊಂಡು ಇದ್ದೇನೆ. ಅಣ್ಣನಿಗೆ ಅದರ ಮೇಲೂ ಏಕೆ ಕಣ್ಣು? ಆತ ನನ್ನ ಅಣ್ಣನೇ ಆಗಿದ್ದರೂ ಅವನ ಅಧೀನಕ್ಕೆ ಈ ಸಾಮ್ರಾಜ್ಯವನ್ನು ಒಳಪಡಿಸಲು ನನಗೆ ಇಷ್ಟವಿಲ್ಲ. ಹೋಗಿ ಅವನಿಗೆ ಹೇಳು. ಅವನ ಸಾಮ್ರಾಜ್ಯ ಅವನಿಗೆ ಸಾಲದೇ?' ಎಂದ ಬಾಹುಬಲಿ.

ದೂತ ಹೇಳಿದ : 'ಸ್ವಾಮಿಯೇ! ನಾನು ಕೇವಲ ದೂತ. ನಾನು ರಾಜರನ್ನು ಬಲ್ಲೆ. ನೀವು ಸುಮ್ಮನೆ ನಿಮ್ಮ ಅಣ್ಣನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಬಿಡಿ. ಭರತನ ಬಳಿ ಚಕ್ರವೂ ಇದೆ. ದಂಡವೂ ಇದೆ. ಅಂದರೆ ತನಗೆ ಎದುರು ನಿಂತವರನ್ನು ದಮನ ಮಾಡಲು ಅವು ಸಾಕು. ಹಾಗಿರುವಾಗ, ನೀವು ಭರತನ ಆಸ್ಥಾನಕ್ಕೆ ಶರಣಾಗಿ ಬಂದರೆ ಅದು ನಿಮ್ಮ ಗೌರವವನ್ನೂ ಹೆಚ್ಚಿಸುತ್ತದೆ, ಸಂಪತ್ತನ್ನೂ ಅಧಿಕಗೊಳಿಸುತ್ತದೆ'.

ಬಾಹುಬಲಿಯ ಸಿಟ್ಟು ನೆತ್ತಿಗೇರಿತು. 'ತೊಲಗಾಚೆ ನೀನು ದೂತನಲ್ಲದಿದ್ದರೆ ನಾನು ನಿನಗೆ ಏನು ಮಾಡುತ್ತಿದ್ದೆ ತಿಳಿಯೆ; ನನಗೆ ಹೆದರಿಕೆ ಹಾಕುತ್ತಿದ್ದೀಯಾ? ಆಸೆ ಹುಟ್ಟಿಸುತ್ತಿದ್ದೀಯಾ? ನಡೆಯಾಚೆ' ಎಂದು ದೂತನನ್ನು ಹೊರಗೆ ತಳ್ಳಿಸಿದ. ಆದರೆ, ದೂತನೇನೂ ಸುಮ್ಮನೆ ಹೋಗಲಿಲ್ಲ. ಕೊನೆಯದಾಗಿ ನಾನು ಹೇಳುವುದು ಇಷ್ಟೇ. ದೊರೆ ಭರತ, ಚಕ್ರವರ್ತಿಯಾಗಬೇಕು ಎಂದು ಬಯಸಿದ್ದಾನೆ ಅವನ ದಿಗ್ವಿಜಯ ಯಶಸ್ವಿಯಾಗಿ ಮುಕ್ತಾಯವಾಗಬೇಕಾದರೆ ಎಲ್ಲರೂ ಅವನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲೇ ಬೇಕು. ಇಲ್ಲವಾದರೆ ಆತ ನಿಮ್ಮನ್ನು ಮಣಿಸಲೂ ಹಿಂದೇಟು ಹಾಕಲಾರ. ಅವನ ಬಳಿ ಚಕ್ರ ಮತ್ತು ದಂಡ ಎರಡೂ ಇವೆ' ಎಂದು ಮತ್ತೆ ಹೇಳಿಹೋದ.

ಬಾಹುಬಲಿಯೂ ಸುಮ್ಮನಿದ್ದಾನೆಯೇ? : 'ನಾನೂ ಬಲ್ಲೆ ಹೋಗು ಕುಂಬಾರನ ಬಳಿಯೂ ಚಕ್ರವೂ ಇರುತ್ತದೆ. ದಂಡವೂ ಇರುತ್ತದೆ! ಭರತನ ಆಸೆ, ಗರ್ವಕ್ಕೆ ಕೊನೆಯೇ ಇಲ್ಲವಾದರೆ ಯುದ್ಧವೇ ಆಗಲಿ" ಎಂದ. ಸಂಧಾನ ಮುರಿದು ಬಿತ್ತು.

ಇಬ್ಬರ ಸೇನೆಗಳೂ ಮುಖಾಮುಖಿಯಾಗಿ ಸಮರಾಂಗಣದಲ್ಲಿ ಕೆನೆಯುತ್ತ ನಿಂತುವು. ಇನ್ನೇನು ಯುದ್ಧ ನಡೆಯಬೇಕು. ಎರಡೂ ಕಡೆಯ ಹಿರಿಯರು ಮಧ್ಯ ಪ್ರವೇಶಿಸಿದರು. ನಿಮ್ಮ ನಡುವಿನ ಯುದ್ಧದಿಂದ ಸಾವಿರಾರು ಅಮಾಯಕ ಜನ ಸತ್ತು ಹೋಗುತ್ತಾರೆ, ಭಾರಿ ರಕ್ತಪಾತವಾಗುತ್ತದೆ. ನೀವು ಚರಮದೇಹಿಗಳು ಬೇರೆ. ತೀರ್ಥಂಕರರ ಮಕ್ಕಳು. ಹೀಗೆ ಯುದ್ಧದಲ್ಲಿ ರಕ್ತಪಾತ ಮಾಡಿದರೆ ಅದು ಪ್ರಳಯ ವಿಪತ್ಕಾರಿ. ಇದು ಹೇಗಿದ್ದರೂ ನಿಮ್ಮಿಬ್ಬರ ನಡುವಿನ ಹಮ್ಮು-ಬಿಮ್ಮು, ಅದಕ್ಕಾಗಿ ನೀವಿಬ್ಬರೇ ಯುಗಳ ಯುದ್ಧ ಮಾಡಿರಿ. ಅದರಲ್ಲಿ ಯಾರು ಗೆಲ್ಲುವರೋ ಅವರೇ ಚಕ್ರವರ್ತಿ ಎಂದು 'ನ್ಯಾಯ' ಹೇಳಿದರು.

ಇಬ್ಬರೂ ಸೋದರರು ಸಮ್ಮತಿಸಿದರು. ದೃಷ್ಟಿ ಯುದ್ಧ, ಜಲ ಯುದ್ಧ ಮತ್ತು ಮಲ್ಲ ಯುದ್ಧ ಎಂಬ ಮೂರು ಸಮರ ಸವಾಲುಗಳನ್ನು ಹಿರಿಯರು ರೂಪಿಸಿದರು. ಮೊದಲ ಎರಡು ಯುದ್ಧಗಳನ್ನು ಬಾಹುಬಲಿಯೇ ಗೆದ್ದನು. ಮಲ್ಲ (ಕುಸ್ತಿ) ಯುದ್ಧದಲ್ಲಿಯೂ ಆತ ಭರತನನ್ನು ಸುಲಭವಾಗಿ ಮಣಿಸಿದ. ಅಣ್ಣನನ್ನು ತನ್ನ ಎರಡೂ ಕೈಗಳಲ್ಲಿ ಎತ್ತಿ ಹಿಡಿದು

ಇನ್ನೇನು ನೆಲಕ್ಕೆ ಅಪ್ಪಳಿಸಬೇಕು ಎನ್ನುವಾಗ ಬಾಹುಬಲಿಗೆ 'ಛ' ಅನಿಸಿತು. ಅಣ್ಣನ ಬಗೆಗೆ ಭ್ರಾತೃ ಭಾವ ತುಂಬಿ ಬಂತು. ನಿಧಾನವಾಗಿ ಅಣ್ಣನನ್ನು ಕೆಳಗೆ ಇಳಿಸಿದ.

ಭರತಚಕ್ರಿಗೆ ಅದು ಅವಮಾನದ ಗಳಿಗೆ. ಬಾಹುಬಲಿಯನ್ನು ಸಂಹಾರ ಮಾಡಲು ಚಕ್ರರತ್ನಕ್ಕೆ ಆದೇಶ ಕೊಟ್ಟ. ಆದರೆ, ಇಬ್ಬರು ಸೋದರರಲ್ಲಿ ಬಾಹುಬಲಿಯೇ ಯುದ್ಧದಲ್ಲಿ ಗೆದ್ದಿದ್ದ. ಚಕ್ರ ಅವನ ಸುತ್ತ ಮೂರು ಸಾರಿ ಬಲವಂದು ನಿಂತು ಬಿಟ್ಟಿತು. ಭರತನ ಈ ದುಸ್ಸಾಹಸ ಕಂಡು ಬಾಹುಬಲಿಗೆ ಮತ್ತಷ್ಟು ಭ್ರಮ ನಿರಸನವಾಯಿತು. ಅಧಿಕಾರಕ್ಕಾಗಿ ಮನುಷ್ಯ ಸೋದರನನ್ನೇ ಸಂಹರಿಸಲು ಹಿಂದೇಟು ಹಾಕಲಾರ ಅನಿಸಿತು 'ನಾವು ಅಂಥ ದೊಡ್ಡ ದೊರೆಯ ಮಕ್ಕಳು. ಆದರೆ, ಜನರಿಗೆ ಹಾಕಿ ಕೊಟ್ಟ ಮಾದರಿಯೇನು? ದ್ರೋಹ ಚಿಂತನೆಯೇ? 'ಸೋದರರೊಳೆ ಸೋದರರಂ ಕಾದಿಸುವ' ಈ ರಾಜ್ಯವೇ ಬೇಡ' ಎಂದು ಅಂದುಕೊಂಡ ಬಾಹುಬಲಿ ಒಂದು ಕ್ಷಣವೂ ಹಿಂದೆ ಮುಂದೆ ನೋಡದೆ ಅರಣ್ಯಕ್ಕೆ ಹೊರಟ. 'ಅಯ್ಯನಿತ್ತುದುಮನ್ ನಾನಿನಿಗಿತ್ತೆಂ' ಎಂದು ತನ್ನ ಎಲ್ಲ ರಾಜ್ಯ ಸಾಮ್ರಾಜ್ಯವನ್ನು ಅಣ್ಣನಿಗೇ ಬಿಟ್ಟುಕೊಟ್ಟನು. ಈ ಮಾತು ಪಂಪನದು. ಅಂದರೆ ನಮ್ಮದು ಎಂಬುದು ಯಾವುದೂ ಇರುವುದಿಲ್ಲ ಎಂದು ಅರ್ಥ. ಇದು ಬಾಹುಬಲಿಯ ಅಸೀಮ ತ್ಯಾಗದ ಸಂಕೇತದಂಥ ಮಾತು. ಅವನ ಮಾತು ಕೇಳಿ ಭರತನಿಗೂ ಪಶ್ಚಾತ್ತಾಪವಾಯಿತು. "ನೀನು ತಪ್ಪಸಿಗೆ ತೆರಳಿದರೆ ಈ ಸಾಮ್ರಾಜ್ಯ ಯಾರಿಗೆ ಬೇಕು' ಎಂದು ಗೋಗರೆದ. ಆದರೆ, ಬಾಹುಬಲಿ ದೃಢಚಿತ್ತನಾಗಿದ್ದ. ತಂದೆಯ ಬಳಿ ತೆರಳಿ ದೀಕ್ಷೆ ತೆಗೆದುಕೊಂಡ.

ಕಾಡಿನಲ್ಲಿ ಕೇಶಲೋಚನೆ ಮಾಡಿಕೊಂಡು ಕಾಯೋತ್ಸರ್ಗ ಭಂಗಿಯಲ್ಲಿ (ಈಗ ಶ್ರವಣಬೆಳಗೊಳದಲ್ಲಿ ಬಾಹುಬಲಿ ವಿಗ್ರಹ ನಿಂತಿರುವುದು ಅದೇ ಭಂಗಿ) ಧ್ಯಾನಕ್ಕೆ ನಿಂತುಕೊಂಡ. ಆತನ ಸುತ್ತ ಹುತ್ತ ಬೆಳೆಯಿತು. ಕಾಲು, ತೋಳುಗಳ ಮೇಲೆ ಬಳ್ಳಿಗಳು ಹಬ್ಬಿದುವು. ಪಕ್ಷಿಗಳು ಗೂಡು ಕಟ್ಟಿದುವು. ಆದರೆ, ಇಷ್ಟೆಲ್ಲ ಕಠೋರ ತಪಸ್ಸಿನಿಂದಲೂ ಬಾಹುಬಲಿಗೆ ಕೇವಲ ಜ್ಞಾನ ಲಭಿಸಲಿಲ್ಲ. ಭರತನ ರಾಜ್ಯದಲ್ಲಿ ತಾನು ಕಾಲೂರಿ ನಿಂತಿರುವೆ ಎಂಬ ಮನಃಕಷಾಯ ಬಾಹುಬಲಿಗೆ ನೀಗಿರಲಿಲ್ಲ.


ತಮ್ಮನಿಗೆ ಕೇವಲಜ್ಞಾನ ಆಗುತ್ತಿಲ್ಲ ಎಂದು ತಿಳಿದ ಭರತ ತಂದೆಯ ಬಳಿ ಹೋಗಿ ಕಾರಣ ಕೇಳಿದ. 'ಆತನಿಗೆ ನಿನ್ನ ನೆಲದ ಮೇಲೆ ನಿಂತಿರುವ ಅಳುಕು. ಹೋಗಿ ಅವನಿಗೆ ತಿಳಿ ಹೇಳು' ಎಂದ ಆದಿನಾಥ (ವೃಷಭ). ಭರತ ಮತ್ತು ಆತನ ಸೋದರಿ ಸೇರಿಕೊಂಡು ಬಾಹುಬಲಿಯ ಬಳಿ ಹೋದರು. 'ಆನೆಯಿಂದ ಕೆಳಗೆ ಇಳಿ" ಎಂದು ಬಾಹುಬಲಿಯ ಕಿವಿಯಲ್ಲಿ ಸೋದರಿ ಧ್ವನಿ ಪೂರ್ಣವಾಗಿ ಉಸುರಿದಳು.

ಬಾಹುಬಲಿಯ ಪದತಲದಲ್ಲಿ ಶಿರಬಾಗಿ ಕುಳಿತ ಭರತ ಚಕಿ, 'ಸೋದರನೇ, ಈ ನೆಲ ನಿನ್ನದು. ನೀನು ಬಿಟ್ಟು ಕೊಟ್ಟೆ ಎಂದು ಈ ಭೂಮಿ ನನಗೆ ಸಿಕ್ಕಿತು. ಅಭಿಮಾನ ಬಿಟ್ಟು ಆತ್ಮ ಧ್ಯಾನ ಮಾಡು' ಎಂದು ಅರಿಕೆ ಮಾಡಿಕೊಂಡ. ಬಾಹುಬಲಿಗೆ ಅಳುಕು ನೀಗಿತು. ಕೇವಲಜ್ಞಾನ ಪ್ರಾಪ್ತವಾಯಿತು. ನಂತರ ಆತ ಮೋಕ್ಷಗಾಮಿಯಾದ. ಆ ಮೂಲಕ ಇಹದ ಎಲ್ಲಾ ಆಮಿಷಗಳ ಮೇಲೆ ಅಂತಿಮ ದಿಗ್ವಿಜಯವನ್ನು ಸಾಧಿಸಿದ.








ಬೆಳಗೊಳದ ಗೊಮ್ಮಟನ ಇತಿಹಾಸ
24

ಶ್ರವಣ ಬೆಳಗೊಳದ ಬಾಹುಬಲಿ ಮೂರ್ತಿಯನ್ನು ನೋಡಿ ಮೂಕರಾಗದವರು ವಿರಳ. 12ನೇ ಶತಮಾನದ ಬೊಪ್ಪಣ ಕವಿ ಹೇಳುವಂತೆ ಗೊಮ್ಮಟನದು 'ಸೌಂದರ್ಯಮೌನ್ನತ್ಯಮುಂ', ಸೌಂದರ್ಯ ಮತ್ತು ಔನ್ನತ್ಯದಲ್ಲಿ ಗೊಮ್ಮಟ ವಿಗ್ರಹವನ್ನು ಮೀರಿದ ಮೂರ್ತಿ ಎಲ್ಲಿಯೂ ಇಲ್ಲ. ಕರ್ನಾಟಕದಲ್ಲಿಯೇ ಇಂಥ ಮೂರು ಮೂರ್ತಿಗಳು ಇದ್ದರೂ ಅವು ಬೆಳಗೊಳದ ಗೊಮ್ಮಟನಿಗೆ ಸಮನಲ್ಲ. ಬೆಳಗೊಳದ ಗೊಮ್ಮಟ ಮಾನವಸೃಷ್ಟಿಯಾದರೂ ದೈವಿಕ ಸೃಷ್ಟಿಗೆ ಸಮನಾದುದು.

ಈ ಮೂರ್ತಿ ಇಲ್ಲಿ ನಿಂತುದು ಹೇಗೆ? ಅದು ಬಾಹುಬಲಿಯ ಬದುಕಿನಷ್ಟೇ ರೋಚಕವಾದ ಕಥೆ. ಈ ವಿಗ್ರಹ ಪ್ರತಿಷ್ಠಾಪನೆಯಾದುದು ಕ್ರಿ.ಶ 981ರಲ್ಲಿ. ಎಷ್ಟು ದಿನ, ಯಾವ ಶಿಲ್ಪಿ ಈ ಮೂರ್ತಿಯನ್ನು ಕಡೆದು ನಿಲ್ಲಿಸಿದ ಎಂಬುದಕ್ಕೆ ಯಾವುದೇ ಆಧಾರ ಉಳಿದಿಲ್ಲ. ಸಾವಿರಾರು ಜನರು ಸೇರಿಕೊಂಡು ಈ ವಿಗ್ರಹವನ್ನು ಕಡೆದು ನಿಲ್ಲಿಸಿರಬೇಕು ಎಂಬುದರಲ್ಲಿ ಯಾವುದೇ ಶಂಕೆ ಇರಲಾರದು. ಅರಿಷ್ಟ ನೇಮಿ ಎಂಬ ಲೋಕೋತ್ತರ ಶಿಲ್ಪಿ ಬಾಹುಬಲಿ ಮೂರ್ತಿಯನ್ನು ಕಡೆದಿರಬೇಕು ಎಂಬ ಪ್ರತೀತಿ ಮಾತ್ರ ಉಳಿದಿದೆ. ಆತನ ಹೆಸರು ಭರತೋಜ ಎಂದೂ ಹೇಳುತ್ತಾರೆ. ಆತ ಯಾರು, ಎಲ್ಲಿಯವ ಎಂಬ ಯಾವ ದಾಖಲೆಯೂ ಇಲ್ಲದೇ ಇರುವುದು ವಾಸ್ತುಶಿಲ್ಪದ ಒಂದು ನಿಗೂಢ ಅಧ್ಯಾಯ; ಅಚ್ಚರಿಯ ವಿಚಾರ. (ಚಂದ್ರಶೇಖರ ಕಂಬಾರರು ಈಚೆಗೆ 'ಗುಳ್ಳಕಾಯಜ್ಜಿ' ಎಂಬ ಒಂದು ನಾಟಕ ಬರೆದಿದ್ದು ಅದು ಬೆಳಗೊಳದ ಬಾಹುಬಲಿಯ ಮೂರ್ತಿಯ ನಿರ್ಮಾಣವನ್ನು ಆ ಅನಾಮಿಕ ವಾಸುಶಿಲ್ಪಿಯ ದೃಷ್ಟಿಯಿಂದ ನೋಡುತ್ತದೆ.) ಚಾವುಂಡರಾಯ ಈ ಶಿಲ್ಪ ರಚನೆಗೆ ಏಕೆ ಕೈ ಹಾಕಿದ ಎಂಬ ಬಗೆಗೂ ಒಂದು ದೊಡ್ಡ ಪ್ರತೀತಿಯೇ ಇದೆ. ಗಂಗರಸ ಇಮ್ಮಡಿ ಮಾರಸಿಂಹ ಮತ್ತು ನಾಲ್ಮಡಿ ರೇಚಮಲ್ಲನ ಸೇನಾಪತಿಯಾಗಿದ್ದ ಚಾವುಂಡರಾಯ ತನ್ನ ರಾಜ್ಯಸಭೆಗೆ ಒಂದು ದಿನ ಒಬ್ಬ ಕವಿಯನ್ನು ಆಮಂತ್ರಿಸಿದ್ದ. ಆ ಕವಿ. ಭರತ-ಬಾಹುಬಲಿಯರ ಕಥೆ ಹೇಳಿದ. ಬಾಹುಬಲಿ ಆಳಿದ ಪೌದನಪುರದಲ್ಲಿ 500 ಬಿಲ್ಲುಗಳಷ್ಟು ಎತ್ತರವಾದ ಬಾಹುಬಲಿ ವಿಗ್ರಹ ಇದೆ ಎಂದೂ ಆ ಕವಿ ಹೇಳಿದ, ಈ ಕಥೆ ಕೇಳಿದ ಚಾವುಂಡರಾಯನ ತಾಯಿ ಕಾಳಲದೇವಿಗೆ ಆ ಅಪೂರ್ವ ವಿಗ್ರಹ ನೋಡಬೇಕು ಎಂಬ ಆಸೆಯಾಯಿತು.

ತಾಯಿಯ ಆಸೆ ಈಡೇರಿಸುವುದು ಹೇಗೆ ಎಂದು ತಿಳಿಯದೆ ಚಾವುಂಡರಾಯ ಗುರು ನೇಮಿಚಂದ್ರ ಸಿದ್ಧಾಂತದೇವನ ಮೊರೆ ಹೊಕ್ಕ, 'ಭಕ್ತಿ ಮತ್ತು ಶ್ರದ್ಧೆ ಇದ್ದರೆ ಪೌದನಪುರ ತಲುಪುವುದು ಕಷ್ಟವೇನಲ್ಲ' ಎಂದು ಅವರು ಧೈರ್ಯ ತುಂಬಿದರು.

ತಾಯಿಯ ಜತೆಗೆ ಪೌದನಪುರದ ಮಾರ್ಗದಲ್ಲಿ ಕಾಡು-ಮೇಡು ಅಲೆಯುತ್ತ ಹೋಗುವ ಚಾವುಂಡರಾಯ ಒಂದು ದೊಡ್ಡ ಕೊಳ ನೋಡಿ ಅಲ್ಲಿ ತಂಗುವನು. ಅಲ್ಲಿಯ ಪ್ರಶಾಂತ ದೃಶ್ಯ. ಒಂದೇ ಮಗ್ಗುಲಿನಿಂದ ಮಲಗಿದ ಮುನಿಯಂತೆ ಕಾಣುತ್ತಿದ್ದ ದೊಡ್ಡ ಬೆಟ್ಟ ನೋಡಿ ದಂಗಾಗುವನು. ಆ ವೇಳೆಗಾಗಲೇ ಚಿಕ್ಕ ಬೆಟ್ಟ ಇತಿಹಾಸ ಪ್ರಸಿದ್ಧವಾಗಿತ್ತು. ಜೈನ ಮುನಿಗಳು ಸಮಾಧಿ ಮರಣಕ್ಕೆ ಆಯ್ದುಕೊಂಡ ಜಾಗವದು ಎಂದು ಹೆಸರು ಪಡೆದಿತ್ತು. ಅದಕ್ಕಾಗಿಯೇ ಚಿಕ್ಕ ಬೆಟ್ಟಕ್ಕೆ

ಕಟವಪ್ರ (ಸಮಾಧಿ ಗುಡ್ಡ) ಎಂಬ ಹೆಸರು ಬಂದಿತ್ತು. ಜತೆಗಿದ್ದ ನೇಮಿಚಂದ್ರ ಗುರುಗಳು ಚಾವುಂಡರಾಯನಿಗೆ ಆ ಬೆಟ್ಟದ ಮಹತ್ವವನ್ನು ತಿಳಿ ಹೇಳುವರು. ಬೆಟ್ಟದ ಮೇಲೆ ತಂಗಿದ್ದ ಮುನಿಗಳಿಗೆ ತೊಂದರೆಯಾಗದಂತೆ ದೊಡ್ಡ ಬಂಡೆಗಲ್ಲಿನ ಬಳಿ ಚಾವುಂಡರಾಯ ಮತ್ತು ಆತನ ತಾಯಿ ವಿಶ್ರಮಿಸಿದರು.

ಅಂದು ರಾತ್ರಿ ಚಾವುಂಡರಾಯನಿಗೆ ಒಂದು ವಿಚಿತ್ರ ಕನಸು ಬಿತ್ತು. ಅದ್ಭುತ ಗಾತ್ರ ಹಾಗೂ ಎತ್ತರದ ಭರತ-ಬಾಹುಬಲಿ ವಿಗ್ರಹಗಳನ್ನು ಆತ ಕಂಡ. ಆದರೆ ಆ ವಿಗ್ರಹಗಳನ್ನು ನಿಜವಾಗಿಯೂ ಕಾಣಲು ಸಾಧ್ಯವೇ ಎಂಬ ಆತನ ಪ್ರಶ್ನೆಗೆ ಯಕ್ಷಿ ಕೂಷ್ಮಾಂಡಿನಿ ಸಮಾಧಾನ ಹೇಳುತ್ತಾಳೆ. 'ಕಲಿಯುಗದಲ್ಲಿ ಆ ಪ್ರಯತ್ನ ಫಲ ನೀಡದು. ಆ ಪ್ರಯತ್ನ ಕೈ ಬಿಡು' ಎಂದು ಆಕೆ ತಿಳಿ ಹೇಳುತ್ತಾಳೆ. ಹಾಗಾದರೆ ತನ್ನ ತಾಯಿಯ ಆಸೆ ತೀರಿಸುವುದು ಹೇಗೆ ಎಂದು ಚಾವುಂಡರಾಯ ದುಃಖದಿಂದ ಕೇಳುತ್ತಾನೆ. 'ನಾಳೆ ಬೆಳಿಗ್ಗೆ ಎದ್ದು ಚಿಕ್ಕ ಬೆಟ್ಟದ ಮೇಲಿನಿಂದ ದೊಡ್ಡ ಬೆಟ್ಟಕ್ಕೆ ಬಾಣ ಬಿಡು. ಅಲ್ಲಿ ಬಾಹುಬಲಿ ಮೂರ್ತಿ ಉದ್ಭವಿಸುತ್ತದೆ. ನಿನ್ನ ತಾಯಿಯ ಆಸೆ ಈಡೇರುತ್ತದೆ' ಎಂದು ಕೂಷ್ಮಾಂಡಿನಿ ಅಭಯ ನೀಡುತ್ತಾಳೆ. ದೇವಿ ಹೇಳಿದ ಹಾಗೆಯೇ ಚಾವುಂಡರಾಯ ಮಾಡುತ್ತಾನೆ. ಸಾವಿರ ಸಿಡಿಲುಗಳು ಒಮ್ಮೆಲೇ ಸಿಡಿದಂತೆ ದೊಡ್ಡ ಬೆಟ್ಟದ ಮೇಲಿನ ಬಂಡೆ ಸೀಳಿ ಬಾಹುಬಲಿಯ ವಿಗ್ರಹ ಅರಳಿ ನಿಲ್ಲುತ್ತದೆ. ಎಲ್ಲಿ ನಿಂತು ನೋಡಿದರೂ ಮನಸ್ಸನ್ನು ಸೆರೆ ಹಿಡಿದು ನಿಲ್ಲಿಸುವ ಹಾಗೆ ಬೆಟ್ಟದ ಮೇಲೆ ಅರಳಿ ನಿಂತ ಅದ್ಭುತ ವಿಗ್ರಹದ ಬಳಿಗೆ ತಾಯಿ ಕಾಳಲದೇವಿ, ಮಗ ಚಾವುಂಡರಾಯ ಹೋಗಿ ದರ್ಶನ ಪಡೆಯುವರು.

ಇದು ಕಥೆ. ಆದರೆ, ನೂರಾರು, ಸಾವಿರಾರು ಶಿಲ್ಪಿಗಳು ಸೇರಿ ದೊಡ್ಡ ಬೆಟ್ಟದ ಮೇಲಿನ ಕಲ್ಲನ್ನು ಹಗಲು, ರಾತ್ರಿ ಎನ್ನದೆ ಕಟೆದು ನಿಲ್ಲಿಸದೇ ಇದ್ದರೆ ಈ ದೈವಿಕ ಸೃಷ್ಟಿ ಸಾಧ್ಯವಾಗುತ್ತಿರಲಿಲ್ಲ. ಮನುಷ್ಯ ಮಾತ್ರರಿಗೆ ಬಾಹುಬಲಿಯ ಮುಖದ ಮುಗ್ಧತೆ, ವಿಷಾದ, ಸೌಂದರ್ಯ, ಗಾಢ ಮೌನಗಳನ್ನು ಕಟೆದು ಪಡಿಮೂಡಿಸಲು ಸಾಧ್ಯವೇ ಎಂಬ ಕಾರಣಕ್ಕಾಗಿ ಇಂಥ ಕಥೆಗಳು ಹುಟ್ಟಿಕೊಳ್ಳುವುದು ಸಹಜ. ಅದಕ್ಕಾಗಿಯೇ ಖ್ಯಾತ ಇತಿಹಾಸಕಾರ ಜೇಮ್ಸ್ ಫರ್ಗೂಸನ್ ಅವರು. 'ಈಜಿಪ್ಟ್ ಬಿಟ್ಟರೆ ಇದಕ್ಕಿಂತ ಅಗಾಧವಾದುದು ವಿಶ್ವದಲ್ಲಿ ಎಲ್ಲಿಯೂ ಇಲ್ಲ. ಏಕಶಿಲೆಯಲ್ಲಿ ಇದಕ್ಕಿಂತ ಎತ್ತರವಾದ ಮೂರ್ತಿಯೂ ಬೇರೆ ಕಡೆ ಇಲ್ಲ. ಕಲಾಕೃತಿಯ ಪರಿಪೂರ್ಣತೆಯಲ್ಲಿ ಬಾಹುಬಲಿಗೆ ಬಾಹುಬಲಿಯೇ ಸಾಟಿ' ಎಂದಿದ್ದಾರೆ.

1951ರ ಸೆಪ್ಟೆಂಬರ್ ಏಳರಂದು ಈ ಬೆಟ್ಟಕ್ಕೆ ತಮ್ಮ ಮಗಳು ಇಂದಿರಾ ಅವರ ಜೊತೆಗೆ ಬಂದಿದ್ದ ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು 'ನಾನು ಇಲ್ಲಿಗೆ ಬಂದೆ, ದರ್ಶನ ಮಾಡಿದೆ. ವಿಸ್ಮಯಗೊಂಡೆ ಹಾಗೂ

ಮೂಕವಿಸ್ಮಿತನಾದೆ' ಎಂದು ಬಣ್ಣಿಸಿದ್ದರು. ಅವರು ಮಗಳ ಜೊತೆಗೆ ಬೆಟ್ಟಕ್ಕೆ ಹತ್ತಿ ಹೋಗಿದ್ದರು ಎಂಬುದು ಇಲ್ಲಿ ಉಲ್ಲೇಖನಾರ್ಹ. ಬಾಹುಬಲಿ ಮೂರ್ತಿಯೇ ಹಾಗೆ, ಒಂದು ಸಾರಿ ಆ ಭವ್ಯ ಪ್ರತಿಮೆಯ ಸಮ್ಮುಖದಲ್ಲಿ ಹೋಗಿ ನಿಂತರೆ ಎಲ್ಲರೂ ಎಲ್ಲವನ್ನು ಮರೆತು ಬಿಡುತ್ತಾರೆ. ನೆಹರೂ ಅವರು ಹೇಳಿದ ಮಾತನ್ನು ಎಲ್ಲರೂ ಹೇಳುತ್ತಾರೆ.

# ಕವಿಯಾಗಿದ್ದ ಚಾವುಂಡರಾಯ

ಚಾವುಂಡರಾಯ ಗೊಮ್ಮಟನ ವಿಗ್ರಹ ಸ್ಥಾಪಿಸಿದ್ದುದಕ್ಕೆ ಮಾತ್ರ ಪ್ರಸಿದ್ಧ ನಾಗಿಲ್ಲ. ಆತ, ಗೊಮ್ಮಟ ವಿಗ್ರಹ ಸ್ಥಾಪಿಸುವುದಕ್ಕಿಂತ ಮುಂಚಿತವಾಗಿಯೇ ಅಂದರೆ, ಕ್ರಿ.ಶ. 978ರಲ್ಲಿ 'ತ್ರಿಷಷ್ಟಿ ಲಕ್ಷಣ ಮಹಾ ಪುರಾಣ' ಎಂಬ 24 ತೀರ್ಥಂಕರರ ಕಥೆ ಹೇಳುವ ಗದ್ಯ ಗ್ರಂಥವನ್ನು ರಚಿಸಿದ್ದ. ಸಂಸ್ಕೃತದಲ್ಲಿ ರಚಿತವಾದ ಮಹಾ ಪುರಾಣದ ಕಥೆಯನ್ನು ಮೊದಲು ಕನ್ನಡದಲ್ಲಿ ಹೇಳಿದ ಕವಿ ಇವನು. 'ವಡ್ಡಾರಾಧನೆ' ಬಿಟ್ಟರೆ ಕನ್ನಡದ ಮೊದಲ ಗದ್ಯ ಗ್ರಂಥ ಎಂಬ ಹೆಗ್ಗಳಿಕೆಯು 'ಚಾವುಂಡರಾಯ ಪುರಾಣ' ಎಂದೂ ಹೆಸರಾದ ಈ ಗ್ರಂಥಕ್ಕೆ ಇದೆ. ಅದೇ ರೀತಿ ಆತ ಕಟ್ಟಿದ ಚಾವುಂಡರಾಯ ಬಸದಿ ಕೂಡ ದಿಗಂಬರ ಜೈನ ಕಲೆಯ ಅನರ್ಘ್ಯ ರತ್ನ. ತೀರ್ಥಂಕರರ ಕಥೆಗಳನ್ನು ಹೇಳುವ 'ಮಹಾಪುರಾಣ'ವನ್ನು ಈ ಶತಮಾನದಲ್ಲಿ ಸರಳಕನ್ನಡದಲ್ಲಿ ಅನುವಾದಿಸಿದವರು ಮೈಸೂರಿನ ಪ್ರಖ್ಯಾತ ವಿದ್ವಾಂಸರಾದ ದಿ. ಎ.ಶಾಂತಿರಾಜಶಾಸ್ತ್ರಿಗಳು. ಅವರಿಗೆ ಪಂಡಿತ ರತ್ನ ಎಂಬ ಬಿರುದು ಇತ್ತು. ಅವರು ಏಕಾಂಗಿಯಾಗಿ ಎಲ್ಲ 20,000 ಶ್ಲೋಕಗಳನ್ನು ಕನ್ನಡಕ್ಕೆ ತಂದರು. 1993 ಮಹಾಮಸ್ತಕಾಭಿಷೇಕ ಸಮಯದಲ್ಲಿ ಮಹಾಪುರಾಣದ ಮೊದಲ ಆವೃತ್ತಿ ಪ್ರಕಟವಾಗಿತ್ತು. ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ಅತ್ಯಂತ ಉಪಯುಕ್ತ ಆಕರ ಗ್ರಂಥವನ್ನು ಒದಗಿಸಿದ ಶ್ರೇಯಸ್ಸು ಎ.ಶಾಂತಿರಾಜಶಾಸ್ತ್ರಿ ಟ್ರಸ್ಟ್ಗೆ ಸಲ್ಲಬೇಕು. ಈ ಸಾರಿ ಮಹಾಮಸ್ತಕಾಭಿಷೇಕ ಸಮಯದಲ್ಲಿ ಮಹಾಪುರಾಣದ ಪರಿಷ್ಕೃತ ಆವೃತ್ತಿ ಹೊರಗೆ ಬರುತ್ತಿದೆ. ಅದರ ಜೊತೆಗೆ ಅದರ ಇಂಗ್ಲಿಷ್ ಆವೃತ್ತಿಯನ್ನೂ ಪ್ರಕಟಿಸಲು ಟ್ರಸ್ಟ್ ಕಾರಪ್ರವೃತ್ತವಾಗಿದೆ. ಟ್ರಸ್ಟ್ನ ಬೆನ್ನೆಲುಬಾಗಿ, ಈ ಸಾರಿಯ ಮಹಾಮಸ್ತಕಾಭಿಷೇಕದ ಕಾರಾಧ್ಯಕರಾಗಿರುವ ಭೂ ವಿಜ್ಞಾನ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ ನಿರ್ವಹಿಸಿ ನಿವೃತ್ತರಾಗಿರುವ, ಎಸ್.ಜಿತೇಂದ್ರಕುಮಾರ್ ಅವರು ಇದ್ದಾರೆ.

ಬಾಹುಬಲಿಯ ಪಾದಗಳ ಬಳಿ ಈಗ 'ಚಾವುಂಡರಾಯ ಮಾಡಿಸಿದಂ' ಎಂಬ ಶಿಲಾಲೇಖ ಮಾತ್ರ ಇದೆ, ಶಿಲ್ಪಿಯ ಹೆಸರು ಅಲ್ಲಿ ಇಲ್ಲ. ಚಾವುಂಡರಾಯನಿಗೆ ಗೊಮ್ಮಟ ಎಂಬ ಹೆಸರೂ ಇತ್ತು. ಹಾಗಾಗಿಯೇ ಬಾಹುಬಲಿಗೆ ಗೊಮ್ಮಟೇಶ ಎಂಬ ಹೆಸರೂ ಬಂತು.

ಈ ಅದ್ಭುತ ಮೂರ್ತಿಯನ್ನು ತನ್ನ ಎದೆಯಲ್ಲಿ ಕಲ್ಪಿಸಿಕೊಂಡು ಅದನ್ನು ಶಿಲೆಯಲ್ಲಿ ಸಾಕಾರಗೊಳಿಸಿದ ಶಿಲ್ಪಿ ಈಗ ಅನಾಮಧೇಯ. ಚಾವುಂಡರಾಯನಷ್ಟೇ ಆ ಶಿಲ್ಪಿಯೂ ದೊಡ್ಡವನು. ಅವನಿಗೆ ನಮಸ್ಕಾರ. ಖ್ಯಾತ ಕಾದಂಬರಿಕಾರ ತ.ರಾ.ಸು. ಅವರ 'ಶಿಲ್ಪಶ್ರೀ ಕಾದಂಬರಿಯು ಗೊಮ್ಮಟ ಮೂರ್ತಿ ಸಾಕಾರಗೊಂಡ ಕಥೆಯ ಅದ್ಭುತ ಕಾಲ್ಪನಿಕ ಸೃಷ್ಟಿ.




# ಗೊಮ್ಮಟನ ಗಾತ್ರ ಅಳೆದವರು ಯಾರು?

ಜೈನ ಧರ್ಮದ ಮುಖ್ಯ ತತ್ವ ಅನೇಕಾಂತವಾದ. ಅಂದರೆ ಸತ್ಯಕ್ಕೆ ಅನೇಕ ಮುಖ ಇವೆ ಎಂದು ಅರ್ಥ. ಹಾಗೆಯೇ ಬೆಳಗೊಳದ ಗೊಮ್ಮಟ ಮೂರ್ತಿಯ ಅಳತೆಯ ಕಥೆಯೂ ಆಗಿದೆ. ಇಂಥ ಬೃಹತ್ ಮೂರ್ತಿಯ ಉದ್ದ ಎಷ್ಟು? ಬೆಳಗೊಳದ ಚಾರುಕೀರ್ತಿ ಭಟ್ಟಾರಕರ ಪ್ರಕಾರ ಅದು 58 ಅಡಿ. ಆದರೆ, ಖ್ಯಾತ ಇತಿಹಾಸ ತಜ್ಞ ಡಾ.ಎಸ್.ಶೆಟ್ಟ ಅವರ ಪ್ರಕಾರ ಅದು 58.8 ಅಡಿ. 1981ರ ಸಹಸ್ರಾಬ್ದಿ ಅಭಿಷೇಕಕ್ಕಿಂತ ಮುಂಚೆ ಶೆಟ್ಟ ಅವರ ನೇತೃತ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ

ಭಾರತೀಯ ಕಲಾ ಇತಿಹಾಸ ಸಂಸ್ಥೆ 1980ರ ನವೆಂಬರ್‌ನಲ್ಲಿ ಥಿಯೋಡಿಲೈಟ್ ಉಪಕರಣದ ಮೂಲಕ ಮೂರ್ತಿಯ ಅಳತೆ ಮಾಡಿತ್ತು.

1820ರಲ್ಲಿ ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಸ್ಥಾನದಲ್ಲಿ ಇದ್ದ ಶಾಂತರಾಜು ಪಂಡಿತರು ವಿಗ್ರಹದ ಉದ್ದ 36 1/8 ಮೊಳ ಎಂದು ಹೇಳಿದ್ದರು. ಸರ್ ಆರ್ಥರ್ ವೆಲ್ಲಸ್ಲಿ 60.3 ಅಡಿ ಎಂದಿದ್ದರು. 1871ರಲ್ಲಿ ಲೋಕೋಪಯೋಗಿ ಇಲಾಖೆ ಮಹಾ ಶಿಲ್ಪವನ್ನು ಅಳೆದು 56 ಅಡಿ ಎಂದಿತ್ತು. 1957ರಲ್ಲಿ ಮೈಸೂರು ಪುರಾತತ್ವ ಇಲಾಖೆ 58 ಅಡಿ ಎಂದಿತ್ತು.


**ಇಲ್ಲಿ ಭಾರತೀಯ ಕಲಾ ಇತಿಹಾಸ ಸಂಸ್ಥೆ ನೀಡಿದ ಮೂರ್ತಿಯ ವಿವಿಧ ಅಂಗಗಳ ಅಳತೆಯ ವಿವರಗಳು ಇವೆ.**

| | | |
|---|---|---|
| ಒಟ್ಟು ಎತ್ತರ | – | 58.8 (ಎಲ್ಲವೂ ಅಡಿಗಳಲ್ಲಿ) |
| ಪಾದ | - | 2.8 |
| ಪಾದದಿಂದ ಮೊಣಕಾಲು | – | 15.2 |
| ಪಾದದಿಂದ ಟೊಂಕ | – | 31.4 |
| ಪಾದದಿಂದ ಹೊಕ್ಕಳು | - | 34.1 |
| ಪಾದದಿಂದ ಕತ್ತಿನ ರೇಖೆ | - | 45.10 |
| ಪಾದದಿಂದ ಕತ್ತು | - | 47.8 |
| ಕತ್ತಿನ ರೇಖೆಯಿಂದ ಕತ್ತಿನ ಎತ್ತರ | - | 2.8 |
| ಕತ್ತಿನ ಮೇಲ್ಭಾಗದಿಂದ ನೆತ್ತಿ | - | 11 |
| ಬಾಹುಗಳ ಉದ್ದ | – | 30 |
| ಕಿವಿಯ ಉದ್ದ | - | 5.10 |



| | | |
|---|---|---|
| ನಾಸಿಕದ ಉದ್ದ | – | 3.9 |
| ಕೈಯ ಉದ್ದ | – | 30 |
| ಮಧ್ಯದ ಬೆರಳು | – | 8 |
| ತೋರು ಬೆರಳು | – | 7 |
| ಹೆಬ್ಬೆರಳು | – | 5 |
| ದೇಹದ ಅಗಲ | | |
| ಕಿವಿಯಿಂದ ಕಿವಿಗೆ | – | 8.10 |
| ಟೊಂಕ | – | 9.1 |
| ಭುಜ | – | 23.9 |
| ಎದೆ | – | 12.8 |
| ಕತ್ತು | – | 6.4 |
| ಮುಖ | – | 11 |




ಮಹಾ ಮಸ್ತಕಾಭಿಷೇಕ

ಶ್ರವಣ ಬೆಳಗೊಳದಲ್ಲಿ ಬಾಹುಬಲಿ ಮೂರ್ತಿ ಪ್ರತಿಷ್ಠಾಪನೆಯಾದ ಲಾಗಾಯ್ತಿನಿಂದ ಮಹಾಮಸ್ತಕಾಭಿಷೇಕದ ಕಲ್ಪನೆ ರೂಪುಗೊಂಡಿದೆ. ಚಾವುಂಡರಾಯ ಈ ಮೂರ್ತಿ ಕೆತ್ತನೆ ಮುಗಿಸಿದ ನಂತರ ಮೊದಲ ಬಾರಿಗೆ, ಮಾಡಿಸಿ ಬಹುಶಃ ಮೂರ್ತಿಯ “ಪ್ರತಿಷ್ಠಾಪನೆ'ಯ ವಿಧ್ಯುಕ್ತ ಕ್ರಿಯೆ ನೆರವೇರುವಾಗಲೇ ಮೊದಲ ಮಹಾಮಸ್ತಕಾಭಿಷೇಕವನ್ನು ನೆರವೇರಿಸಿದ. ಏಕೆಂದರೆ ಶಿಲ್ಪಿ ಕಟೆದ ಮೂರ್ತಿ ಪೂಜೆಗೆ ಅರ್ಹವಲ್ಲ. ಅದಕ್ಕೆ ಪ್ರತಿಷ್ಠಾಪನೆಯ ವಿಧ್ಯುಕ್ತಕ್ರಿಯೆಗಳನ್ನು ಪೂರೈಸಲೇಬೇಕು. ಇದು ಬರೀ ಜೈನ ಧರ್ಮಕ್ಕೆ ಮಾತ್ರ ಮೀಸಲಾದ ಧಾರ್ಮಿಕ ವಿಧಿಯಲ್ಲ. ಹಿಂದೂ ಮತ್ತು ಬೌದ್ಧ ಮತದಲ್ಲಿಯೂ ಈ ಕ್ರಿಯೆಯನ್ನು ನೆರವೇರಿಸಲಾಗುತ್ತದೆ. ಎಲ್ಲ ದೇವರಿಗೂ ಪೂಜೆ, ಅಭಿಷೇಕ ಅಗತ್ಯ. ಬಾಹುಬಲಿಯಂಥ ಬೃಹತ್ ವಿಗ್ರಹಕ್ಕೆ ಇದನ್ನು ನಿತ್ಯ ಮಾಡಲು ಆಗದು. ಪ್ರತಿದಿನ ಪಾದಪೂಜೆ ಮಾತ್ರ ಮಾಡಬಹುದು. ಅದಕ್ಕಾಗಿ 12 ವರ್ಷಕ್ಕೆ ಒಮ್ಮೆ ಬಾಹುಬಲಿ ವಿಗ್ರಹಕ್ಕೆ ಮಹಾ ಮಸ್ತಕಾಭಿಷೇಕ ವಾಡ ಲು ನಿರ್ಧರಿಸಲಾಯಿತು. ಇಷ್ಟು ಬೃಹತ್ ಗಾತ್ರದ ಮೂರ್ತಿಯ ಮಸ್ತಕಕ್ಕೆ ಅಭಿಷೇಕ ಮಾಡಲು ತುಂಬ ಖರ್ಚು ಬರುತ್ತದೆ ಎಂಬ ಕಾರಣದಿಂದಲೂ 12 ವರ್ಷಗಳ ಒಂದು ಅವಧಿಯನ್ನು ರೂಪಿಸಿರಬೇಕು. ಮೊದಲ ಮಹಾ ಮಸ್ತಕಾಭಿಷೇಕ ನಡೆದುದ ಕ್ರಿ.ಶ. 981ರಲ್ಲಿಯೇ, ಮೂರ್ತಿ ಸ್ಥಾಪನೆಯಾದ ತದನಂತರ,



"ದೇವಚಂದ್ರನ ರಾಜಾವಳಿ ಕಥೆ” ಕಾವ್ಯದಲ್ಲಿ ಚಾವುಂಡರಾಯ ಮಾಡಿಸಿದ ಅಭಿಷೇಕದ ಮಾಹಿತಿ ಕಣ್ಣಿಗೆ ಕಟ್ಟುವಂತೆ ಇದೆ. ಚಾವುಂಡರಾಯ, ಬಾಹುಬಲಿಗೆ ಜಲ, ಕೇಸರಿ, ಅರಿಶಿಣ ಮತ್ತು ಹಾಲಿನಿಂದ ಪಂಚಾಮೃತ ಅಭಿಷೇಕ ಮಾಡಿಸಿದ. ಆದರೆ, ಆ ಭವ್ಯ ವಿಗ್ರಹದ ಮೊಣಕಾಲನ್ನು ಕೂಡ ಆ ಪಂಚಾಮೃತ ದಾಟಿ ಬರಲಿಲ್ಲ. ಯಕ್ಷಿ ಕೂಷ್ಮಾಂಡಿನಿದೇವಿ ಬಡ ವೃದ್ಧೆಯ ವೇಷ ಧರಿಸಿಕೊಂಡು ಪುಟ್ಟ ಬಟ್ಟಲಲ್ಲಿ ಹಾಲು ಹಿಡಿದುಕೊಂಡು ಬೆಟ್ಟ ಏರುತ್ತ ಚಾವುಂಡರಾಯನ ಮುಂದೆ ಬಂದು ನಿಂತಳು, ತಾನೂ ಅಭಿಷೇಕ ಮಾಡುವುದಾಗಿ, ರಾಯ ಆಕೆಯ ಮಾತು ಕೇಳಿ ನಕ್ಕ. ತನ್ನಂಥ ಸೇನಾನಿಯೇ ಕೊಡಗಟ್ಟಲೇ ಹಾಲು ಹಾಕಿದರೂ ಮೂರ್ತಿಯ ನಡುಭಾಗ ಮಾತ್ರವೂ ತೊಯ್ಯದೇ ಇರುವಾಗ, 'ಈ ಮುದುಕಿಯದೇನು ಆಟವೇ' ಎಂದ. ಆದರೂ ಪಟ್ಟು ಬಿಡದ ಆ ವೃದ್ಧೆಯ ಹಟದಿಂದ ಸೋತು ಮೇಲೆ ಹೋಗಲು ಬಿಟ್ಟ, ಗುಳ್ಳಕಾಯಿ ಹಿಡಿದು ಬಂದಿದ್ದ ಅಜ್ಜಿ ಮೇಲೆ ಹೋಗಿ ಸ್ವಾಮಿಯ ತಲೆಯ ಮೇಲೆ ಹಾಲು ಹಾಕಿದಳು. ಏನಾಶ್ಚರ್ಯ! ಇಡೀ ಮೂರ್ತಿಯ ಮೈ ತೊಯ್ದು ಹೋಯಿತು. ಅಭಿಷೇಕ ಪೂರ್ಣವಾಯಿತು. ಅಜ್ಜಿ



ಬಟ್ಟಲಿನಿಂದ ಸುರಿದ ಹಾಲು ಹೊಳೆಯಾಗಿ ಹರಿಯಿತು. ಬೆಟ್ಟದ ಕೆಳಗಿನ ಕೊಳವನ್ನು ಸೇರಿತು... ಮೂರ್ತಿಯ ಕೆಳಗೆ ನಿಂತಿದ್ದ ಚಾವುಂಡರಾಯ ನತಮಸ್ತತಕನಾದ. ಗರ್ವ ಕೆಟ್ಟುದು ಅಂದುಕೊಂಡ. ತಾನು ಮಾಡಿದೆ ಎಂಬ ಭಾವ ತನ್ನಲ್ಲಿ ತುಂಬಿತ್ತು ಎಂಬುದನ್ನು ಅರಿತ. ಜೈನ ಕಾವ್ಯಗಳಲ್ಲಿ ಚಕ್ರವರ್ತಿಗಳ, ಮಂತ್ರಿಗಳ ಹಾಗೂ ಸೇನಾಪತಿಗಳ ಗರ್ವಭಂಗದ ಇಂಥ ಕಥೆಗಳು ಬಹಳ ಇವೆ.

ಬಾಹುಬಲಿಯ ಮೂರ್ತಿಯನ್ನು ನೋಡಿಕೊಂಡು ಹೊರಗೆ ಬಂದರೆ ನಿಮಗೆ ಗುಳ್ಳಕಾಯಜ್ಜಿಯ ಮೂರ್ತಿ ಕಾಣಸಿಗುತ್ತದೆ. ಈಗಲೂ ಚಾವುಂಡರಾಯನಿಗೆ ವಿನಯ ಕಲಿಸಿದ ಬಹುದೊಡ್ಡ ಪ್ರತಿಮೆಯಾಗಿ ಗುಳ್ಳಕಾಯಜ್ಜಿ ನಿಂತಿದ್ದಾಳೆ. ಆಕೆ ನಮಗೆ ಕೂಡ ವಿನಯ ಕಲಿಸುತ್ತಿದ್ದಾಳೆ. ಅಂಥ ಒಂದು ಭವ್ಯ (ಬಾಹುಬಲಿ) ಪ್ರತಿಮೆ ಎದುರು ಒಬ್ಬ ಸಾಮಾನ್ಯ ಮಹಿಳೆಯ ಪ್ರತಿಮೆ ಇರುವುದು ಕೇವಲ ಶ್ರವಣ ಬೆಳಗೊಳದಲ್ಲಿ ಮಾತ್ರ ಈ ಸಾರಿಯ ಮಹಾಮಸ್ತಕಾಭಿಷೇಕದ ಲಾಂಛನದಲ್ಲಿ ಗುಳ್ಳಕಾಯಜ್ಜಿ ಇರುವುದು ಒಂದು ಬಹುದೊಡ್ಡ ವಿಶೇಷವಾಗಿದೆ. ಜೈನ ಮಹಿಳೆಯರಿಗೆ ಪೂಜೆಯ ಹಕ್ಕು ಕೊಡುವ ಬಹುದೊಡ್ಡ ಸಂಕೇತವಾಗಿ ಅದು ಕಾಣುತ್ತದೆ.

ಆಗಿನಿಂದ ಅಂದರೆ ಚಾವುಂಡರಾಯನ ಕಾಲದಿಂದ ಈಗಿನ ವರೆಗೆ 12 ವರ್ಷಕ್ಕೊಮ್ಮೆ ಎಂಬ ನಿಯಮದಂತೆ ಮಹಾ ಮಸ್ತಕಾಭಿಷೇಕವನ್ನು ಮಾಡಿಕೊಂಡು ಬರಲಾಗಿದೆ. ಕೆಲವು ಸಾರಿ ಇದು ಅಗಿರದೇ ಇರಬಹುದು. ಏಕೆಂದರೆ ದಾಖಲೆಗಳಲ್ಲಿ ಎಲ್ಲ ಅಭಿಷೇಕಗಳ ಮಾಹಿತಿ ಇಲ್ಲ. 1981ರ ಫೆಬ್ರುವರಿಯಲ್ಲಿ ನಡೆದುದು ಬಾಹುಬಲಿ ಮೂರ್ತಿಗೆ ಒಂದು ಸಾವಿರ ವರ್ಷ ತುಂಬಿದ ಸಂದರ್ಭದ ಅಭೂತಪೂರ್ವ ಮಹಾ ಮಸ್ತಕಾಭಿಷೇಕ. ಈಗ 2018ರ ಫೆಬ್ರುವರಿಯಲ್ಲಿ ಮತ್ತೆ ಮಹಾ ಮಸ್ತಕಾಭಿಷೇಕ ನಡೆಯುತ್ತದೆ.

ಅಭಿಷೇಕದ ಮುಹೂರ್ತವನ್ನು ನಿಗದಿ ಮಾಡುವುದಕ್ಕೆ ಮುನ್ನ ಶ್ರವಣ ಬೆಳಗೊಳದ ಜೈನ ಮಠ ಮತ್ತು ಅದರ ಪಿಠಾಧಿಪತಿಗಳಾದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ಬಹಳಷ್ಟು ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ತುಂಬ ಹಣವೂ ಬೇಕಾಗುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೋಟಿಗಟ್ಟಲೆ ಹಣ ಖರ್ಚು ಮಾಡಬೇಕಾಗುತ್ತದೆ. ಈ ಹಣವನ್ನು ಧಾರ್ಮಿಕ ವಿಧಿಗಳನ್ನು ಪೂರೈಸಲು ಖರ್ಚು ಮಾಡುವುದಿಲ್ಲ ಎಂಬುದು ಅನೇಕರಿಗೆ ತಿಳಿಯದ ವಿಚಾರ. ಧಾರ್ಮಿಕ ವಿಧಿಗಳಿಗೆ, ಅಭಿಷೇಕದ ಕಳಸಗಳನ್ನು ಮಾರಾಟ ಮಾಡುವುದರಿಂದ ಬರುವ ಹಣವನ್ನು ಮಾತ್ರ ಬಳಸಿಕೊಳ್ಳಲಾಗುತ್ತದೆ. ಆದರೆ, ಇಂಥ ಒಂದು ಸಂದರ್ಭದಲ್ಲಿ ಭಾಗವಹಿಸಲು ದೇಶ-ವಿದೇಶಗಳಿಂದ ಲಕ್ಷಾಂತರ ಜನರು ಬರುತ್ತಾರೆ. ಅವರಿಗೆ ವಸತಿ, ಕುಡಿಯಲು ನೀರು, ಶೌಚ ಮುಂತಾದುದಕ್ಕೆಲ್ಲ ಸರ್ಕಾರದ ಸ್ವಾಗತ ಸಮಿತಿಯೇ ಖರ್ಚು ಮಾಡುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 2006ರ ಮಹಾ ಮಸ್ತಕಾಭಿಷೇಕಕ್ಕೆ ಬಿಡುಗಡೆ ಮಾಡಿದ್ದ 100 ಕೋಟಿ ರೂಪಾಯಿ ಅನುದಾನವು ಕುಡಿಯುವ ನೀರು, ಅತಿಥಿಗೃಹ ನಿರ್ಮಾಣ, ಆರೋಗ್ಯಧಾಮಗಳ ಸ್ಥಾಪನೆ, ರೈಲು ಸಂಪರ್ಕ, ಅಟ್ಟಣಿಗೆ ನಿರ್ಮಾಣ ಮುಂತಾದ ಮೂಲ ಸೌಕರ್ಯಗಳಿಗಾಗಿ ವ್ಯಯವಾಯಿತು.

2018ರ ಮಹಾಮಸ್ತಕಾಭಿಷೇಕದ ಏರ್ಪಾಡಿಗಾಗಿಯೇ ರಾಜ್ಯ ಸರ್ಕಾರ ಆಯವ್ಯಯದಲ್ಲಿ 175ಕೋಟಿ ರೂಪಾಯಿ ಒದಗಿಸಿದೆ. ಈ ಎಲ್ಲ ಮೊತ್ತವನ್ನು ಶ್ರವಣಬೆಳಗೊಳಕ್ಕೆ ಬರುವ ಭಕ್ತರಿಗೆ ಮೂಲ ಸೌಕರ್ಯ ಒದಗಿಸಲು ಬಳಸಲಾಗುತ್ತದೆ. ಈ ಸಾರಿ ಜರ್ಮನ್ ತಂತ್ರಜ್ಞಾನ ಬಳಸಿ ಅಟ್ಟಣಿಗೆ ನಿರ್ಮಿಸಲಾಗಿದೆ. 5,000 ಜನರಿಗೆ ಕುಳಿತುಕೊಳ್ಳಲು ಅವಕಾಶ ಇರುತ್ತದೆ.

ಸೇರಿದ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಮಹಾಮಸ್ತಕಾಭಿಷೇಕ ನಡೆಯುತ್ತದೆ. ಅದು ನಡೆಯುವ ದಿನ ಬಾಹುಬಲಿ ಮೂರ್ತಿಯ ಸಮ್ಮುಖದಲ್ಲಿನ ಪ್ರಾಂಗಣದಲ್ಲಿ 1008 ಕಳಸಗಳನ್ನು ಶುದ್ಧ ಜಲದಿಂದ ತುಂಬಿ ಇಟ್ಟಿರುತ್ತಾರೆ. ಆದರೆ, ಬಾಹುಬಲಿ ಮೂರ್ತಿಯ ಹಿಂಭಾಗದಲ್ಲಿ ನಿರ್ಮಿಸಿರುವ ಅಟ್ಟಣಿಗೆಯ ಮೇಲೆ ವಿಶೇಷ ಲಿಫ್ಟ್ ಮೂಲಕ ಕೊಡಗಳಲ್ಲಿ ತುಂಬಿದ ಪಂಚಾಮೃತ ದ್ರವಗಳನ್ನು ಒಯ್ದು ಇಟ್ಟಿರುತ್ತಾರೆ. ಆ ಕೊಡಗಳಿಂದಲೇ ಧಾರಾಕಾರವಾಗಿ ಅಭಿಷೇಕ ನಡೆದಾಗ ಮಾತ್ರ ಮೂರ್ತಿಯ ಇಡೀ ದೇಹ ತೊಯ್ಯುತ್ತದೆ. ಮೊದಲು ಅಭಿಷೇಕ ಮಾಡುವ ಗೌರವ ಆಯಾ ಮಹಾಮಸ್ತಕಾಭಿಷೇಕದ ಸಮಯದಲ್ಲಿ ಉಪಸ್ಥಿತರಿರುವ ದಿಗಂಬರ ಮುನಿವರ್ಯರಿಗೆ, ಆಚಾರ್ಯರಿಗೆ, ನಂತರ ಜೈನ ಮಠದ ಪೀಠಾಧಿಪತಿಗಳೂ ಆದ ಶ್ರೀ ಚಾರುಕೀರ್ತಿ ಭಟ್ಟಾರಕರ ಸರದಿ.





ತದನಂತರ ಗಣ್ಯರಿಂದ, ಹರಾಜಿನಲ್ಲಿ ಲಕ್ಷಾಂತರ ರೂಪಾಯಿ ಹಣ ಕೊಟ್ಟು ಕಳಸ ಕೊಂಡವರಿಂದ ಅಭಿಷೇಕ. ಅವರು ಅಭಿಷೇಕ ಮಾಡುತ್ತಿದ್ದಂತೆಯೇ ಜಯಘೋಷಗಳು ಮುಗಿಲು ಮುಟ್ಟುತ್ತವೆ. "ರಂಗಮಾ, ರಂಗಮಾ", "ಕೇಸರಿಯಾ, ಕೇಸರಿಯಾ" ಹಾಡು ದಿಗಂತವನ್ನು ತಲುಪುತ್ತದೆ. ಬಾಹುಬಲಿಯ ಕಾಲಿನ ಬಳಿ ನಿಂತ ಭಕ್ತರು ಹುಚ್ಚೆದ್ದು ಕುಣಿಯುತ್ತಾರೆ. ನರ್ತನ ಮಾಡುತ್ತಾರೆ.

ಮೊದಲು ಜಲಾಭಿಷೇಕ ನಡೆಯುತ್ತದೆ. ಎಳನೀರು, ಕಬ್ಬಿನ ಹಾಲು, ಚಂದನ, ಕೇಸರಿ, ಅಕ್ಕಿ ಹಿಟ್ಟು, ಹಾಲು ಹೀಗೆ ವಿವಿಧ ದ್ರವಗಳಿಂದ ಅಭಿಷೇಕ ನಡೆಯುವಾಗ ಬಾಹುಬಲಿ ಮೂರ್ತಿ ಒಂದೊಂದು ಬಣ್ಣ. ರೂಪ ತಳೆದು ನೋಡುಗರಲ್ಲಿ ಅಪರೂಪದ ಭಕ್ತಿ ಭಾವವನ್ನು ತುಂಬುತ್ತದೆ. ಎಲ್ಲ ಕಳಸಗಳ ಅಭಿಷೇಕ ಮುಗಿದ ನಂತರ ಧನ ಹಾಗೂ ಕನಕ ವೃಷ್ಟಿ ಕೊನೆಯದಾಗಿ ಪುಷ್ಪವೃಷ್ಟಿಯಾಗುತ್ತದೆ. ಪ್ರಧಾನಿಯಂಥ ಗಣ್ಯರು ಬಂದರೆ ಅವರು ಕೂಡ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡುತ್ತಾರೆ. ಕೊನೆಯಲ್ಲಿ ಮಂಗಳಾರತಿ.

ಅಷ್ಟು ದೊಡ್ಡ ಮೂರ್ತಿಗೆ ನಡೆಯುವ ಮಂಗಳಾರತಿ ಕೂಡ ಒಂದು ಅಪರೂಪದ ಭಕ್ತಿ ಭಾವ ತುಂಬುವ ದೃಶ್ಯ. ಮಂಗಳಾರತಿಗಿಂತ ಮುಂಚೆ ಅಂಥ ಭವ್ಯ ಮೂರ್ತಿಗೆ ಅಡಿಯಿಂದ ಮುಡಿಯ ವರೆಗಿನ ಒಂದು ದೊಡ್ಡ ಹೂಮಾಲೆಯನ್ನು ಹಾಕುವುವನ್ನು ನೋಡುವುದೇ ಒಂದು ಭಾಗ್ಯ, ನಂತರ ನಡೆಯುವ ಮಂಗಳಾರತಿಗೆ ಕೂಡ ವಿಶೇಷ ಬಗೆಯ ತಂತ್ರಜ್ಞಾನದ ಬಳಕೆಯಾಗುತ್ತದೆ. 58.8 ಅಡಿ ಎತ್ತರದ ಪ್ರತಿಮೆಗೆ ಮಂಗಳಾರತಿ ಮಾಡುವುದು ಸಣ್ಣ ಸಂಗತಿಯಲ್ಲ. ಆ ದಿವ್ಯ ಜ್ಯೋತಿಯನ್ನು ಬೆಳಗಿಸಿ ಅದನ್ನು ಬಲಬದಿಯಿಂದ ಎಡಬದಿಗೆ ತೂಗು ಬಿಟ್ಟಾಗ ಅದು ಹಾಗೆಯೇ ತೂಗುತ್ತ ಮೂರ್ತಿಯ ಮುಖದ ವರೆಗೆ ಹೋಗುತ್ತದೆ. ಅಲ್ಲಿಗೆ ಅಂದಿನ ಮಹಾಮಸ್ತಕಾಭಿಷೇಕ ಪೂರ್ಣಗೊಂಡಂತೆ ಆಗುತ್ತದೆ.

ಶ್ರವಣಬೆಳಗೊಳದ ಸ್ವಸ್ತಿಶ್ರೀ ಜಗದ್ಗುರು ಚಾರುಕೀರ್ತಿ ಭಟ್ಟಾರಕರ ನೇತೃತ್ವದಲ್ಲಿ ನಡೆಯುತ್ತಿರುವ ನಾಲ್ಕನೇ ಮಹಾಮಸ್ತಕಾಭಿಷೇಕವಿದು. ಈ ಮೊದಲು 1981, 1993 ಹಾಗೂ 2006ರ ಮಹಾಮಸ್ತಕಾಭಿಷೇಕದ ನೇತೃತ್ವವನ್ನು ಅವರು ವಹಿಸಿದ್ದರು. ಇದು ಒಂದು ಅಪೂರ್ವ ಹಾಗೂ ಅಪರೂಪದ ದಾಖಲೆ.

ಈ ಮೊದಲು ನಡೆದ ಅಭಿಷೇಕಗಳ ಮಾಹಿತಿ ಇಂತಿದೆ.

ಕ್ರಿ.ಶ. 1398-ಶಾಸನಗಳಲ್ಲಿ ಸಿಗುವ ಮೊದಲ ದಾಖಲೆ ಇದು. ಪಂಡಿತಾಚಾರ ಎನ್ನುವವರು ಏಳು ಮಹಾ ಮಸ್ತಕಾಭಿಷೇಕ ಮಾಡಿದ್ದರು ಎಂದು ಈ ದಾಖಲೆ ಹೇಳುತ್ತದೆ.

ಕ್ರಿ.ಶ. 1612 – ಶಾಂತಿವರ್ಣಿ ಎಂಬುವರು ಮಹಾ ಮಸ್ತಕಾಭಿಷೇಕ ನೆರವೇರಿಸಿದರು

ಕ್ರಿ.ಶ. 1659 – ಮೈಸೂರಿನ ಮಹಾರಾಜ ದೊಡ್ಡ ದೇವರಾಜ ಒಡೆಯರ್ ಅವರಿಂದ

ಕ್ರಿ.ಶ. 1677 - ಮೈಸೂರಿನ ಮಹಾರಾಜ ಚಿಕ್ಕದೇವರಾಜ ಒಡೆಯರ್ ಅವರ ಜೈನ ಮಂತ್ರಿ ವಿಶಾಲಾಕ್ಷ ಪಂಡಿತನಿಂದ

ಕ್ರಿ.ಶ. 1800 – ಮೈಸೂರಿನ ಮೂರನೇ ಕೃಷ್ಣರಾಜ ಒಡೆಯರ್ ಅವರಿಂದ ಕ್ರಿ.ಶ.

1825 ಮಹಾರಾಜ ಮೂರನೇ ಕೃಷ್ಣರಾಜ ಒಡೆಯರ್ ಅವರಿಂದ

ಕ್ರಿ.ಶ 1871 - ಕ್ಯಾಪ್ಟನ್ ಜೆ.ಎಸ್.ಎಫ್ ಮೆಕೆಂಝಿ ಅವರಿಂದ


ಕ್ರಿ.ಶ. 1887 - ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿಗಳು ರೂ.30,000 ವೆಚ್ಚದಲ್ಲಿ ಅಭಿಷೇಕ ಮಾಡಿಸಿದರು. (ಮೊದಲ ಬಾರಿಗೆ ಖರ್ಚು ವೆಚ್ಚದ ವಿವರ ಸಿಗುವುದು ಈಗಲೇ)

1900, 1910, 1925, 1940, 1953, 1967 (one o ಹೆಲಿಕಾಪ್ಟರ್ ಬಳಸಿ ಆಕಾಶದಿಂದ ಪುಷ್ಪವೃಷ್ಟಿ ನಡೆದಿತ್ತು), 1981ರಲ್ಲಿ ಬಾಹುಬಲಿ ಸಹಸ್ರಾಬ್ಧಿ ಅಭಿಷೇಕ. 2006ರಲ್ಲಿ ನಡೆದುದು ಇದುವರೆಗಿನ ಕೊನೆಯ ಅಭಿಷೇಕ. ಅದು ಈ ಸಹಸ್ರಮಾನದ ಮೊದಲ ಮಹಾ ಮಸ್ತಕಾಭಿಷೇಕ.

ಈ ಸಾರಿ 2018ರ ಫೆಬ್ರವರಿ 17 ರಿಂದ ಅಭಿಷೇಕ ನಡೆಯಲಿದೆ. ಈ ಸಹಸ್ರಮಾನದಲ್ಲಿ ನಡೆಯುವ ಎರಡನೇ ಮಹಾಮಸ್ತಕಾಭಿಷೇಕ ಇದು. 2006 ಮಹಾಮಸ್ತಕಾಭಿಷೇಕ ಸಮಯದಲ್ಲಿ ಅದೇ ಮೊದಲ ಬಾರಿ ಗುಳ್ಳಕಾಯಜ್ಜಿ ಕಳಸಗಳನ್ನು ಬಳಸಿ ಅಭಿಷೇಕ ಮಾಡಲಾಯಿತು. ದುಡ್ಡು ಕೊಟ್ಟು ಕಳಸ ಖರೀದಿಸಲಾಗದ ಬಡವರಿಗೆ ಆ ಕಳಸಗಳನ್ನು ಮೀಸಲು ಇಡಲಾಗಿತ್ತು.

ಈ ಸಾರಿಯ ಮಹಾ ಮಸ್ತಕಾಭಿಷೇಕದ ಧಾರ್ಮಿಕ ವಿಧಿ ವಿಧಾನಗಳು ಫೆಬ್ರುವರಿ 7 ರಂದು ಆರಂಭವಾಗಲಿದ್ದು ಪ್ರಥಮ ತೀರ್ಥಂಕರ ಅದಿನಾಥರ ಪಂಚಕಲ್ಯಾಣವು ಮೊದಲ ಕಾರ್ಯಕ್ರಮವಾಗಿರುತ್ತದೆ. ಫೆ. 16 ರಂದು ನಡೆಯುವ ಜಿನಗುಣ ಸಂಪತ್ತಿ ಭವ್ಯ ಆರಾಧನೆಯೊಂದಿಗೆ ಈ ಧಾರ್ಮಿಕ ವಿಧಿಗಳು ಪೂರ್ಣಗೊಳ್ಳುತ್ತವೆ. ಫೆ. 17 ರಂದು ಮೊದಲ

ಮಹಾಮಸ್ತಕಾಭಿಷೇಕ ನಡೆಯಲಿದೆ. ಮೊದಲ ದಿನ 108 ಕಳಸಗಳ ಅಭಿಷೇಕ ಮಾತ್ರ ನಡೆಯಲಿದೆ. ಫೆಬ್ರುವರಿ 26 ರಂದು ಸಮಾರೋಪ ಸಮಾರಂಭ ನಿಗದಿಯಾಗಿದೆ.



**ಅಭಿಷೇಕದ ಕ್ರಮ**

1. ಜಲಾಭಿಷೇಕ
2. ಎಳನೀರು
3. ಕಬ್ಬಿನ ರಸ
4. ಕ್ಷೀರ
5. ಶ್ವೇತ ಕಲ್ಕ ಚೂರ್ಣ

6. ಅರಿಶಿಣ

7. ಗಿಡ ಮೂಲಿಕೆ ಕಷಾಯ

8. ಪ್ರಥಮ ಕೋನ ಕಳಸ

9. ದ್ವಿತೀಯ ಕೋನ ಕಳಸ

10. ತೃತೀಯ ಕೋನ ಕಳಸ

11. ಚತುರ್ಥ ಕೋನ ಕಳಸ

12. ಶ್ರೀಗಂಧ

13. ಚಂದನ

14. ಅಷ್ಟಗಂಧ

15. ಕೇಸರ ವೃಷ್ಟಿ

16. ರಜತ ಸೃಷ್ಟಿ

17. ಸುವರ್ಣ ವೃಷ್ಟಿ

18. ಪುಷ್ಪ ವೃಷ್ಟಿ

19. ಪೂರ್ಣ ಕುಂಭ


20. ಇಂದ್ರ, ಅಷ್ಟದ್ರವ್ಯ ಪೂಜೆ

21. ಮಹಾಮಂಗಳಾರತಿ

ಕಳಸಗಳ ವರ್ಗೀಕರಣ

| | | |
|---|---|---|
| ಪ್ರಥಮ ಕಳಸ | ಸುವರ್ಣ ಕಳಸ | ಕಾಂಸ್ಯ ಕಳಸ |
| ಶತಾಬ್ದಿ ಕಳಸ | ದಿವ್ಯ ಕಳಸ | ಶುಭಮಂಗಳ ಕಳಸ |
| ನವರತ್ನ | ಕಳಸ ರಜತ ಕಳಸ | ಜನಮಂಗಳ ಕಳಸ |
| ರತ್ನ ಕಳಸ | ತಾಮ್ರ ಕಳಸ | ಗುಳಕಾಯಜ್ಜಿ ಕಳಸ |


# ಶ್ರವಣಬೆಳಗೊಳವನ್ನು ತಲುಪುವ ಬಗೆ




ಬೆಂಗಳೂರಿನಿಂದಾಗುವ ದೂರ (ಕಿ.ಮೀ.) ಶ್ರವಣಬೆಳಗೊಳದಿಂದಾಗುವ ದೂರ (ಕಿ.ಮೀ.)

| | | | | | | | |
|---|---|---|---|---|---|---|---|
| ಐಹೊಳೆ | 510 | ಕನಕಗಿರಿ | 195 | ಬೆಂಗಳೂರು | 140 | ಬೆಳಗಾವಿ | 480 |
| ಬಾಬಾನಗರ | 600 | ಲಕ್ಕುಂಡಿ | 460 | ಬೇಲೂರು | 89 | ವಿಜಯಪುರ | 712 |
| ಬಾದಾಮಿ | 499 | ಮಂಗಳೂರು | 357 | | | | |
| ಬೆಳಗಾವಿ | 502 | ಮೂಡಬಿದರೆ | 391 | ಧರ್ಮಸ್ಥಳ | 173 | ಹಳೆಬೀಡು | 80 |
| ಬೇಲೂರು | 222 | ಮೈಸೂರು | 140 | ಹಾಸನ | 50 | ಹುಬ್ಬಳ್ಳಿ | 364 |
| ವಿಜಯಪುರ | 579 | ನ.ರಾ.ಪುರ | 320 | ಹುಂಚ | 210 | ಜೋಗ್ಫಾಲ್ಸ್ | 270 |

| | | | | | | | |
|---|---|---|---|---|---|---|---|
| ಧರ್ಮಸ್ಥಳ | 320 | (ಸಿಂಹನಗದ್ದೆ) | | | | | |
| ಗೊಮ್ಮಟಗಿರಿ | 160 | ಪಟ್ಟದಕಲ್ಲು | 514 | ಕನಕಗಿರಿ | 145 | ಕಾರ್ಕಳ | 259 |
| ಹಳೇಬೀಡು | 216 | ಶ್ರವಣಬೆಳಗೊಳ | 140 | ಕೆ.ಆರ್.ಸಾಗರ | 93 | ಮಂಗಳೂರು | 225 |
| ಹುಂಚ | 345 | ಶಿವಮೊಗ್ಗ | 273 | ಮೂಡಬಿದಿರೆ | 238 | ಮೈಸೂರು | 89 |
| ಕಾರ್ಕಳ | 378 | ಸೋಂದ | 405 | | | | |
| ಕಂಬದಹಳ್ಳಿ | 160 | ಶ್ರೀರಂಗಪಟ್ಟಣ | 125 | ನ.ರಾ.ಪುರ | 219 | ಶ್ರೀರಂಗಪಟ್ಟಣ | 75 |
| ವೇಣೂರು | 365 | ಸ್ತವನಿಧಿ | 557 | ತುಮಕೂರು | 110 | ವೇಣೂರು | 210 |




ಜೈನ ಧರ್ಮ ಮತ್ತು ಅದರ ಪ್ರಸ್ತುತತೆ

ಜೈನ ಧರ್ಮ ಈ ದೇಶದ ಅನಾದಿ ಧರ್ಮಗಳಲ್ಲಿ ಒಂದು. ಜೈನ ವಿದ್ಯಾಂಸರು ಹೇಳುವುದು ಇದು ಭಾರತದ ಆದಿ ಧರ್ಮಗಳಲ್ಲಿ ಒಂದು ಎಂದು, ಆರ್ಯನ್ನು ಭಾರತಕ್ಕೆ ಬರುವುದಕ್ಕಿಂತ ಮುಂಚೆಯೇ ಈ ಧರ್ಮ ಇಲ್ಲಿ ಅಸ್ತಿತ್ವದಲ್ಲಿ ಇತ್ತು ಎಂದು ಅವರು ಆಧಾರ ಸಹಿತ ವಾದಿಸುತ್ತಾರೆ.

ಅದಕ್ಕೆ ಅವರು ಉಲ್ಲೇಖಿಸುವುದು : 'ಕ್ರಿಪೂ ಆರನೇ ಶತಮಾನದಲ್ಲಿ ಇದ್ದ ಮಹಾವೀರ, ಜೈನಧರ್ಮದ ಸ್ಥಾಪಕನಲ್ಲ. ಆತ ಈ ಧರ್ಮದ 24ನೇ ತೀರ್ಥಂಕರ. ಈತನಿಗಿಂತ ಮುಂಚೆ 23 ಜನ ತೀರ್ಥಂಕರರು ಆಗಿ ಹೋಗಿದ್ದರು. 23ನೇ ತೀರ್ಥಂಕರ ಪಾರ್ಶ್ವನಾಥ ಕ್ರಿ.ಪೂ. 8ನೇ ಶತಮಾನದಲ್ಲಿ ಇದ್ದ ಐತಿಹಾಸಿಕ ವ್ಯಕ್ತಿಯಾದರೆ, 21ನೇ ತೀರ್ಥಂಕರ ನೇಮಿನಾಥರು ಮಹಾಭಾರತದ ಮಹಾಪುರುಷ ಕೃಷ್ಣನ ಸಂಬಂಧಿ ಹಾಗೂ ಸಮಕಾಲೀನ. ಜೈನರ ಮೊದಲ ತೀರ್ಥಂಕರ ವೃಷಭನಾಥ, ಎರಡನೇ ತೀರ್ಥಂಕರ ಅಜಿತನಾಥರ ಬಗೆಗೆ ಯಜುರ್ವೇದದಲ್ಲಿ ಉಲ್ಲೇಖವಿದೆ' ಎಂಬ ದಾಖಲೆಗಳನ್ನು,

ಜೈನ ಧರ್ಮದ ಐತಿಹಾಸಿಕತೆಯನ್ನು ಸಾಬೀತು ಮಾಡುವುದು ಈ ಲೇಖನದ ಉದ್ದೇಶವಲ್ಲ. ಈ ಧರ್ಮದ ತತ್ವಗಳನ್ನು ಸ್ಥೂಲವಾಗಿ ವಿವರಿಸುವುದು ಮತ್ತು ಕರ್ನಾಟಕದ ಜನಜೀವನದ ಮೇಲೆ ಈ ಧರ್ಮ ಮಾಡಿರುವ ಅಗಾಧ ಪ್ರಭಾವವನ್ನು ಗಮನಿಸುವುದು ಮಾತ್ರ ಇದರ ಉದ್ದೇಶ.

ಶ್ರುತಕೇವಲಿ ಮುನಿಗಳು ಚಂದ್ರಗಿರಿ ಬೆಟ್ಟಕ್ಕೆ ಬಂದಾಗಿನಿಂದಲೇ ಕರ್ನಾಟಕದಲ್ಲಿ ಜೈನ ಧರ್ಮದ ಚರಿತ್ರೆ ಶುರುವಾಗುತ್ತದೆ. ಸಾಮ್ರಾಟ ಅಶೋಕನ ಅನೇಕ ಶಾಸನಗಳಲ್ಲಿ ಬೌದ್ಧರ ಜತೆಗೆ ಜೈನರೂ ಕರ್ನಾಟಕದಲ್ಲಿ ವಾಸವಾಗಿದ್ದರು ಎಂಬ ಅಂಶ ಗೊತ್ತಾಗುತ್ತದೆ. ಅಂದರೆ ಸುಮಾರು ಎರಡನೇ ಶತಮಾನದಿಂದ 13ನೇ ಶತಮಾನದ ವರೆಗೆ ಜೈನ ಧರ್ಮ ಪ್ರಭು ಧರ್ಮವಾಗಿಯೇ ಬಾಳಿ ಬೆಳಗಿತು. ಯಾವುದೇ ಪ್ರಭು ಧರ್ಮ, ಪ್ರಜೆಗಳ ಧರ್ಮವೂ ಆಗಿರುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಇದು ಪ್ರಭುಗಳ ಧರ್ಮ ಆಗಿತ್ತು ಎಂಬುದಕ್ಕೆ ನಿದರ್ಶನವಾಗಿಯೇ ನಾಡಿನ ಉದ್ದಗಲಕ್ಕೂ, ಈಗ ಜೈನರ ಜನಸಂಖ್ಯೆ ತೀರಾ ವಿರಳವಾಗಿರುವ ಊರುಗಳಲ್ಲಿಯೂ ಒಂದಲ್ಲ ಒಂದು ಬಸದಿ, ದೇವಸ್ಥಾನ ಕಾಣುತ್ತದೆ. ಕ್ರಿ.ಶ ಮೂರನೇ ಶತಮಾನದಲ್ಲಿ ಗಂಗರಸರು ಜೈನ ಧರ್ಮಕ್ಕೆ ಮೊದಲು ಆಶ್ರಯ ನೀಡಿದರು. ಗಂಗರ ಜತೆಗೆ ಕದಂಬರು ಮತ್ತು ರಾಷ್ಟ್ರಕೂಟರು ಮತ್ತು ಹೊಯ್ಸಳರು ಕೂಡ ಜೈನ ಧರ್ಮಕ್ಕೆ ಸಾಕಷ್ಟು ಆಶ್ರಯ ನೀಡಿದರು. ಅವರ ಕಾಲದಲ್ಲಿ ಜೈನ ಕಲೆ- ಶಿಲ್ಪಕಲೆಗೆ ಉತ್ತೇಜನ ಸಿಕ್ಕಿತು.

ಜೈನ ಧರ್ಮ ಕರ್ಮಸಿದ್ಧಾಂತ ಮತ್ತು ಅದೇ ಕಾರಣದಿಂದ ಪುನರ್ ಜನ್ಮದಲ್ಲಿ ನಂಬಿಕೆ ಇಡುತ್ತದೆ. ಕರ್ಮಬಂಧವನ್ನು ಕಳೆದುಕೊಂಡು ಮೋಕ್ಷ ಸಾಧನೆ ಆಗುವ ವರೆಗೆ ಮನುಷ್ಯ ವಿವಿಧ ಜನ್ಮಗಳನ್ನು ತಾಳುತ್ತಲೇ ಈ ಭವಚಕ್ರದಲ್ಲಿ ತಿರುಗಬೇಕಾಗುತ್ತದೆ. ಆದರೆ, ಮನುಷ್ಯ ಜನ್ಮ ತಾಳಿದಾಗಲೇ ಆತ ಮೋಕ್ಷ ಸಂಪಾದಿಸಲು ಸಾಧ್ಯ. ಅದಕ್ಕಾಗಿ ಮಾನವ ಜನ್ಮ ದೊಡ್ಡದು ಎಂದು ಜೈನ ತೀರ್ಥಂಕರರು ಬೋಧಿಸುತ್ತಾರೆ. ಮೋಕ್ಷಸಾಧನೆಯನ್ನು ರತ್ನ

ತ್ರಯಗಳಾದ ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಗ್ ಚಾರಿತ್ರ್ಯದ ಮೂಲಕ ಸಾಧಿಸಬಹುದು ಎಂದು ಅವರು ಹೇಳುತ್ತಾರೆ.

ಜೈನ ಧರ್ಮವು ಮನುಷ್ಯನೇ ಪರಮಾತ್ಮನಾಗಬಹುದು ಎಂದು ಹೇಳಿದ ಏಕೈಕ ಧರ್ಮ, ಸ್ವಯಂ ಪ್ರೇರಣೆಯ ಪ್ರಯತ್ನವನ್ನು ಅದು ಒತ್ತಿ ಹೇಳುತ್ತದೆ. ಅಂದರೆ ವ್ಯಕ್ತಿಗಳ ನೈತಿಕ ಹೊಣೆಗೆ ಅದು ಒತ್ತು ನೀಡುತ್ತದೆ. ಪ್ರತಿ ಆತ್ಮವೂ ತನ್ನ ಮಟ್ಟಿಗೆ ತಾನೇ ಹೊಣೆ. ತನ್ನ ಅದೃಷ್ಟವನ್ನು ತಾನೇ ರೂಪಿಸಿಕೊಳ್ಳಬೇಕು. ಸ್ವರ್ಗದಲ್ಲಿ ಇರುವ (ಇರಬಹುದಾದ) ಯಾವುದೇ ದೇವ ದೇವತೆಗಳಾಗಲೀ, ಇನ್ನು ಯಾರೇ ಆಗಲಿ, ನಮ್ಮನ್ನು ಉದ್ಧರಿಸಿ ಮೋಕ್ಷ ಒದಗಿಸಲಾರರು ಎಂದು ಜೈನ ಧರ್ಮ ಪ್ರತಿವಾದಿಸುತ್ತದೆ. ತಾನೇ ಮೋಕ್ಷವನ್ನು ಸಾಧಿಸಬೇಕು ಎಂದು ಹೇಳುವ ಜೈನ ಧರ್ಮದಲ್ಲಿ ಅನುಗ್ರಹ ಎಂಬುದಕ್ಕೆ ಸ್ಥಾನವಿಲ್ಲ. ಇದೇ ಕಾರಣವಾಗಿ, ಬೌದ್ಧ ಧರ್ಮದ ಹಾಗೆಯೇ ಇದು ಕೂಡ ನಾಸ್ತಿಕ ಧರ್ಮ ಎಂಬ ವಾದವೂ ಇದೆ. ಆದರೆ, ಮನುಷ್ಯನ 'ನೈತಿಕತೆ'ಯ ಬಗೆಗೆ ಬೌದ್ಧ ಧರ್ಮಕ್ಕಿಂತ ಹೆಚ್ಚಿನ ಆದ್ಯತೆಯನ್ನು ಜೈನ ಧರ್ಮ ನೀಡಿದೆ. ಹಾಗಾಗಿಯೇ ಆಚರಣೆಯ ದೃಷ್ಟಿಯಿಂದ ಇದು ಹೆಚ್ಚು ಕಠೋರ ಧರ್ಮ ಎಂದೂ ಅನಿಸಿತು. ಈ 'ಜೀವನ'ದಿಂದ ಮುಕ್ತಿ ಪಡೆಯಬೇಕಾದರೆ ಮುನಿಯಾಗಬೇಕಾದುದೂ ಅಗತ್ಯ. ಕೇವಲಜ್ಞಾನ ಸಿಕ್ಕ ನಂತರವೇ ಮುಕ್ತಿ ಸಾಧ್ಯವಾಗುತ್ತದೆ. ಆಗ ಮುನಿಯ ದೇಹ ಕರ್ಪೂರದಂತೆ ಕರಗಿ ದಿವ್ಯದಲ್ಲಿ ಲೀನವಾಗಿ ಹೋಗುತ್ತದೆ.

ಜೈನಧರ್ಮದಲ್ಲಿ ಈಗ ಚಾಲ್ತಿಯಲ್ಲಿ ಇರುವುದು 24ನೇ ತೀರ್ಥಂಕರ ಮಹಾವೀರರ ಬೋಧನೆಗಳೇ. ಅವರ ಬೋಧನೆಗಳನ್ನು ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯ ಎಂದು ಸಂಕ್ಷಿಪ್ತವಾಗಿ ಗುರುತಿಸಬಹುದು. ಹಾಗೆ ನೋಡಿದರೆ ಪಾರ್ಶ್ವನಾಥ ತೀರ್ಥಂಕರರು ಮೊದಲಿನ ನಾಲ್ಕು ತತ್ವಗಳನ್ನು ಬೋಧಿಸಿದ್ದರು. ಬರೀ ಜೀವಗಳನ್ನು ಮಾತ್ರವಲ್ಲ ಅಜೀವಿಗಳನ್ನೂ ನೋಯಿಸಬಾರದು ಎಂದು ಹೇಳಿದ ಮೊದಲ ಧರ್ಮ ಜೈನ ಧರ್ಮ, 'ಪರಸ್ಪರೋಪಗ್ರಹೋ ಜೀವಾನಾಂ" ಹಾಗೂ "ಅಹಿಂಸಾ ಪರಮೋ ಧರ್ಮ' ಎಂದು ಬೋಧಿಸುವ ಮೂಲಕ 'ಅಹಿಂಸೆಯೇ ಪರಮ ಧರ್ಮ' ಎಂದೂ ಮಹಾವೀರರು ಬೋಧಿಸಿದರು. ಸತ್ಯವನ್ನು ನುಡಿಯುವುದು, 'ಅಸ್ತೇಯ' (ಅಚೌರ) ಅಂದರೆ ತನ್ನದಲ್ಲದ್ದನ್ನು ತೆಗೆದುಕೊಳ್ಳದಿರುವುದು, ಅಪರಿಗ್ರಹ ಅಂದರೆ ತನಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸಂಪಾದಿಸುವುದು, ಉಳಿದುದನ್ನು ದಾನ ಮಾಡುವುದು. ಬ್ರಹ್ಮಚಯ್ಯ ಅಂದರೆ, ಸಂತಾನ ಪ್ರಾಪ್ತಿಗಾಗಿ ಮಾತ್ರ ದೈಹಿಕ ಸಂಬಂಧ ಹೊಂದುವುದು ಎಂದು ಅರ್ಥ. ಧರ್ಮಾಚರಣೆಯನ್ನು ಇದಕ್ಕಿಂತ ಸಂಕ್ಷಿಪ್ತವಾಗಿ ಬೋಧಿಸುವುದು ಕಷ್ಟ, ಮಹಾವೀರ ಅಪರಿಗ್ರಹ' ಎಂದುದನ್ನೇ ಬುದ್ಧ ಇನ್ನೊಂದು ರೀತಿಯಲ್ಲಿ 'ಆಸೆಯೇ ದುಃಖಕ್ಕೆ ಮೂಲ' ಎಂದ.




**ಅನೇಕಾಂತ ತತ್ವ ಹಾಗೂ ದೃಷ್ಟಿ :**

ಮಹಾವೀರರು ಅಹಿಂಸೆ, ಅಪರಿಗ್ರಹದ ಜೊತೆಗೆ ಇನ್ನೂ ಒಂದು ವಿಷಯವನ್ನು ಒತ್ತಿ ಹೇಳಿದರು. ಅದು ಅನೇಕಾಂತವಾದ ಎಂದು ಪ್ರಸಿದ್ಧವಾಗಿದೆ. ಜನರಲ್ಲಿ ಮತಾಂಧತೆ ಅಥವಾ ತಮ್ಮ ಧರ್ಮವೇ ಹೆಚ್ಚು ಎಂಬ ಭಾವನೆ ಬರಬಹುದು ಮತ್ತು ಅದು ಮೂಲಭೂತವಾದಕ್ಕೆ ದಾರಿ ಮಾಡಿಕೊಡಬಹುದು ಎಂದು ಅವರಿಗೆ ಅನಿಸಿತ್ತೋ ಏನೋ? ಅದಕ್ಕಾಗಿಯೇ ಅವರು, "ಅಖಂಡ ಸತ್ಯ ಎಂಬುದು ಇಲ್ಲ' ಎಂದು ಬೋಧಿಸಿದರು. ಜೀವನ ಮತ್ತು ಅನುಭವಗಳನ್ನು ಜೈನ ಧರ್ಮದ ದರ್ಶನವು ಆಧಾರವಾಗಿ ಅವಲಂಬಿಸಿದೆ. ಮೋಕ್ಷವೇ ಜೀವನದ ಪರಮೋದ್ದೇಶ. ವಸ್ತುಸ್ಥಿತಿಯು ಬಹುಮುಖವಾದುದು ಎಂಬುದನ್ನು ಎತ್ತಿ ಹೇಳುವ ಅನೇಕಾಂತವಾದದ ಕಾರಣವಾಗಿಯೇ ಜೈನರ ಪ್ರಮುಖವಾದ ಅಹಿಂಸಾ ದೃಷ್ಟಿ ಉಗಮಿಸಿರುವುದು. ವಸ್ತುವನ್ನು ವಿವಿಧ ದೃಷ್ಟಿಕೋನಗಳಿಂದ ನೋಡುವುದರಿಂದ ಅದರ ಸಮಗ್ರತೆಯ ಅರಿವಾಗುತ್ತದೆ. ಐವರು ಕುರುಡರು ಆನೆಯನ್ನು ಬಣ್ಣಿಸಿದ ಬಗೆಯನ್ನು ಇಲ್ಲಿ ಉದಾಹರಿಸಬಹುದು. ಅವರೆಲ್ಲರ 'ಅನುಭವ'ಗಳನ್ನು ಸೇರಿಸಿದಾಗ ಒಂದು ಆನೆಯ ಚಿತ್ರ ನಮಗೆ ಸಿಗುತ್ತದೆ. ಈ ಅನೇಕಾಂತ ದೃಷ್ಟಿಯಿಂದಾಗಿ, ಜೈನ ಧರ್ಮ ವಿವಿಧ ಮತ- ಪಂಥಗಳ ರಾಜ- ಪ್ರಜರ ನಡುವೆ ಸಹಿಷ್ಣುತೆ ಬೆಳೆಸಿತು. ಇದು ವಿಶಾಲವಾದ ಜಗತ್ತು. ಇಲ್ಲಿ ಎಲ್ಲ ಜೀವಿಗಳಿಗೆ ಜಾಗ ಇದೆ ಎಂದು ಮತಾಂಧರು ಹಾಗೂ ಸರ್ವಾಧಿಕಾರಿಗಳು ಒಪ್ಪುವುದಿಲ್ಲ. ನಿಮ್ಮ ಅಭಿಪ್ರಾಯವನ್ನು ನಾನು ಗೌರವಿಸುತ್ತೇನೆ. ಆದರೆ, ನನ್ನ ಅಭಿಪ್ರಾಯ ನನಗೆ ಇರಲಿ' ಎನ್ನುವಲ್ಲಿ ಅಹಿಂಸೆ ಇದೆ. ಸೌಹಾರ್ದ ಇದೆ. ಸಹಬಾಳ್ವೆಯ

ಮೂಲಸೂತ್ರ ಇದೆ. ಅಭಿಪ್ರಾಯಗಳ ಹೇರಿಕೆಯೇ ಹಿಂಸೆಯ ಮೂಲ. ಅನೇಕಾಂತವಾದ ಆಧುನಿಕ ಸಮಾಜಕ್ಕೆ ಅಗತ್ಯವಾದ ಬೌದ್ಧಿಕ ಅಹಿಂಸೆಯ ಬುನಾದಿಯಾಗಿದೆ. ಅಡಿಪಾಯವಾಗಿದೆ.

ಮಹಾವೀರರು ಅನೇಕಾಂತವಾದ ತತ್ವ ಪ್ರತಿಪಾದಿಸಲು ತಮ್ಮ ಸಮಕಾಲೀನರಾಗಿ ಇದ್ದ ಬುದ್ಧನ ಹಾಗೂ ತಮ್ಮ ಕಾಣ್ಕೆಗಳ ನಡುವೆ ಇದ್ದ ಕೆಲವು ಭಿನ್ನತೆಗಳೂ ಕಾರಣವಾಗಿರಬಹುದು. ಬುದ್ಧನು 'ಇದು ಹೌದು' ಹಾಗೂ 'ಇದು ಅಲ್ಲ' ಎಂಬ ಎರಡು ಧ್ರುವಗಳ ನಡುವಿನ ದಾರಿಯಲ್ಲಿ ಸಾಗಬೇಕು ಎಂದು ಹೇಳಿದರೆ, ಮಹಾವೀರರು, 'ಈ ಎರಡೂ ದಾರಿಗಳು ಸರಿ ಇರಬಹುದು' ಎಂದರು, ಮಹಾವೀರರ ಬೋಧನೆಯ ಬಹುದೊಡ್ಡ ಗುಣ ಎಂದರೆ ಎಲ್ಲಿಯೂ ಅವರು ಸಂಘರ್ಷದ ದಾರಿಯನ್ನು ತುಳಿಯದೇ ಇದ್ದುದು. ಬಹುಶಃ ಅವರು ಮಾಡಿದ 12 ವರ್ಷಗಳ ಕಠೋರ ತಪಸ್ಸು ಅವರಿಗೆ ಈ ದಾರಿಯನ್ನು ತೋರಿಸಿತೋ ಏನೋ? ಅವರ ಮೇಲೆ ದೈಹಿಕ ದಾಳಿ ನಡೆದರೂ ಅವರು ಪ್ರತಿಕ್ರಿಯಿಸಲಿಲ್ಲ. ಅಹಿಂಸೆಯನ್ನು ಅವರು ಕೇವಲ ಬೋಧಿಸಲಿಲ್ಲ. ಬದುಕಿ ತೋರಿಸಿದರು,

ಅಂತಲೇ ಮಹಾವೀರರು ಜಗತ್ತಿಗೆ ಕೊಟ್ಟ ಮೂರು 'ಅ'ಗಳು ಬಹಳ ಮೌಲಿಕವಾದುವು. ಸಾಮಾನ್ಯವಾಗಿ 'ಅ' ಎಂಬುದು ನಿಷೇಧಾರ್ಥಕ ಪ್ರತ್ಯಯ. ಆದರೆ,

ಅಹಿಂಸೆ, ಅಪರಿಗ್ರಹ, ಮತ್ತು ಅನೇಕಾಂತವಾದಗಳಲ್ಲಿ ಈ ನಿಷೇಧಾರ್ಥಕತೆ ಇಲ್ಲ. ಬದಲಿಗೆ ಅಲ್ಲಿ ಸಕಾರಾತ್ಮಕತೆ ಇದೆ. 'ಬದುಕು ಮತ್ತು ಬದುಕಲು ಬಿಡು' ಎಂಬ ಬಹುದೊಡ್ಡ ತತ್ವ ಇದೆ. ಮಹಾವೀರರು ಬೋಧಿಸಿದ ಈ ಮೂರು 'ಅ'ಕಾರಗಳ ಜೊತೆಗೆ ಜೈನ ಧರ್ಮದಲ್ಲಿ ಮೂರು 'ಸ' ಕಾರಗಳೂ ಇವೆ. ಅವು ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ ಮತ್ತು ಚಾರಿತ್ರ್ಯ. ಈ ಮೂರು 'ಸ' ಕಾರಗಳು ಮೋಕ್ಷದ ಸಾಧನಗಳು ಎಂದು ಜೈನರು ಭಾವಿಸುತ್ತಾರೆ.

ಬಹುತೇಕ ಜಿನಮಂದಿರಗಳ ಮೇಲೆ ಒಂದು ಚಿತ್ರ ಇರುತ್ತದೆ. ಆ ಚಿತ್ರದಲ್ಲಿ ತಪೋಮುದ್ರೆಯಲ್ಲಿ ಕುಳಿತ ಒಬ್ಬ ತೀರ್ಥಂಕರರ ಸಮ್ಮುಖದಲ್ಲಿ ಒಂದು ಆಕಳು ಮತ್ತು ಒಂದು ಹುಲಿ ಇರುತ್ತವೆ. ಹುಲಿಯ ಹಾಲನ್ನು ಆಕಳಿನ ಕರುವೂ, ಆಕಳಿನ ಹಾಲನ್ನು ಹುಲಿಯ ಮರಿಯೂ ಕುಡಿಯುತ್ತ ಇರುತ್ತವೆ. ಅಂದರೆ ಸೃಷ್ಟಿಯಲ್ಲಿ ಇರುವ ಸಹಜ ವೈರವನ್ನು ಕೂಡ ಕಳೆಯುವಂಥ ಶಕ್ತಿ ತೀರ್ಥಂಕರರಿಗೆ ಇದೆ ಎಂದು ಅರ್ಥ. ಮಹಾವೀರರು ಈ ವೈರವನ್ನು ಕಳೆಯುವುದಕ್ಕಾಗಿಯೇ ಪ್ರಯತ್ನ ಮಾಡಿದರು. ಜಿನ ಎಂದರೆ ಗೆದ್ದವನು ಎಂದು ಅರ್ಥ. ಆತ ವೀತರಾಗಿ. ಅಂದರೆ ಎಲ್ಲ ರಾಗ ಭಾವಗಳನ್ನು ಗೆದ್ದವನು. ಅವನ ಮುಂದೆ ಇರುವ ಪ್ರಾಣಿಗಳೂ ತಮ್ಮ ಸಾಮಾನ್ಯ ಸ್ವಭಾವವಾದ ವೈರವನ್ನು ಮರೆತು ಅಸಾಮಾನ್ಯ ರೂಪ ತಳೆಯುತ್ತವೆ ಎಂಬುದನ್ನು ಈ ಚಿತ್ರ ಹೇಳುತ್ತದೆ. ಮಹಾವೀರರು ಮಾಡಿದ ಇನ್ನೊಂದು ಅಸಾಧಾರಣ ಕೆಲಸ ಎಂದರೆ ಅವರು ಜನರು

ಮಾತನಾಡುವ ಭಾಷೆಯಲ್ಲಿಯೇ ಧರ್ಮದ ಬೋಧನೆ ಮಾಡಿದ್ದು. ಆಗ ಅರ್ಧಮಾಗಧಿ ಜನರು ಆಡುವ ಭಾಷೆಯಾಗಿತ್ತು. ಸಂಸ್ಕೃತ ಭಾಷೆಯನ್ನು ಬಿಟ್ಟು ಅರ್ಧಮಾಗಧಿಯನ್ನು ಮಹಾವೀರರು ಆರಿಸಿಕೊಂಡುದು ಜನಭಾಷೆಗೆ ಕೊಟ್ಟ ಬಹುದೊಡ್ಡ ಮನ್ನಣೆ ಎಂದೇ ಹೇಳಬೇಕು.

# ಸಲ್ಲೇಖನ : ಒಂದು ಸಮರ್ಥನೆ

**ಉಪಸರ್ಗೇ ದುರ್ಭಿಕ್ಷೆ ಜರಸಿ**

**ರುಜಾಯಾಂ ಚ ನಿಃಪ್ರತೀಕಾರೇ**

**ಧರ್ಮಾಯ ತನುವಿಮೋಚನವಾಹುಃ**

**ಸಲ್ಲೇಖನಾಮಾರ್ಯಾ :**

ಅನಿವಾರ್ಯವಾದಂಥ ಉಪಸರ್ಗ (ಯಾರದೋ ಮತ್ತು ರೋಗಗಳು ಪ್ರಾಪ್ತವಾದಾಗ ಧರ್ಮವನ್ನು ಪಾಲಿಸುವುದಕ್ಕಾಗಿ, ಶರೀರವನ್ನು ತ್ಯಾಗ ಮಾಡುವುದೇ ಸಲ್ಲೇಖನ ವ್ರತ. ಈ ವ್ರತ ತುಂಬ ಚರ್ಚೆಯಾಗಿದ್ದು ಈಚೆಗೆ ರಾಜಸ್ಥಾನದ ಹೈಕೋರ್ಟ್ನಲ್ಲಿ ಸಲ್ಲೇಖನ ವ್ರತ ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿತ್ತು. ಜೈನರ ಸಲ್ಲೇಖನ ಆತ್ಮಹತ್ಯೆಗೆ ಸಮನಾದುದು ಎಂದು ಆ ಹೈಕೋರ್ಟ್ ಅಭಿಪ್ರಾಯ ಪಟ್ಟುದು ಕೂಡ ತುಂಬ ಚರ್ಚೆಯಾಗಿತ್ತು. ಜೈನ ಸಮುದಾಯಗಳು ಒಟ್ಟಾಗಿ ಈ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋದಾಗ ಅಲ್ಲಿ ಅದಕ್ಕೆ ತಡೆ ಸಿಕ್ಕಿತು. ಜೈನ ಧರ್ಮದ ವಿಚಾರದಲ್ಲಿ ಅಧಿಕೃತವಾಗಿ ಮಾತನಾಡಬಲ್ಲ ಷ.ಶೆಟ್ಟರ್ ಅವರು ಸಲ್ಲೇಖನ ವ್ರತವನ್ನು ಸಮರ್ಥಿಸಿ ಸುದೀರ್ಘ ಲೇಖನ ಬರೆದುದು ಕೂಡ ಈ ಇತಿಹಾಸದ ಭಾಗ.

ಸತ್ ಮತ್ತು ಲೇಖನಾ ಎಂಬ ಎರಡು ಶಬ್ದಗಳು ಸೇರಿ ಸಲ್ಲೇಖನಾ ನಿರ್ಮಾಣವಾಗಿದೆ. ಪದ ಸತ್ ಎಂದರೆ ಪ್ರಶಂಸನೀಯ ಎಂಬ ಅರ್ಥ. ಲೇಖನಾ ಅಂದರೆ ಕೃಶೀಕರಣ, ಕೃಶೀಕರಣದಿಂದ ಕಾಯ ಮತ್ತು ಕಷಾಗಳ ರ ಡ ನ ಕೃಶಗೊಳಿಸುವುದು ಸಲ್ಲೇಖನ. ಧರ್ಮಕ್ಕಿಂತದೇಹದೊಡ್ಡದಲ್ಲ. ಧರ್ಮಕ್ಕೆ ಅಡ್ಡಿಯಾಗುವ ಸಂದರ್ಭದಲ್ಲಿ ದೇಹವನ್ನೇ ತ್ಯಾಗ ಮಾಡಬೇಕು ಎಂಬ ಅಪರೂಪದ ಧಾರ್ಮಿಕ



ದೃಷ್ಟಿಯೂ ಈ ವ್ರತದಲ್ಲಿ ಇದೆ. ಸಾಮಾನ್ಯವಾಗಿ ಮುನಿಗಳು ಇದೇ ದಾರಿಯಲ್ಲಿ ದೇಹತ್ಯಾಗ ಮಾಡುತ್ತಾರೆ. ತೀವ್ರ ಧಾರ್ಮಿಕ ದೃಷ್ಟಿಯುಳ್ಳ ಶ್ರಾವಕರೂ ಈ ವ್ರತ ಅನುಸರಿಸಿ ದೇಹತ್ಯಾಗ ಮಾಡಿದ ನಿದರ್ಶನಗಳಿಗೆ ಕೊರತೆಯೇನೂ ಇಲ್ಲ (ಭೋಪಾಲ ಬಳಿಯ ಗಂಜ ಬಸೋಡಾ ಎಂಬ ಊರಿನಲ್ಲಿ ರತನ್ಬಾಯಿ ಎಂಬ ಮಹಿಳೆ ಆರು ತಿಂಗಳ ಕಾಲ ಸಲ್ಲೇಖನ ವ್ರತ ಅನುಸರಿಸಿ ಪ್ರಾಣ ತ್ಯಾಗ ಮಾಡಿದ್ದರು- ನೋಡಿ ದಿ. ಹಿಂದು ಪತ್ರಿಕೆ 24.7.2005).

ಸಲ್ಲೇಖನ ವ್ರತಧಾರಣೆ ಎಂದರೆ, ನಿಧಾನವಾಗಿ ಒಂದೊಂದೇ ಆಹಾರವನ್ನು ತ್ಯಜಿಸುತ್ತ ಬರುವುದು. ರತನ್ ಬಾಯಿ ಆರು ತಿಂಗಳಿಂದ ಘನ ಆಹಾರ ಸೇವನೆ ತ್ಯಜಿಸಿದ್ದರು. ಬರೀ ಹಣ್ಣಿನ ರಸ ಮತ್ತು ನೀರನ್ನು ಮಾತ್ರ ಅವರು ಸೇವಿಸುತ್ತಿದ್ದರು. ಸಾವಿನ 12 ದಿನಗಳಿಗಿಂತ ಮುಂಚೆ ಹಣ್ಣಿನ ರಸ ಸೇವನೆಯನ್ನೂ ಬಿಟ್ಟು ಸ್ವಲ್ಪ ನೀರು ಮಾತ್ರ ಕುಡಿಯುತ್ತಿದ್ದರು ಅಂತಿಮವಾಗಿ ಅವರು ದೇಹತ್ಯಾಗ ಮಾಡಿದಾಗ 75 ವರ್ಷದ ಈ ಮಹಿಳೆಯ ಅಂತ್ಯ ಸಂಸ್ಕಾರದಲ್ಲಿ ಸಾವಿರಾರು ಜನರು ಸೇರಿದ್ದರು. ಅವರು ಸಲ್ಲೇಖನ ವ್ರತಧಾರಿಯಾಗಿದ್ದಾಗಲೂ ಅವರ ದರ್ಶನಕ್ಕೆ ಅನೇಕರು ಬಂದಿದ್ದರು. ಈ ಸಾವು ಒಂದು ಧಾರ್ಮಿಕ ಆಚರಣೆ. ಅದಕ್ಕಾಗಿಯೇ ಅದಕ್ಕಿಷ್ಟು ಸಂಭ್ರಮ',

**ಜೈನರ 24 ತೀರ್ಥಂಕರರ ಹೆಸರುಗಳು :**

ವೃಷಭ, ಅಜಿತ, ಶಂಭವ, ಅಭಿನಂದನ, ಸುಮತಿ, ಪದ್ಮಪ್ರಭ, ಸುಪಾರ್ಶ್ವ, ಚಂದ್ರಪ್ರಭ, ಪುಷ್ಪದಂತ, ಶೀತಲ, ಶ್ರೇಯಾಂಸ, ವಾಸುಪೂಜ್ಯ, ವಿಮಲ, ಅನಂತ, ಧರ್ಮ, ಶಾಂತಿ, ಕುಂತು, ಅರ, ಮಲ್ಲಿ, ಮುನಿಸುವ್ರತ, ನಮಿ, ನೇಮಿ, ಪಾರ್ಶ್ವ ಮತ್ತು ವರ್ಧಮಾನ.

ಪ್ರತಿಯೊಬ್ಬ ತೀರ್ಥಂಕರರಿಗೂ ಒಂದು ಲಾಂಛನ ಇರುವುದು ವಿಶೇಷ. ಉದಾಹರಣೆಗೆ ವೃಷಭ ತೀರ್ಥಂಕರರ ಲಾಂಛನ ಎತ್ತು, ಪಾರ್ಶ್ವನಾಥರ ಲಾಂಛನ ಸರ್ಪ, ಮಹಾವೀರರ ಲಾಂಛನ ಸಿಂಹ. ಎಲ್ಲ ತೀರ್ಥಂಕರರ ಪ್ರತಿಮೆಗಳು ಒಂದೇ ರೀತಿ ಇರುತ್ತವೆ. ಆಯಾ ಲಾಂಛನಗಳ ಮೂಲಕ ಅವರನ್ನು ಗುರುತಿಸುವುದು ರೂಢಿ.

**ಜೈನರ ಮಂತ್ರ:**

ಓಂ ಣಮೋ ಅರಿಹಂತಾಣಂ

ಓಂ ಣಮೋ ಸಿದ್ದಾಣಂ

ಓಂ ಣಮೋ ಆಇರಿಯಾಣಂ

ಓಂ ಣಮೋ ಉವಜ್ಝಾಯಾಣಂ ಓಂ ಣಮೋ ಲೋವಿ ಸವ್ವಸಾಹೂಣಂ


**ಪ್ರಾಕೃತ ಭಾಷೆಯಲ್ಲಿನ ಈ ಮಂತ್ರದ ಅರ್ಥ :**


ಅರಿಹಂತರಿಗೆ (ಕರ್ಮಗಳನ್ನು ಜಯಿಸಿದವರು) ನಮಸ್ಕಾರ, ಸಿದ್ಧರಿಗೆ (ಸಕಲ ಕರ್ಮಗಳಿಂದ ಬಿಡುಗಡೆ ಹೊಂದಿದವರು. ಅವರಿಗೆ ಪುನರ್ಜನ್ಮವಿಲ್ಲ) ನಮಸ್ಕಾರ, ಆಚಾರರಿಗೆ (ಶುದ್ಧ ತತ್ವಗಳನ್ನು ಆಚರಿಸುವವರು, ಸಾಧುಗಳಿಗೆ ದೀಕ್ಷೆ ಕೊಡುವ ಅಧಿಕಾರ ಹೊಂದಿದವರು) ನಮಸ್ಕಾರ, ಉಪಾಧ್ಯಾಯರಿಗೆ (ಅಂಗಶಾಸ್ತ್ರ ಮತ್ತು ಪೂರ್ವ ಶಾಸ್ತ್ರ ಓದಿದವರು, ಶಿಷ್ಯರಿಗೆ ಬೋಧಿಸುವವರು) ನಮಸ್ಕಾರ ಮತ್ತು ಸಮಸ್ತ ಲೋಕಗಳಲ್ಲಿರುವ ಸಮಸ್ತ ಸಾಧು ಪರಮೇಷ್ಠಿಗಳಿಗೆ (ಆತ್ಮಶುದ್ಧಿ ಸಾಧಿಸಿದವರು, ಇತರರ ಆತ್ಮಶುದ್ಧಿಗೆ ನೆರವಾಗುವವರು) ನಮಸ್ಕಾರ.

'ಜೈನ ಧರ್ಮವು ಕನ್ನಡ ಸಂಸ್ಕೃತಿಗೆ ಕೊಟ್ಟಿರುವ ಕಾಣಿಕೆಯು ಅಪರಿಮಿತ ಮತ್ತು ಉಪಮಾತೀತ. ಕನ್ನಡ ಸಾಹಿತ್ಯದ ಆರಂಭದ ದೆಸೆಯಲ್ಲಿ ಕೃಷಿ ಮಾಡಿ ಅತ್ಯಮೂಲ್ಯ ಕೃತಿಗಳನ್ನು ರಚಿಸಿದವರು ಜೈನರು, ಕರ್ನಾಟಕದ ವಾಸ್ತು ಮತ್ತು ಶಿಲ್ಪಗಳಿಗೆ ಅವರದೇ ಆದ ವಿಶಿಷ್ಟ ಕೊಡುಗೆಗಳಿವೆ. ಕರ್ನಾಟಕಕ್ಕೆ ಅತ್ತಿಮಬ್ಬೆ ಮತ್ತು ಚಾವುಂಡರಾಯನಂಥ ಮಹಾವ್ಯಕ್ತಿಗಳನ್ನು ಒದಗಿಸಿದ್ದು ಜೈನ ಧರ್ಮವೇ, ಅಹಿಂಸೆಯನ್ನೇ ಪ್ರತಿಪಾದಿಸುವ ಜೈನ ಧರ್ಮವು ಕರ್ನಾಟಕಕ್ಕೆ ಅನೇಕ ಯುದ್ಧ ವೀರರನ್ನೂ ಒದಗಿಸಿಕೊಟ್ಟಿತು. ಬೌದ್ಧಧರ್ಮವು ಕರ್ನಾಟಕಕ್ಕೆ ಏನನ್ನು ಕೊಟ್ಟಿತೋ ಬಿಟ್ಟಿತೋ ತಿಳಿಯದು. ಆದರೆ, ಕನ್ನಡ ನಾಡಿನ ಜೀವನಕ್ಕೆ ಶಾಸ್ತ್ರದ ಬೆಳಕನ್ನು, ಕಾವ್ಯದ ತಂಪನ್ನು ತಂದುಕೊಟ್ಟು ಅದನ್ನು ರೂಪಿಸಿದವರು ಜೈನರು" .

**- ಡಾ.ಎಂ.ಚಿದಾನಂದಮೂರ್ತಿ**

ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಪುಟ-119)




ಕರ್ನಾಟಕದ ಮಹತ್ವದ
ಜೈನ ಕೇಂದ್ರಗಳು

ದಕ್ಷಿಣ ಭಾರತದಲ್ಲಿ ಕರ್ನಾಟಕವು ಜೈನರ ಪ್ರಮುಖ ತಾಣ, ಭದ್ರಬಾಹು ಮುನಿಗಳು ಕರ್ನಾಟಕಕ್ಕೆ ಕಾಲಿಟ್ಟ ಲಾಗಾಯ್ತಿನಿಂದ ಹಿಡಿದರೂ ಈ ರಾಜ್ಯದಲ್ಲಿ ಸುಮಾರು 2,300 ವರ್ಷಗಳಷ್ಟು 'ಚಾರಿತ್ರಿಕ' ಇತಿಹಾಸ ಜೈನ ಧರ್ಮಕ್ಕೆ ಇದೆ. ಹೀಗಾಗಿ ಇಲ್ಲಿ ಅನೇಕ ಬಸದಿಗಳು, ದೇವಸ್ಥಾನಗಳು ಇವೆ. ಅದರಲ್ಲಿ ಬಹು ಮುಖ್ಯವಾದುವು ಬಾಹುಬಲಿಯ ಏಕಶಿಲಾ ವಿಗ್ರಹಗಳು, ಶ್ರವಣಬೆಳಗೊಳದ ಬಾಹುಬಲಿ ವಿಗ್ರಹವನ್ನು ಬಿಟ್ಟರೂ ಕರ್ನಾಟಕದಲ್ಲಿಯೇ ಅತಿ ಹೆಚ್ಚು ಬಾಹುಬಲಿಯ ಏಕಶಿಲಾ ವಿಗ್ರಹಗಳು ಇವೆ.

**ಕಾರ್ಕಳ :**

ಉಡುಪಿ ಜಿಲ್ಲೆ ಕಾರ್ಕಳ ಪಟ್ಟಣದ ಬೆಟ್ಟದ ಮೇಲೆ 42 ಅಡಿ ಎತ್ತರದ ಗ್ರಾನೈಟ್ ಶಿಲೆಯ ಬಾಹುಬಲಿ ಮೂರ್ತಿ ತನ್ನದೇ ಆದ ಸೌಂದರ್ಯದಿಂದ ಕಂಗೊಳಿಸುತ್ತಿದೆ. ಈ ಮೂರ್ತಿಯ ಮುಖದ ಮೇಲಿನ ಮಂದಹಾಸ ಅಮೋಘವಾದುದು. ತುಂಬಿದ ಕೆನ್ನೆಗಳು, ಧ್ಯಾನಾಸಕ್ತ ಮುದ್ರೆ, ನಾಸಾನ್ಯ ದೃಷ್ಟಿ, ಶಾಂತಿ ಮತ್ತು ದೈವಿಕತೆಯನ್ನು ಹೊರಸೂಸುವ ಮುಖಮಂಡಲ, ನಿಟ್ಟನಿಲುವಿನ ಸರ್ವಾಂಗ ಸುಂದರ ಶರೀರ, ಬಳಿನಿಂತ ಯಾರನ್ನೇ ಆದರೂ ಭಾವುಕರನ್ನಾಗಿ ಮಾಡುವ ಈ ಭೂಮ ಗಾತ್ರದ ಬಿಂಬವು ಒಟ್ಟಂದದಲ್ಲಿ ಪ್ರಶಾಂತ, ಮನೋಹರ ಹಾಗೂ ಭಕ್ತಿ ಭಾವೋದ್ದೀಪಕ, ಕಳಸ ಕಾರ್ಕಳದ ಅರಸು ವೀರಪಾಂಡ್ಯನು ಈ ಶಿಲಾಮೂರ್ತಿಯನ್ನು ಕ್ರಿ.ಶ. 1432ರಲ್ಲಿ ನಿರ್ಮಿಸಿದನು. ಬೆಳಗೊಳದ ಮೂರ್ತಿಯ ಹಾಗೆಯೇ ಇದು ಕೂಡ ಕಾಯೋತ್ಸರ್ಗ ಭಂಗಿಯಲ್ಲಿಯೇ ಇದೆ. 2002ರಲ್ಲಿ ಮತ್ತು 2014ರಲ್ಲಿ ಈ ಮೂರ್ತಿಗೂ ಮಹಾಮಸ್ತಕಾಭಿಷೇಕ



**ವೇಣೂರು :**

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ವೇಣೂರು ಗ್ರಾಮದಲ್ಲಿ ವೀರ ತಿಮ್ಮಣ್ಣ ಅಜಿಲರು ಕ್ರಿ.ಶ.1604ರಲ್ಲಿ ನಿರ್ಮಿಸಿದ ಈ ಬಾಹುಬಲಿಯ ಎತ್ತರ 38 ಅಡಿ. ಅಜಿಲರು ಚಾವುಂಡರಾಯನ ವಂಶಜರು ಎಂಬುದು ಪ್ರತೀತಿ. ಈ ಮೂರ್ತಿಗೂ 2000ನೇ ಇಸವಿಯಲ್ಲಿ ಸುಮಾರು 44 ವರ್ಷಗಳ ನಂತರ ಮಹಾಮಸ್ತಕಾಭಿಷೇಕ ನೆರವೇರಿತು. ನಂತರ 2012ರಲ್ಲಿ ಅಭಿಷೇಕ ನಡೆಯಿತು.



**ಗೊಮ್ಮಟಗಿರಿ :**

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಗೊಮ್ಮಟಗಿರಿಯಲ್ಲಿ ವಿಜಯನಗರ ಅರಸರ ಕಾಲದಲ್ಲಿ ಸ್ಥಾಪನೆಯಾದ 16 ಅಡಿ ಎತ್ತರದ ಸುಂದರ ಬಾಹುಬಲಿ ವಿಗ್ರಹವಿದೆ. ಈ ಮೂರ್ತಿಯ ವಿಶೇಷ ಎಂದರೆ ಪ್ರತಿ ವರ್ಷ ಅಲ್ಲಿ ಮಹಾ ಮಸ್ತಕಾಭಿಷೇಕ ನಡೆಯುವುದು. ಪುಟ್ಟ ಬೆಟ್ಟದ ಮೇಲೆ ಈ ಮೂರ್ತಿ ಇದ್ದರೆ ಅದರ ಕೆಳಗೆ ಜಲಮಂದಿರ, ತೀರ್ಥಂಕರರ ಪಾದುಕೆಗಳು ಇವೆ.

**ಅರೆತಿಪ್ಪೂರು :**

ಮಂಡ್ಯ  ಜಿಲ್ಲೆಯ ಅರೆತಿದ್ದೂರಿನ ಬಾಹುಬಲಿ ಮೂರ್ತಿಯು ಶ್ರವಣಬೆಳಗೊಳದ ಮೂರ್ತಿಗಿಂತ ಪುರಾತನವಾದುದು. ಅತ್ಯಂತ ಮಹತ್ವದ ಈ ಪ್ರಸಿದ್ಧ ಯಾತ್ರಾಸ್ಥಳದಲ್ಲಿ 2017ರ ನವೆಂಬರ್ನಲ್ಲಿ ಮೊದಲ ಮಹಾ ಮಸ್ತಕಾಭಿಷೇಕ ನಡೆಯಿತು. ನೇತೃತ್ವವನ್ನು ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ವಹಿಸಿದ್ದರು. ಈ ಊರಿಗೆ ಆರತಿಪುರ ಎಂದು ಕರೆಯುತ್ತಾರೆ.

**ಮೂಡಬಿದರೆ :**

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ 'ಜೈನರ ಕಾಶಿ' ಎಂದೇ ಹೆಸರಾಗಿದೆ. ಈ ಒಂದೇ ಊರಿನಲ್ಲಿ 18 ಬಸದಿಗಳು ಇದ್ದು ಈ ಊರು ಹಿಂದೆ ಜೈನರ ಪ್ರಸಿದ್ಧ ತಾಣವಾಗಿತ್ತು ಎಂಬುದು ಸ್ಪಷ್ಟ. ಪುರಾತನ ಜೈನ ಮಠವನ್ನೂ ಹೊಂದಿರುವ ಈ ಊರಿನಲ್ಲಿ ಯಾತ್ರಿಕರನ್ನು ಕೈ ಮಾಡಿ ಕರೆಯುವುದು ಸಾವಿರ ಕಂಬದ ಬಸದಿ. ಕ್ರಿ.ಶ.1430ರಲ್ಲಿ ನಿರ್ಮಿಸಿದ ಈ ವಿಶಾಲ ಬಸದಿಯ ತುಂಬ ಕಂಬಗಳು ಇದ್ದರೂ ಒಂದನ್ನು ಮತ್ತೊಂದು ಹೋಲುವುದಿಲ್ಲ. 'ತ್ರಿಭುವನ ತಿಲಕ ಚೂಡಾಮಣಿ', ಅಂದರೆ ಮೂರು ಲೋಕಕ್ಕೂ ಕಳಸಪ್ರಾಯವಾದುದು ಎಂದು ಹೆಸರಾದ ಈ ಬಸದಿಯ ಗರ್ಭಗೃಹದಲ್ಲಿ 6.5 ಅಡಿ ಎತ್ತರದ ಪಂಚ ಲೋಹದ ಚಂದ್ರನಾಥ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಶಿಖರದಲ್ಲಿ ಪಗೋಡಾ ಮಾದರಿಯಲ್ಲಿ ಇರುವ ಏಕೈಕ ಜೈನ ಬಸದಿ ಇದು. ಈ ಬಸದಿಯ ಪಾಯದ ಗೋಡೆಗಳ ಮೇಲೆ ಡ್ರಾಗನ್ ಪ್ರಾಣಿಯ ಚಿತ್ರವಿದ್ದು ಚೀನಾ ದೇಶದ ಜತೆಗೆ ಭಾರತಕ್ಕೆ ಇದ್ದ ವಾಣಿಜ್ಯ ಸಂಬಧವನ್ನು ಈ ಚಿತ್ರ ತೋರಿಸುತ್ತದೆ ಎಂದು ತಜ್ಞರು ಭಾವಿಸುತ್ತಾರೆ.


50


**ಧರ್ಮಸ್ಥಳ :**



ಧರ್ಮಸ್ಥಳದಲ್ಲಿ 39 ಅಡಿ ಎತ್ತರದ ಬಾಹುಬಲಿ ವಿಗ್ರಹವನ್ನು ಸ್ಥಾಪಿಸಿರುವುದು ಆಧುನಿಕ ಕಾಲದ ಒಂದು ಪವಾಡ. ಸಾವಿರ ವರ್ಷಗಳ ಹಿಂದೆ ಚಾವುಂಡರಾಯ ತಾಯಿಯ ಬಯಕೆ ಈಡೇರಿಸಲು ಶ್ರವಣಬೆಳಗೊಳದಲ್ಲಿ ಬಾಹುಬಲಿ ಮೂರ್ತಿಯನ್ನು ಪ್ರತಿಷ್ಠಾಪಿಸಿದರೆ ಆಧುನಿಕ ಕಾಲದಲ್ಲಿ ಡಾ.ವೀರೇಂದ್ರ ಹೆಗ್ಗಡೆಯವರು ಅದೇ ಕಾರಣಕ್ಕಾಗಿ ಶಿಲ್ಪಿ ರಂಜಾಳ ಗೋಪಾಲ ಶೆಣೈ ಅವರ ಮೂಲಕ ಕರ್ನಾಟಕದಲ್ಲಿ ಆಧುನಿಕ ಕಾಲದ ಅತಿ ಎತ್ತರದ ಬಾಹುಬಲಿ ಏಕಶಿಲಾ ವಿಗ್ರಹವನ್ನು ನಿರ್ಮಿಸಿಸಿ. ಪ್ರತಿಷ್ಠಾಪಿಸಿ "ಆಧುನಿಕ ಚಾವುಂಡರಾಯ" ಎಂದೇ ಹೆಸರಾದರು. ಕಾರ್ಕಳದಲ್ಲಿ ಸಿದ್ಧವಾದ ಈ ಮೂರ್ತಿಯನ್ನು ಧರ್ಮಸ್ಥಳಕ್ಕೆ ಸಾಗಿಸಿದ್ದು ಕೂಡ 20 ನೇ ಶತಮಾನದ ಒಂದು ಬಹು ದೊಡ್ಡ ಸಾಹಸ.




ಇವೆಲ್ಲ ಮುಖ್ಯವಾಗಿ ಬಾಹುಬಲಿ ವಿಗ್ರಹಕ್ಕೇ ಹೆಸರಾದ ಊರುಗಳು. ಆದರೆ, ಇವುಗಳನ್ನು ಬಿಟ್ಟೂ ಅಪರೂಪದ ಶಿಲ್ಪಕಲೆಗೆ, ಇತಿಹಾಸಕ್ಕೆ ಹೆಸರಾದ, ಶಿವಮೊಗ್ಗ ಜಿಲ್ಲೆಯ ಹುಂಚ, ಚಿಕ್ಕಮಗಳೂರು ಜಿಲ್ಲೆಯ ಸಿಂಹನಗದ್ದೆ, ಚಾಮರಾಜನಗರದ ಕನಕಗಿರಿ, ಉತ್ತರ ಕನ್ನಡ ಜಿಲ್ಲೆಯ ಸೋಂದೆ, ವಿಜಯಪುರದ ಸಹಸ್ರಫಣಿ ಪಾರ್ಶ್ವನಾಥ ಇತ್ಯಾದಿ ಜೈನ ಬಸದಿ ಮತ್ತು ದೇವಸ್ಥಾನಗಳು ನಾಡಿನ ಉದ್ದಗಲಕ್ಕೂ ಇವೆ ಎಂಬುದು ಇಲ್ಲಿ ಉಲ್ಲೇಖನಾರ್ಹ.





# ಚಾರುಕೀರ್ತಿ ಶ್ರೀಗಳು

## ಮತ್ತು ಜೈನ ಮಠದ ಉನ್ನತ ಪರಂಪರೆ



ಗಂಗರಸ ರಾಚಮಲ್ಲನ ಮಂತ್ರಿ ಚಾವುಂಡರಾಯ ತನ್ನ ತಾಯಿ ಕಾಳಲದೇವಿ ಜತೆಗೆ ಬೆಳಗೊಳಕ್ಕೆ ಬಂದಾಗ ಅವರಿಗೆ ಮಾರ್ಗದರ್ಶಕರಾಗಿ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಆಚಾರರ ಸ್ಥಾನದಲ್ಲಿ ಇದ್ದರು. ಚಾವುಂಡರಾಯ ತನ್ನ ತಾಯಿಯ ಆಸೆ ಈಡೇರಿಸಲು ವಿಂಧ್ಯಗಿರಿಯ ಮೇಲೆ ಕ್ರಿ.ಶ.981ರಲ್ಲಿ ಬಾಹುಬಲಿ ಮೂರ್ತಿಯನ್ನು ಕೆತ್ತಿಸಿ ಪ್ರತಿಷ್ಠಾಪಿಸಿದ ನಂತರ ಬೆಳಗೊಳದಲ್ಲಿ ಒಂದು ಮಠವನ್ನು ಸ್ಥಾಪಿಸಿ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳನ್ನೇ ಮಠಾಧಿಪತಿಯಾಗುವಂತೆ ಕೋರಿದ. ಅದಕ್ಕೆ ಕಾರಣ, ಇಷ್ಟು ದೊಡ್ಡ ದೇವಸ್ಥಾನಕ್ಕೆ ಒಂದು ಮಠ ಇಲ್ಲದಿದ್ದರೆ ನಿತ್ಯ ಪೂಜೆ ಹಾಗೂ ಬಂದ ಭಕ್ತರಿಗೆ ವ್ಯವಸ್ಥೆಯಂಥ ಕ್ಷೇತ್ರದ ಕಾವ್ಯಗಳು ಆಗುವುದಿಲ್ಲ ಎಂಬುದನ್ನು ರಾಯ ತಿಳಿದಿದ್ದ.


ನೇಮಿಚಂದ್ರರ ನಂತರ ಮುನಿ ಶುಭಚಂದ್ರರು ಆಚಾರ್ ಪಟ್ಟದಲ್ಲಿ ಇದ್ದಾಗ ರಾಜ್ಯದ ಆಡಳಿತದಲ್ಲಿ ಕೋಭೆ ಉಂಟಾಗಿತ್ತು. ಆಗ ಶುಭಚಂದ್ರರೇ ಚಾವುಂಡರಾಯನಿಗೆ ಸರಿಯಾಗಿ ಮಾರ್ಗದರ್ಶನ ಮಾಡಿದ್ದರು. ಅದಕ್ಕೆ ಕೃತಜ್ಞತೆಯಾಗಿ ಮಠದ ಪೀಠಾಧಿಪತಿಗಳಿಗೆ ಚಾರುಕೀರ್ತಿ ಎಂಬ ಅಭಿದಾನವನ್ನು ರಾಯ ಪ್ರದಾನ ಮಾಡಿದ. ಅಂದಿನಿಂದ ಬೆಳಗೊಳದ ಧರ್ಮ ಪೀಠಾಧಿಪತಿಗಳಿಗೆ ಚಾರುಕೀರ್ತಿ ಎಂದೇ ಹೆಸರು ಉಳಿದುಕೊಂಡು ಬಂದಿದೆ.

ಈಗ ಶ್ರೀ ಕ್ಷೇತ್ರದ ಜೈನ ಮಠದ ಜವಾಬ್ದಾರಿ ಹೊತ್ತುಕೊಂಡಿರುವ ಪೀಠಾಧಿಪತಿ ಸ್ವಸ್ತಿಶ್ರೀ ಜಗದ್ಗುರು ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು 1949ರ ಮೇ 3ರಂದು ದಕ್ಷಿಣ ಕನ್ನಡ ಜಿಲ್ಲೆ ವರಂಗ ಗ್ರಾಮದ ಉಪಾಧ್ಯಾಯ ಮನೆತನದಲ್ಲಿ ಜನಿಸಿದರು. ಅಲ್ಲಿನ ಸುಂದರ ದೇವಸ್ಥಾನದ ಬಲಬದಿಯಲ್ಲಿಯೇ ಅವರ ಪೂರ್ವಾಶ್ರಮದ ಮನೆಯಿದೆ. ಅವರ ಪೂರ್ವಾಶ್ರಮದ ಹೆಸರು ರತ್ನವರ್ಮ, ತಮ್ಮ ಯೌವನದಲ್ಲಿ ಅಂದರೆ 1969ರ ಡಿಸೆಂಬರ್ 12ರಂದು ಅವರು ಸನ್ಯಾಸ ದೀಕ್ಷೆ ಪಡೆದರು. 1970ರ ಏಪ್ರಿಲ್ 19ರಂದು ಬೆಳಗೊಳದ ಪೀಠಾರೋಹಣ ಮಾಡಿದರು. ಅವರ ಪೀಠಾರೋಹಣ ಆಗಿ ಈಗ 48 ವರ್ಷಗಳೇ ಕಳೆದು ಹೋಗಿವೆ!

ಸ್ವಾಮೀಜಿಗಳು ಶ್ರೀಮಠದ ಕೆಲಸ ಕಾವ್ಯಗಳನ್ನು ನೋಡಿಕೊಳ್ಳುತ್ತಲೇ ಅನೇಕ ಪದವಿಗಳನ್ನು ಪಡೆದರು. ಶಾಸ್ತ್ರಗಳನ್ನು ಓದಿದರು. ಕನ್ನಡ, ಸಂಸ್ಕೃತ ಮತ್ತು ಪ್ರಾಕೃತದಲ್ಲಿ ಮಾತ್ರವಲ್ಲದೇ ಮೈಸೂರು ವಿಶ್ವ ವಿದ್ಯಾಲಯದಿಂದ ಇತಿಹಾಸ ಹಾಗೂ ಬೆಂಗಳೂರು ವಿಶ್ವ ವಿದ್ಯಾಲಯದಿಂದ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ತುಂಬು ಸರಳತೆ ಮತ್ತು ಸಜ್ಜನಿಕೆಗೆ ಹೆಸರಾಗಿರುವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ತಮ್ಮ ಆಕರ್ಷಕ ವ್ಯಕ್ತಿತ್ವ ಹಾಗೂ ವಿದ್ವತ್ತಿನಿಂದ ಭಕ್ತರನ್ನು ಸೆಳೆಯುತ್ತಾರೆ. ಅವರ ಅಧಿಕಾರ ಅವಧಿಯಲ್ಲಿ ಶ್ರೀ ಕ್ಷೇತ್ರದಲ್ಲಿ ಬೇಕಾದಷ್ಟು ಅಭಿವೃದ್ಧಿ ಮತ್ತು ಧಾರ್ಮಿಕ ಕೆಲಸಗಳು ನಿರಂತರವಾಗಿ ನಡೆದುಕೊಂಡು ಬರುತ್ತಿವೆ. 30 ಕ್ಕೂ ಹೆಚ್ಚು ದೇವಸ್ಥಾನಗಳು ಜೀರ್ಣೋದ್ಧಾರಗೊಂಡು ನಿತ್ಯ ಪೂಜೆ ನಡೆಯುತ್ತಿದೆ. ಭಗವಾನ್ ಮಹಾವೀರರ 2500ನೇ ವರ್ಷದ ಸಂದರ್ಭದಲ್ಲಿ ದಕ್ಷಿಣ ಭಾರತದಾದ್ಯಂತ 'ಧರ್ಮಚಕ್ರ' ಯಾತ್ರೆಯನ್ನು ಅವರೇ ಯಶಸ್ವಿಯಾಗಿ ನಡೆಸಿದರು. 1981ರಲ್ಲಿ ನಡೆದ ಸಹಸ್ರಾಬ್ದಿ ಮಹಾ ಮಸ್ತಕಾಭಿಷೇಕದ ಯಶಸ್ಸು ಕೂಡ ಅವರಿಗೇ ಸಲ್ಲಬೇಕು. ಇಡೀ ನಾಡಿನ ಇತಿಹಾಸದಲ್ಲಿ ಅದು ಒಂದು ರೋಮಾಂಚದ ಗಳಿಗೆ. ಆ ಅಭಿಷೇಕಕ್ಕೆ ಬಂದಿದ್ದ ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ಚಾರುಕೀರ್ತಿ ಭಟ್ಟಾರಕರಿಗೆ 'ಕರ್ಮಯೋಗಿ' ಎಂಬ ಅಭಿದಾನ ನೀಡಿ ಗೌರವಿಸಿದ್ದರು.

ಆ ಅಭಿದಾನವನ್ನು ನಿಜ ಮಾಡಬೇಕು ಎನ್ನುವಂತೆ ಸ್ವಾಮೀಜಿಯವರು, ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನೂ ಮಾಡದಿದ್ದರೆ ಜೈನ ಸಮಾಜಕ್ಕೆ ಮತ್ತು ಸುತ್ತಲಿನ ಪರಿಸರಕ್ಕೆ ಅನುಕೂಲ ಆಗುವುದಿಲ್ಲ ಎಂದು ತಿಳಿದು ಸುತ್ತಮುತ್ತಲಿನ ಹಳ್ಳಿಗಳನ್ನು ಶೈಕ್ಷಣಿಕ ಉದ್ದೇಶಕ್ಕೆ ದತ್ತು ತೆಗೆದುಕೊಂಡರು.





ಸಾವಿರಾರು ಜನರಿಗೆ ಉಚಿತ ನೇತ್ರ ಚಿಕಿತ್ಸೆ ಏರ್ಪಡಿಸಿದರು. ಸಂಚಾರಿ ಆಸ್ಪತ್ರೆಯ ಮೂಲಕ ಸುತ್ತಲಿನ ಹಳ್ಳಿಗಳಲ್ಲಿ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಒದಗಿಸಿದರು. ಕ್ಷೇತ್ರದ ಸುತ್ತಲಿನ ಪರಿಸರದಲ್ಲಿ ಹೊಸ ಕೆರೆಗಳನ್ನು ನಿರ್ಮಾಣ ಮಾಡಿದ್ದು, ಸಮುದಾಯ ಕೇಂದ್ರಗಳನ್ನೂ ಸ್ಥಾಪನೆ ಮಾಡಿದರು. ಸುತ್ತಲಿನ ಪರಿಸರದ ಜನಸಮುದಾಯದಲ್ಲಿ ಯಾವುದೇ ಭೇದ ಭಾವ ಇಲ್ಲದೆ ಈ ಸವಲತ್ತುಗಳನ್ನು ನೀಡಿರುವುದು ಅವರ ಒಂದು ಹೆಚ್ಚುಗಾರಿಕೆ.

ಜೈನ ಸಮುದಾಯ ಮುಖ್ಯವಾಗಿ ವಣಿಕ ಹಾಗೂ ಕೃಷಿಕ ಸಮಾಜ, ಹಾಗಾಗಿ ಶೈಕ್ಷಣಿಕವಾಗಿ ಅದು ಹಿಂದೆ ಬೀಳಬಾರದು ಎಂದು ಸ್ವಾಮೀಜಿ ಬೆಳಗೊಳದಲ್ಲಿಯೇ ಒಂದು ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದ್ದಾರೆ. ಎರಡು ದಶಕಗಳಿಂದ ನಡೆಯುತ್ತಿರುವ ಈ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದುವ ಮಕ್ಕಳಿಂದ ವಂತಿಕೆ ಅಥವಾ ಸೇವಾಶುಲ್ಕ ಇತ್ಯಾದಿ ಯಾವುದನ್ನೂ ಅವರು ತೆಗೆದುಕೊಳ್ಳುವುದಿಲ್ಲ. ಸರ್ಕಾರ ನಿಗದಿ ಮಾಡಿದ ಶುಲ್ಕವನ್ನು ಮಾತ್ರ ಅಲ್ಲಿ ತೆಗೆದುಕೊಳ್ಳುವುದು ವಿಶೇಷ. ಬೆಳಗೊಳದಲ್ಲಿ ಪೂರ್ವ ಪ್ರಾಥಮಿಕ, ಮತ್ತು ಪ್ರೌಢಶಾಲೆಗಳನ್ನು ಮುಂಚಿನಿಂದಲೇ ಸ್ವಾಮಿಗಳು ನಡೆಸಿಕೊಂಡು ಬರುತ್ತಿದ್ದಾರೆ. ಸಾಲದು ಎಂಬಂತೆ ಆಯುರ್ವೇದ ಕಾಲೇಜು, ಗ್ರಾಮೀಣ ಜನರ ಅನುಕೂಲಕ್ಕಾಗಿ ಸಂಚಾರಿ ಆಸ್ಪತ್ರೆ, ಫಾರ್ಮಸಿ ಕಾಲೇಜು, ಪಾಲಿಟೆಕ್ನಿಕ್ ಮುಂತಾದ ಶಿಕ್ಷಣ ಸಂಸ್ಥೆಗಳು ಯಶಸ್ವಿಯಾಗಿ ನಡೆಯುತ್ತಿವೆ. ಇದರೊಂದಿಗೆ ಪಾರಂಪರಿಕವಾದ ಧಾರ್ಮಿಕ ಶಿಕ್ಷಣ ಹಾಗೂ ಅಧ್ಯಯನಕ್ಕಾಗಿ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಗೋಮಟೇಶ್ವರ ವಿದ್ಯಾಪೀಠವು ನಡೆಯುತ್ತಿದೆ. ಪ್ರಾಕೃತ ಭಾಷೆಯ ಸಾಹಿತ್ಯದ ಅಧ್ಯಯನ, ಸಂಶೋಧನೆ ಹಾಗೂ ಅನುವಾದಕ್ಕಾಗಿ ಬೆಂಗಳೂರಿನಲ್ಲಿ ಪ್ರಾಕೃತ ಜ್ಞಾನ ಭಾರತಿ ಶಿಕ್ಷಣ ದತ್ತಿಯನ್ನು ಪ್ರಾರಂಭಿಸಿದ್ದಾರೆ. ದತ್ತಿಯ ಆಶ್ರಯದಲ್ಲಿ ಎರಡು ವರ್ಷಕ್ಕೊಮ್ಮೆ ರಾಷ್ಟ್ರೀಯ ಪ್ರಾಕೃತ ಸಮ್ಮೇಳನ ನಡೆಯುತ್ತದೆ. ಪ್ರಾಕೃತ ಭಾಷೆಯ

ಉನ್ನತಿಗಾಗಿ ಉತ್ತಮ ಕಾರ್ ನಿರ್ವಹಿಸುವ ಹತ್ತು ಮಂದಿ ವಿದ್ವಾಂಸರಿಗೆ ಪ್ರತಿ ವರ್ಷ 'ಪ್ರಾಕೃತ ಜ್ಞಾನ ಭಾರತಿ' ಎಂಬ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಜೈನ ಸಾಹಿತ್ಯ ಮತ್ತು ಸಂಸ್ಕೃತಿಗೆ ಅನುಪಮ ಕೊಡುಗೆ ನೀಡುವ ವಿದ್ವಾಂಸರಿಗೆ 1980ರಿಂದ ಪ್ರತಿ ವರ್ಷ 'ಶ್ರೀ ಗೋಮಟೇಶ್ವರ ವಿದ್ಯಾಪೀಠ ಪುರಸ್ಕಾರ'ವನ್ನು ನೀಡಲಾಗುತ್ತಿದೆ. ಈ ವರೆಗೆ ಸುಮಾರು 60-65 ಜನ ವಿದ್ವಾಂಸರಿಗೆ ಈ ಪುರಸ್ಕಾರ ದೊರೆತಿದೆ. ಪ್ರತಿ ವರ್ಷವೂ ಜೈನ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು 'ಜೈನ ಅಧ್ಯಯನ ಸಂಸ್ಥೆ' ಸ್ಥಾಪಿಸಲಾಗಿದೆ. ಅದರ ವತಿಯಿಂದ ಈ ಶತಮಾನದ ಮರೆಯಲಾಗದ ವ್ಯಕ್ತಿಗಳ ಪರಿಚಯ ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ ಪ್ರತಿ ವರ್ಷ ಕ್ಷೇತ್ರದ ವತಿಯಿಂದ ಒಂದು ಲಕ್ಷ ರೂಪಾಯಿ ವ್ಯಯಿಸಲಾಗುತ್ತಿದೆ. ಜೈನ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗೆ ನೀಡಲು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 'ಚಾವುಂಡರಾಯ ಪ್ರಶಸ್ತಿ' ಎಂಬ ದತ್ತಿ ಸ್ಥಾಪಿಸಲಾಗಿದೆ. 30,000 ರೂಪಾಯಿಗಳ ನಗದು ಬಹುಮಾನ, ಪುರಸ್ಕಾರವನ್ನು ಈ ಪ್ರಶಸ್ತಿ ಒಳಗೊಡಿದೆ. ಕಾಲ ಕಾಲಕ್ಕೆ ಈ ಪ್ರಶಸ್ತಿ ಮೊಬಲಗನ್ನು ಹೆಚ್ಚಿಸಿರುವುದು ಕೂಡ ಒಂದು ವಿಶೇಷ. ತೀರಾ ಈಚೆಗೆ ಈ ಪ್ರಶಸ್ತಿಯ ಮೊತ್ತವನ್ನು 30,000ಕ್ಕೆ ಏರಿಸಲಾಗಿದೆ. ಈ ಮೊತ್ತವನ್ನು ಇನ್ನೂ ಹೆಚ್ಚಿಸಲು ಸ್ವಾಮಿಜಿಯವರು ತಾತ್ವಿಕವಾಗಿ ಸಮ್ಮತಿ ವ್ಯಕ್ತಪಡಿಸಿದ್ದಾರೆ. ಈ ಪ್ರಶಸ್ತಿಯನ್ನು ನಿಡುವುದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ಸ್ಥಾಪಿಸಲಾಗಿದ್ದು ನಾಡಿನ ಅನೇಕ ಗಣ್ಯರಿಗೆ ಈಗಾಗಲೇ ಈ ಪ್ರಶಸ್ತಿ ಬಂದಿದೆ. ಇದು 1993 ಮಹಾಮಸ್ತಕಾಭಿಷೇಕದ ನೆನಪಿನಲ್ಲಿ ಸ್ಥಾಪಿಸಿದ ಪ್ರಶಸ್ತಿ, ನಾಡಿನ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದು ಎಂಬ ಹಿರಿಮೆ ಇದಕ್ಕೆ ಇದೆ.

ಶ್ರವಣಬೆಳಗೊಳಕ್ಕೆ ಬರುವ ಸಾವಿರಾರು ಯಾತ್ರಾರ್ಥಿಗಳಿಗಾಗಿ ಮತ್ತು ಪ್ರವಾಸಿಗರಿಗಾಗಿ ಹಲವಾರು ಧರ್ಮಶಾಲೆಗಳು, ಅತಿಥಿಗೃಹಗಳನ್ನು ನಡೆಸಲಾಗುತ್ತಿದೆ. ಜೈನ ಯಾತ್ರಾರ್ಥಿಗಳಿಗಾಗಿ ಸಾರ್ವಜನಿಕರ ಉದಾರ ದಾನದಿಂದ ನಿತ್ಯ ಆಹಾರದ ವ್ಯವಸ್ಥೆಯನ್ನೂ ಮಾಡಲಾಗಿದೆ.

ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುವ ಸ್ವಾಮಿಗಳು ಅತ್ಯಂತ ಪ್ರಭಾವಶಾಲಿ ಮಾತುಗಾರ, ವಾಗಿ, ಬರೀ ಭಾರತ ಮಾತ್ರವಲ್ಲ ಅಮೆರಿಕ, ಇಂಗ್ಲೆಂಡ್ ಕೀನ್ಯ ಮತ್ತು ಸಿಂಗಪುರ ದೇಶಗಳಿಗೆ ಭೇಟಿ ನೀಡಿರುವ ಅವರು, ಯುರೋಪ್ ಖಂಡದ ಇತರ ದೇಶಗಳಿಗೂ ಭೇಟಿ ನೀಡಿದ್ದಾರೆ. 1988ರಲ್ಲಿ ಇಂಗ್ಲೆಂಡಿನ ಲೀಸ್ಟರ್ನಲ್ಲಿ ಜೈನ ದೇವಸ್ಥಾನದ ಸಂಪ್ರೋಕ್ಷಣಾ ಕಾರವು ಸ್ವಾಮೀಜಿಯವರ ಮಾರ್ಗದರ್ಶನದಲ್ಲಿಯೇ ನಡೆಯಿತು.

ಧಾರ್ಮಿಕ ಕಾರ್ಯಗಳು ಜನಕಲ್ಯಾಣದಲ್ಲಿ ಪರ್ಯವಸಾನವಾಗಬೇಕು ಎಂಬುದು ಅವರ ದೃಢನಂಬಿಕೆ, ಪ್ರತಿ ಮಹಾ ಮಸ್ತಕಾಭಿಷೇಕ ಸಮಯದಲ್ಲಿಯೂ ಅವರು ಒಂದಲ್ಲ ಒಂದು ಜನ ಕಲ್ಯಾಣ ಕಾರ್ಯ ಹಮ್ಮಿಕೊಂಡಿದ್ದಾರೆ. 2006ರ ಮಹಾಮಸ್ತಕಾಭಿಷೇಕದ ಸಮಯದಲ್ಲಿ ಶ್ರವಣಬೆಳಗೊಳದ ಪರಿಸರದಲ್ಲಿ ನಿರ್ಮಿಸಿದ ಮಕ್ಕಳ ಆಸ್ಪತ್ರೆ ಸುತ್ತಲಿನ ಪರಿಸರದ ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಬಹಳ ದೊಡ್ಡ ಸೇವೆ ಮಾಡುತ್ತಿದೆ. ಇದೀಗ 2018ರ ಮಹಾಮಸ್ತಕಾಭಿಷೇಕದ ನಿಮಿತ್ತವಾಗಿ 200 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಲಾಗುತ್ತಿದೆ. ಅದಕ್ಕೆ ಈಚೆಗೆ ಶಂಕು ಸ್ಥಾಪನೆ ಆಗಿದೆ.

ಸ್ವಾಮೀಜಿಗಳು ಧರ್ಮಗುರುಗಳಾದರೂ ಪ್ರಗತಿಪರ ನಿಲುವನ್ನು ಹೊಂದಿದ್ದಾರೆ. ತೀರ್ಥಂಕರರು ಬೋಧಿಸಿದ ರೀತಿಯಲ್ಲಿ ಸಮಾಜವನ್ನು ನಡೆಸಿಕೊಂಡು ಹೋಗಲು ಮಾರ್ಗದರ್ಶನ ಮಾಡುವ ಹೊಣೆಯನ್ನು ಚಾರುಕೀರ್ತಿ ಭಟ್ಟಾರಕರು ಅತ್ಯಂತ ಪ್ರೀತಿ ಮತ್ತು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದಾರೆ.

ಶಾಂತಿ ಪ್ರತಿಪಾದನೆ, ಪರಿಪಾಲನೆ, ಧರ್ಮ ರಕ್ಷಣೆ, ಸಮಾಜ ಸೇವಾ ಕಾರಗಳಿಗೆ ಅವರು ಯಾವಾಗಲೂ ಮುಂದು. ಕ್ಷೇತ್ರಕ್ಕೆ ಬರುವ ದಿಗಂಬರ ಮುನಿಗಳ ಆಹಾರಚರೆ, ಯೋಗಕ್ಷೇಮ ನೋಡಿಕೊಳ್ಳುವುದರಲ್ಲಿಯೂ ಅವರು ಸದಾ ಮುಂದು. ಈ ಸಾರಿ ಮಹಾಮಸ್ತಕಾಭಿಷೇಕ ಸಮಯದಲ್ಲಿ ಸುಮಾರು 500 ಜನ ದಿಗಂಬರ ಮುನಿಗಳು ಕ್ಷೇತ್ರದಲ್ಲಿ ವಾಸ್ತವ್ಯ ಮಾಡಲಿದ್ದಾರೆ ಎಂಬುದು ಸಣ್ಣ ಸಂಗತಿಯಲ್ಲ. ಅನೇಕ ಆಚಾರರೂ ಈ ಸಮಯದಲ್ಲಿ ಇರಲಿದ್ದಾರೆ. ಇಷ್ಟು ಮಂದಿ ದಿಗಂಬರ ಮುನಿಗಳು ಒಂದೇ ಕಡೆ ಇರುವ, ಬಂದು ಸೇರುವ ಯಾವ ಕ್ಷೇತ್ರವೂ ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿಯೇ ಇಲ್ಲ ಎಂಬುದು ಜೈನ ತೀರ್ಥಕ್ಷೇತ್ರವಾಗಿ ಶ್ರವಣ ಬೆಳಗೊಳದ ಹೆಗ್ಗಳಿಕೆಯನ್ನೂ, ಸ್ವಸ್ತಿಶ್ರೀ ಜಗದ್ಗುರು ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಕರ್ತೃತ್ವಶಕ್ತಿಯನ್ನೂ ತೋರಿಸುತ್ತದೆ.

ಸ್ವಾಮಿಜಿಯವರು ಅದ್ಭುತ ಸಂಘಟಕರು. ಅವರು ಎರಡು ವರ್ಷಗಳ ಹಿಂದೆ ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾಗಿ ಮಾಡಿದ ಕೆಲಸ ಅಸಾಧಾರಣವಾದುದು. ಅತ್ಯಂತ ಅಚ್ಚುಕಟ್ಟಾಗಿ ಯಾವುದೇ ಅಪಸ್ವರಗಳು ಇಲ್ಲದೆ ನಡೆದ ಕೆಲವೇ ಸಮ್ಮೇಳನಗಳಲ್ಲಿ ಅದೂ ಒಂದು ಹೆಸರು ಮಾಡಿತು. ನಾಲ್ಕು ದಿನಗಳ ನಡೆದ ಸಮ್ಮೇಳನದ ಊಟೋಪಚಾರಕ್ಕೆ ಮಾಡಿದ ಕೋಟ್ಯಂತರ ರೂಪಾಯಿ ವೆಚ್ಚವನ್ನು ಅವರು ಬಹಿರಂಗ ಮಾಡದೇ ಮತ್ತು ಅದನ್ನು ವಾಪಸು ಪಡೆಯಲೂ ನಿರಾಕರಿಸಿದರು. ಅದು ತಾವು ಮಾಡಿದ ಕನ್ನಡದ ಸೇವೆ ಎಂದು ಅವರು ವಿನಯದಿಂದ ಬಣ್ಣಿಸಿದರು.

ಕರ್ನಾಟಕ ಸರ್ಕಾರ ಅವರಿಗೆ ಈಚೆಗೆ 10ಲಕ್ಷ ರೂಪಾಯಿಗಳ ಬಹುಮಾನವುಳ್ಳ ಅತ್ಯಂತ ಪ್ರತಿಷ್ಠಿತವಾದ ಶ್ರೀ ಮಹಾವೀರ ಶಾಂತಿ ಪ್ರಶಸ್ತಿಯನ್ನು ಪ್ರಕಟಿಸಿದೆ. 2018ರಲ್ಲಿ ನಡೆಯುವ ಮಹಾವೀರ ಜಯಂತಿ ಉತ್ಸವದ ಸಮಯದಲ್ಲಿ ಈ ಪ್ರಶಸ್ತಿ ಪ್ರದಾನವಾಗಲಿದೆ ಇದು ಅವನ ಜನಸೇವೆಗೆ ಸಂದ ಅನನ್ಯ ಅರ್ಹ ಗೌರವವಾಗಿದೆ.




# ಪ್ರಾಕೃತ ಅಧ್ಯಯನ ಕೇಂದ್ರ

ಜೈನರಿಗೂ ಪ್ರಾಕೃತಕ್ಕೂ ಅಂಟಿದ ನಂಟು. ಕ್ರಿ.ಪೂ ಆರನೇ ಶತಮಾನದಲ್ಲಿ ಜೈನರ 24ನೇ ತೀರ್ಥಂಕರ ಮಹಾವೀರ ಮತ್ತು ಆತನ ಸಮಕಾಲೀನನೇ ಆದ ಗೌತಮ ಬುದ್ಧ ಅವರಿಬ್ಬರೂ ಪ್ರಾಕೃತ ಭಾಷೆಯಲ್ಲಿಯೇ ತಮ್ಮ ಬೋಧನೆ ಮಾಡಿದರು. ಪ್ರಾಕೃತ ಅಥವಾ ಪಾಲಿ ಭಾಷೆ ಆಗ ಜನಭಾಷೆಯೇ ಆಗಿತ್ತು. ಸಂಸ್ಕೃತ ಆಗಲೇ ಪಂಡಿತರ ಭಾಷೆಯಾಗಿತ್ತು. ಅಥವಾ ಒಂದು ವರ್ಗದ ಭಾಷೆಯಾಗಿತ್ತು. ಪಂಡಿತ ಭಾಷೆಗೆ ಪ್ರತಿಭಟನೆಯಾಗಿಯೇ ಮಹಾವೀರ ಮತ್ತು ಬುದ್ಧ ಜನಭಾಷೆಯ ಕೈ ಹಿಡಿದರು.

ಈ ಎರಡು ದೊಡ್ಡ ಧರ್ಮಗಳು ಮತ್ತು ಆ ಕಾಲದ ರಾಜಾಶ್ರಯ ಪಡೆದ ಪ್ರಾಕೃತ ಭಾಷೆಯಲ್ಲಿ ಬರೀ ಧರ್ಮ ಬೋಧನೆ ಮಾತ್ರವಲ್ಲದೇ ಭೂಗೋಳ, ಖಗೋಳ, ಆಯುರ್ವೇದ, ಶಿಲ್ಪ, ವಾಸ್ತು, ಆಗಮ, ಅಧ್ಯಾತ್ಮ, ಲೋಹ ವಿದ್ಯೆ, ತುಲನಾತ್ಮಕ ದಾರ್ಶನಿಕ ಅಧ್ಯಯನ ಮುಂತಾದ ಶಾಸ್ತ್ರ ಹಾಗೂ ಅನೇಕ ವಿದ್ಯೆಗಳು ಇದ್ದು ಆ ಭಾಷೆ ತಿಳಿಯದ ಜನರಿಗೆ ಈಗ ಅವು ಕಬ್ಬಿಣದ ಕಡಲೆಯಾಗಿವೆ. ಇದಕ್ಕೆ ಕಾರಣ ಸಂಸ್ಕೃತ ಬಾಷೆಯ ಪುನರುಜ್ಜಿವನ ಆದ ಹಾಗೆ ಪ್ರಾಕೃತ ಭಾಷೆಯ ಪುನರುಜ್ಜಿವನಕ್ಕೆ ಪ್ರಯತ್ನ ನಡೆಯಲಿಲ್ಲ. ಎಂಬುದು. ಹಾಗೆ ನೋಡಿದರೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳೆರಡೂ ಸೋದರ ಭಾಷೆಗಳೇ, ನಾಲ್ಕಾರು ದಶಕಗಳ ಹಿಂದೆ ಸಂಸ್ಕೃತವನ್ನು ಶಾಲೆ-ಕಾಲೇಜುಗಳಲ್ಲಿ ಒಂದು ಭಾಷೆಯಾಗಿ ಕಲಿಸುವ ಒತ್ತಡಕ್ಕೆ ಸರ್ಕಾರ ಮಣಿಯಿತು. ಹೀಗಾಗಿ ಆ ಭಾಷೆಯಲ್ಲಿನ ಜ್ಞಾನ ಸಂಪತ್ತು ಬಹುಮಟ್ಟಿಗೆ ಈಗಿನ ಪೀಳಿಗೆಗೆ ಲಭಿಸುವಂತಾಯಿತು. ಆದರೆ, ಅದೇ ಬಗೆಯ ಒತ್ತಡವನ್ನು ಪ್ರಾಕೃತದ ಪರವಾಗಿ ತರಲು ಆಗಲಿಲ್ಲ. ಹೀಗಾಗಿ ಈಗಲೂ ಅದು ಒಂದು ಅರ್ಥದಲ್ಲಿ ಬಳಕೆಯಲ್ಲಿ ಇರದ ಭಾಷೆಯೇ.



ಆದರೆ, ಶ್ರವಣಬೆಳಗೊಳದಿಂದ ಐದು ಕಿ.ಮೀ ದೂರದಲ್ಲಿನ 'ಧವಲ ತೀರ್ಥ'ದಲ್ಲಿ ತಲೆ ಎತ್ತಿರುವ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯಲ್ಲಿನ ನೂರಾರು ಓಲೆಗರಿಗಳ ಸಂಶೋಧನೆಯಲ್ಲಿ ತೊಡಗಿರುವ ವಿದ್ವಾಂಸರು ಪ್ರಾಕೃತವನ್ನು ಮತ್ತೆ ಒಂದು ಜೀವಂತ ಭಾಷೆಯಾಗಿಸಿದ್ದಾರೆ. ಶ್ರವಣ ಬೆಳಗೊಳದ ಜೈನ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ಈ ಕೇಂದ್ರದ ಕನಸು ಕಂಡವರು ಹಾಗೂ ಅದನ್ನು ನನಸು ಮಾಡಿದವರು. ಅದೂ 36 ವರ್ಷಗಳ ಹಿಂದೆ.

1981ರಲ್ಲಿ ಬೆಳಗೊಳದ ಬಾಹುಬಲಿ ಸ್ವಾಮಿಗೆ ಸಹಸ್ರ ವರ್ಷದ ಮಹಾ ಮಸ್ತಕಾಭಿಷೇಕ ನಡೆಯಿತು. ಆ ಸಂದರ್ಭದಲ್ಲಿ ಶ್ರುತಕೇವಲಿ ಭದ್ರಬಾಹು ಮುನಿಗಳ ನೆನಪಿನಲ್ಲಿ ಏನನ್ನಾದರೂ ಮಹತ್ವದ ಕಾರ ಮಾಡಬೇಕು ಎಂದು ಚಾರುಕೀರ್ತಿಯವರು ಯೋಚನೆ ಮಾಡಿದ್ದುದರ ಫಲವಾಗಿ ಈ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಕೇಂದ್ರ ರೂಪು ತಳೆಯಿತು. ಶ್ರುತಕೇವಲಿ ಭದ್ರಬಾಹು ಮುನಿಗಳು ಮೌರ್ಯ ದೊರೆ ಚಂದ್ರಗುಪ್ತನ ಜತೆಗೆ ಕ್ರಿ.ಪೂ 3ನೇ ಶತಮಾನದಲ್ಲಿ ಬೆಳಗೊಳಕ್ಕೆ ಬಂದು ಚಿಕ್ಕ ಬೆಟ್ಟದ ಮೇಲೆ ತಪಸ್ಸು ಮಾಡಿದ್ದರು. ಸಲ್ಲೇಖನ ವ್ರತ ಸ್ವೀಕರಿಸಿ ಸಮಾಧಿ ಮರಣ ಹೊಂದಿದ್ದರು. ಆ ಘಟನೆ ಇತಿಹಾಸದಲ್ಲಿ ಒಂದು ದಾಖಲೆಯಾಗಿ ಮಾತ್ರ ಉಳಿದಿತ್ತು. ಅದನ್ನು ನಿತ್ಯ ಸ್ಮರಣೆಯ ಸಂಗತಿಯಾಗಿ ಮಾಡಲು ಭಟ್ಟಾರಕರು ಚಿಂತಿಸಿದರು.

ಅದರ ಫಲವಾಗಿ ಪ್ರಾಕೃತ ಅಧ್ಯಯನ ಕೇಂದ್ರದಲ್ಲಿ ಅನೇಕ ಹಿರಿಯ ವಿದ್ವಾಂಸರು ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಅವರ ಜತೆಗೆ ಹೊಸ ಪೀಳಿಗೆಯ ವಿದ್ವಾಂಸರ ದಂಡೇ ಅಲ್ಲಿ ಇದೆ. ಅಲ್ಲಿ ನಿತ್ಯವೂ ಪ್ರಾಕೃತ ತರಗತಿಗಳು ನಡೆಯುತ್ತವೆ. ವರ್ಷಕ್ಕೊಮ್ಮೆ ಪರೀಕ್ಷೆಯೂ ನಡೆಯುತ್ತದೆ. ಪಾಸಾದವರಿಗೆ ಪ್ರಮಾಣ ಪತ್ರ ನೀಡಲಾಗುತ್ತದೆ. ಅದಕ್ಕಾಗಿ ಘಟಕೋತ್ಸವ ಏರ್ಪಡಿಸಲಾಗುತ್ತಿದೆ. ಹೆಚ್ಚು ಅಂಕಗಳಿಸಿದವರಿಗೆ ಪದಕಗಳನ್ನು ಕೊಟ್ಟು ಗೌರವಿಸಲಾಗುತ್ತಿದೆ.

ಜನರೇ ಮರೆತಿರುವ ಒಂದು ಭಾಷೆಯನ್ನು ಮತ್ತೆ ಸಜೀವಗೊಳಿಸುವ ತಾತ್ಪರ್ಯವೇನು ಎಂದು ಯಾರಾದರೂ ಸಂಶಯಪಟ್ಟಾರು! ಆದರೆ ಆ ಭಾಷೆಯಲ್ಲಿ ಹುಗಿದು ಹೋಗಿರುವ ಅಪಾರ ಜ್ಞಾನ ಸಂಪತ್ತನ್ನು ಅಗೆದು, ಮೊಗೆದು ಹೊರಗೆ ತೆಗೆಯುವುದು ಈ ಕೇಂದ್ರದ ಉದ್ದೇಶ ಎಂದು ಚಾರುಕೀರ್ತಿ ಭಟ್ಟಾರಕರು ಹೇಳುತ್ತಾರೆ. ರಾಜ್ಯದಾದ್ಯಂತ ಲಭ್ಯವಿದ್ದ ಪ್ರಾಕೃತ ಭಾಷೆಯಲ್ಲಿನ ತಾಳೆಗರಿಗಳನ್ನು ಸಂಗ್ರಹಿಸಿ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಕೆಲಸ ಇಲ್ಲಿ ಈಗ ನಡೆದಿದೆ ಎಂದೂ ಅವರು ವಿವರಿಸುತ್ತಾರೆ. ಇದಕ್ಕೆ ನಿದರ್ಶನವಾಗಿ, ಇದುವರೆಗೆ ಪ್ರಾಕೃತ ಸಾಹಿತ್ಯ ಕೈಪಿಡಿ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಪ್ರಾಕೃತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಮುಂತಾದ ಹತ್ತಾರು ಗ್ರಂಥಗಳು ಹೊರಬಂದಿವೆ. ಅದರ ಜತೆಗೆ ಜ್ಞಾನಪೀಠ ಪ್ರಕಾಶನದವರು ಪ್ರಾಕೃತದಿಂದ ಹಿಂದಿಗೆ ಅನುವಾದಿಸಿರುವ ಧವಲ, ಜಯ ಧವಲ, ಮಹಾಧವಲ ಎಂಬ 39 ಸಂಪುಟಗಳ ಧಾರ್ಮಿಕ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಬೃಹತ್

ಯೋಜನೆಯೂ ಇದೇ ಕೇಂದ್ರದ ಆಶ್ರಯದಲ್ಲಿ ನಡೆದು ಈಗ ಪೂರ್ಣಗೊಂಡಿದೆ. ಅದು ಜೈನ ಧಾರ್ಮಿಕ ಚರಿತ್ರೆಯಲ್ಲಿ ಸುವರ್ಣ ಅಕ್ಷರಗಳಿಂದ ಬರೆಯಬೇಕಾದ ಒಂದು ಅಧ್ಯಾಯ. ಆ ಕಾರ್ಯ ಮುಗಿಯುವ ವರೆಗೆ ತಾವು ವಾಹನದಲ್ಲಿ ಸಂಚಾರ ಮಾಡುವುದಿಲ್ಲ ಎಂದು ಶಪಥ ಮಾಡಿದ್ದ ಚಾರುಕೀರ್ತಿ ಶ್ರೀಗಳು ಸಂಪೂರ್ಣ 12 ವರ್ಷಗಳ ಕಾಲ ವಾಹನವನ್ನು ಏರಲೇ ಇಲ್ಲ. ವಾಹನ ಏರುವ ವ್ರತವನ್ನು ಅವರು ತೆಗೆದುಕೊಳ್ಳದೇ ಇದ್ದರೆ ಆ ಕೆಲಸ ಇಷ್ಟು ಬೇಗ ಮುಗಿಯುತ್ತಿತ್ತೋ ಇಲ್ಲವೋ ಹೇಳುವುದು ಕಷ್ಟ. ಎಲ್ಲ ಶ್ರೇಷ್ಠ ಕೆಲಸಗಳು ಒಂದಲ್ಲ ಒಂದು ತ್ಯಾಗವನ್ನು ಬಯಸಿವೆ. ಅವರ ತ್ಯಾಗದ ಫಲವಾಗಿ ಧವಲಯ ಗ್ರಂಥಗಳ ಅನುವಾದ ಕಾರ್ಯ ಸಂಪನ್ನಗೊಂಡಿತು ಎಂಬುದು ಅತಿಶಯದ ಮಾತಲ್ಲ. ಈ ಮಹಾ ಕಾರ್ಯದಲ್ಲಿ ನಾಡಿನ ಅನೇಕ ವಿದ್ವಾಂಸರು ಹೆಗಲು ಕೊಟ್ಟಿದ್ದರು ಎಂಬುದೂ ಇಲ್ಲಿ ಉಲ್ಲೇಖನಾರ್ಹ.

ಧವಲತ್ರಯ ಗ್ರಂಥಗಳಲ್ಲಿನ ವಸ್ತು ವಿಚಾರವು ತೀರ್ಥಂಕರ ಮಹಾವೀರರ ನೇರ ಉಪದೇಶಗಳ ಸಾರ, ಮಹಾವೀರರು ಮೋಕ್ಷ ಹೊಂದಿದ ನಂತರ ಅವರ ಆಗಮವು ಮರೆತು ಹೋಗಬಾರದು ಎಂದು ಧರಸೇನಾಚಾರರು ಅದನ್ನು ಲಿಪಿಬದ್ಧಗೊಳಿಸಿದರು. ಪುಷ್ಪದಂತ ಮತ್ತು ಭೂತಬಲಿ ಮುನಿಗಳು ಅವರಿಗೆ ಈ ಕಾವ್ಯದಲ್ಲಿ ನೆರವಾದರು. ಅದು 'ಷಟ್ಕಂಡಾಗಮ' ಎಂದು ಹೆಸರಾಗಿದೆ. ಈ 'ಷಟ್ಕಂಡಾಗಮ'ಕ್ಕೆ ಬರೆದ ವ್ಯಾಖ್ಯಾನವೇ ಧವಲ ಗ್ರಂಥಗಳು, ವ್ಯಾಖ್ಯಾನ ಬರೆದವರು ಭಗವತ್ ವೀರಸೇನಾಚಾರ್ಯರು. ಅದರ ಏಕೈಕ ಪ್ರತಿ ಚಾವುಂಡರಾಯನ ಆಸ್ಥಾನಗುರು ನೇಮಿಚಂದ್ರರ ಬಳಿ ಇತ್ತು. ನಂತರ ಅದು ತಲೆಮಾರುಗಳಿಗೆ ವರ್ಗವಾಗುತ್ತ ಮೂಡುಬಿದರೆಯ ಜೈನಮಠ ತಲುಪಿತ್ತು. ಆ ಪ್ರತಿಯನ್ನು ಆಧರಿಸಿಯೇ ಪ್ರಾಕೃತ ಕೇಂದ್ರದಲ್ಲಿ ಅನುವಾದ ಕಾರ ಕೈಗೊಳ್ಳಲಾಗಿತ್ತು.

ಬೆಂಗಳೂರಿನಿಂದ ಹಿರೀಸಾವೆ ಮೂಲಕ ಶ್ರವಣಬೆಳಗೊಳಕ್ಕೆ ಹೋಗುವ ಮಾರ್ಗದಲ್ಲಿ ಬೆಳಗೊಳ ಇನ್ನೂ ಐದು ಕಿ.ಮೀ ದೂರ ಇದೆ ಎನ್ನುವಾಗ ಎಡ ಬದಿಯಲ್ಲಿ ಪ್ರಾಕೃತ ಭವನದ ಭವ್ಯ ಕಟ್ಟಡ ಕಾಣಿಸುತ್ತದೆ. ಮೂರು ಮಹಡಿಯ ಈ ಕೇಂದ್ರವನ್ನು 50 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ನೆಲ ಮಹಡಿಯಲ್ಲಿ ಹಸ್ತ ಪ್ರತಿ ಸಂಗ್ರಹಾಗಾರ, ಗ್ರಂಥಾಲಯ, ಸಂಶೋಧಕರ ಕೊಠಡಿಗಳು ಇವೆ. ಗ್ರಂಥಾಲಯದಲ್ಲಿ 20,000 ಕ್ಕೂ ಹೆಚ್ಚು ಗ್ರಂಥಗಳನ್ನು ಸಂಗ್ರಹಿಸಲಾಗಿದ್ದು ಅವುಗಳ ವಸ್ತು ವಿಷಯ ವೈವಿಧ್ಯಮಯವಾಗಿದೆ. ತಾಳೆ ಗರಿಗಳನ್ನು ಸಂರಕ್ಷಿಸಿ ಇಡಲು ಎಲ್ಲ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಲಾಗಿದೆ. ಧೂಮಿಗೇಷನ್ ಚೇಂಬರ್ ಸಹ ಅಲ್ಲಿ ಇದೆ. ಈ ಚೇಂಬರ್ನಲ್ಲಿ ಹಸ್ತಪ್ರತಿಗಳನ್ನು ಕೆಲ ಸಮಯ ಇಟ್ಟು ಹೊರಗೆ ತೆಗೆದರೆ ಓಲೆಗರಿಗಳಲ್ಲಿನ ತೇವಾಂಶ ಮಾಯವಾಗಿ, ಸೂಕ್ಷ್ಮ ಜೀವಾಣುಗಳು ಹುಟ್ಟುವ ಸಾಧ್ಯತೆಯೂ ನಶಿಸುತ್ತದೆ.

ಪ್ರಾಕೃತ ಅಧ್ಯಯನ ಕೇಂದ್ರದಲ್ಲಿ ಕಳೆದ ಹಲವಾರು ವರ್ಷಗಳಿಂದ ನಡೆದಿರುವ ಸಂಶೋಧನ ಕಾವ್ಯವನ್ನು ಗಮನಿಸಿ ಮೈಸೂರು ವಿಶ್ವ ವಿದ್ಯಾಲಯವು ಈ ಕೇಂದ್ರದಲ್ಲಿ ಪಿ.ಎಚ್ಡಿ ಅಧ್ಯಯನಕ್ಕೆ ಮಾನ್ಯತೆ ನೀಡಿದೆ. ಈ ಕೇಂದ್ರದಲ್ಲಿಯೇ ಇದ್ದು ಅಧ್ಯಯನ ಮಾಡಬಯಸುವವರಿಗೆ ಊಟ, ವಸತಿಗೆ ವ್ಯವಸ್ಥೆಯೂ ಇದೆ.

ಪ್ರಾಕೃತ ಕೇಂದ್ರದ ಬಲಬದಿಯಲ್ಲಿ ಅಲಹಾಬಾದ್ನ ಬಿರ್ಲಾ ಪ್ರತಿಷ್ಠಾನದವರು 'ಪ್ರಿಯಂವದ ಬಿರ್ಲಾ ಭವನ'ವನ್ನು ನಿರ್ಮಿಸಿದ್ದು ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆಯುವ ಎಲ್ಲ ವಿಚಾರಗೋಷ್ಠಿಗಳು ಅಲ್ಲಿಯೇ ನಡೆಯುತ್ತವೆ. ಇಂಥ ಸಂಶೋಧನಾತ್ಮಕ ವಿಚಾರಗೋಷ್ಠಿಗಳನ್ನು ನಡೆಸಲು ಅಲ್ಲಿನ ಪ್ರಶಾಂತ ವಾತಾವರಣ ಹೇಳಿ ಮಾಡಿಸಿದಂತೆ ಇದೆ. ಕೇಂದ್ರದ ಆವರಣದಲ್ಲಿ ವಿದ್ಯಾರ್ಥಿನಿಲಯ, ಅತಿಥಿ ಗೃಹ, ಸಿಬ್ಬಂದಿ ವಸತಿಗೃಹಗಳನ್ನು ನಿರ್ಮಿಸುವ ಕೆಲಸ ಮುಗಿಯುತ್ತ ಬಂದಿದೆ.

ಶಾಲೆ ಕಾಲೇಜುಗಳಲ್ಲಿಯೂ ಸಂಸ್ಕೃತದ ಹಾಗೆ ಪ್ರಾಕೃತವನ್ನು ಕಲಿಸಲು ಪಠ್ಯಕ್ರಮ ಸಿದ್ಧಪಡಿಸಲಾಗಿದ್ದು ಕೆಲವು ವರ್ಷಗಳಿಂದ ರಾಜ್ಯದ ವಿವಿಧ ಕಡೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ವಿಶ್ವ ವಿದ್ಯಾಲಯದ ಮಾನ್ಯತೆಯಿರುವ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡಲೂ ಕೇಂದ್ರ ಹೊಳಹು ಹಾಕಿದೆ.

ಇದೀಗ ಇಲ್ಲಿ ಪ್ರಾಕೃತ ವಿಶ್ವವಿದ್ಯಾಲಯ ಸ್ಥಾಪಿಸಲು ರಾಜ್ಯ ಸರ್ಕಾರ ಒಪ್ಪಿರುವುದು ಇದುವರೆಗೆ ಚಾರುಕೀರ್ತಿ ಸ್ವಾಮೀಜಿಗಳು ನಡೆಸಿಕೊಂಡು ಬಂದ ಪ್ರಾಕೃತ ರಕ್ಷಣೆಯ ಕೈಂಕರ್ಯಕ್ಕೆ ಬಹುದೊಡ್ಡ ಮಾನ್ಯತೆ ಸಿಕ್ಕಂತೆ ಆಗಿದೆ. ಅದು ದೇಶದ ಮೊದಲ ಪ್ರಾಕೃತ ವಿಶ್ವವಿದ್ಯಾಲಯ ಆಗಲಿರುವುದು ಕರ್ನಾಟಕದ ಹೆಮ್ಮೆಯಾಗಿರುತ್ತದೆ. ರಾಜ್ಯ ಸರ್ಕಾರವು ಈ ವಿಶ್ವ ವಿದ್ಯಾಲಯ ಸ್ಥಾಪನೆಗಾಗಿ 21 ಕೋಟಿ ರೂಪಾಯಿ ಬಿಡುಗಡೆಮಾಡಿದೆ. ಚಾರುಕೀರ್ತಿ ಶ್ರೀಗಳು ಅಗತ್ಯವಾದ 32 ಎಕರೆ ಜಮೀನನ್ನು ಉಚಿತವಾಗಿ ನೀಡಿದ್ದಾರೆ. ಇದು ಈ ಸಾರಿಯ ಮಹಾ ಮಸ್ತಕಾಭಿಷೇಕದ ವಿಶೇಷ ಹೆಗ್ಗಳಿಕೆ.




ಗೊಮ್ಮಟ : ಕವಿಗಳ ಕಾಣ್ಕೆ

ಬೆಳಗೊಳದ ಬಾಹುಬಲಿ ಸಾವಿರ ವರ್ಷಗಳಿಂದ ಕೋಟ್ಯಂತರ ಜನರನ್ನು ತನ್ನ ಕಡೆಗೆ ಸೆಳೆದಿದ್ದಾನೆ. ಅದರಲ್ಲಿ ಸಾಮಾನ್ಯರು ಇರುವ ಹಾಗೆ ಕವಿಪುಂಗವರೂ ಇದ್ದಾರೆ, ಗೊಮ್ಮಟನನ್ನು ಕಂಡ ಕವಿಗಳ ಒಳಗಣ್ಣಿನಲ್ಲಿ ಬೆಳಕು, ಆನಂದ, ಏನಿದು ಭೂಮ! ಎಂಬ ಉದ್ಗಾರ. ಗೊಮ್ಮಟನ ಮೂರ್ತಿಯ ದಿವ್ಯಸ್ವರೂಪದ ಜತೆಗೆ ಆತ ಸಾವಿರ ವರ್ಷಗಳಿಂದಲೂ ಬೆಟ್ಟದ ಮೇಲೆ ಬೆತ್ತಲೆ ನಿಂತು ಏನನ್ನು ಹೇಳುತ್ತಿದ್ದಾನೆ ಎಂಬುದರ ಕಡೆಗೇ ಕವಿಗಳ ಸಹಜ ಗಮನ.

ಬೆಟ್ಟದ ಕೆಳಗೆ ಇಳಿದು ಬಂದ ನಂತರವೂ 'ಬಾಹುಬಲಿ ಕಾಡತೊಡಗುತ್ತಾನೆ. ಆತನ ಸೌಂದಯ್ಯ ಬಣ್ಣಿಸೋಣವೇ? ಆತ ತೆರೆಸಿದ ಒಳಗಣ್ಣ ಬಗೆಗೆ ಹಾಡೋಣವೇ ಎಂದು ಕವಿಗಳು ಧ್ಯಾನಸ್ಥರಾಗುತ್ತಾರೆ. ಶತ-ಶತಮಾನಗಳಿಂದ ಕವಿಗಳು ಬಾಹುಬಲಿಯನ್ನು ಕಂಡ ಬಗೆಯನ್ನು ಇಲ್ಲಿ ಕೊಡಲಾಗಿದೆ. ಎಲ್ಲ ಕವನಗಳನ್ನು ಓದಿದ ನಂತರವೂ ಬಾಹುಬಲಿಯು ಬಣ್ಣನೆಗೆ, ಕಲ್ಪನೆಗೆ 'ದೊಡ್ಡವನಾಗಿ', 'ಅತೀತ'ನಾಗಿ ಉಳಿಯುವುದು, ಆತನನ್ನು ಕಂಡರಿಸಲು ಶಬ್ದಗಳು ಸೋಲುವುದು ಅವನ 'ದೊಡ್ಡಸ್ತಿಕೆ'.



ಅತಿತುಂಗಾಕೃತಿಯಾದೊಡಾಗದದರೋಳ್

ಸೌಂದರ್ಯಮೌನ್ನತ್ಯಮುಂ

ನುತ ಸೌಂದರ್ಯಮುಮಾಗೆ ಮತ್ತತಿಶಯಂ

ತಾನಾಗದೌನ್ನತ್ಯಮುಂ

ನುತ ಸೌಂದರ್ಯಮುಮೂರ್ಜಿತಾತಿಶಯಂ ತನ್ನಲ್ಲಿ ನಿಂದಿರ್ದುವೇಂ

ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರಜಿನಶ್ರೀರೂಪಮಾತೋಪಮಂ

**- ಕವಿ ಬೊಪ್ಪಣ**

ಬಾಹುಬಲಿ ಸಕಲ ಸೌಂದರ್ಯ ಸಂಪನ್ನನೆ

**- ಪಂಪ ಮಹಾಕವಿ**

ಶ್ರೀಜಿನ ಗೊಮ್ಮಟಂ ಜಯಿಕೆ! ಗೊಮ್ಮಟನಂ ನುತಿಪೆಂ! ವಿರಕ್ತರಾ

ಗೊಮ್ಮಟನಿಂದೇ? ಗೊಮ್ಮಟನಿಗಾರಣೆ? ಗೊಮ್ಮಟನತ್ತಣಿಂದ ತಾ

ಗೊಮ್ಮಟವಾಯ್ಕೆ ಮುಕ್ತಿ ಗಡ ಗೊಮ್ಮಟನೋಜೆಯೇ! ನಿಲ್ಲೆ ಮನ್ನನಂ

ಗೊಮ್ಮಟನಲ್ಲಿ! ಕಾವುಡಪರಾಂಬುಧಿ ಸಹ್ಯ ಗಿರೀಶ! ಗೊಮ್ಮಟಾ

- ಎಂ.ಗೋವಿಂದ ಪೈ



ವಿಸಟ್ಟ ಕಂದೊಟ್ಟ ದಲಾಣುಯಾರಂ

ಸುಲೋಯಣಂ ಚಂಡ-ಸಮಾಣ-ತುಂಡಂ

ಘೋಣಾಜಿಯಂ ಚಂಪಯ ಪುಷ್ಪಸೋಹಂ

ತಂ ಗೊಮ್ಮಟೇಸಂ ಪಣಮಾಮಿಣಿಚ್ಚಂ

**- ಆಚಾರ್ಯ ನೇಮಿಚಂದ್ರರು**

ಆರೋ ತೆಕ್ಕನೆ ತುಡುಕಿ ಬಾಯ್ ಮುಚ್ಚಿ ಹಿಡಿದಂತೆ

ಮೌನಭಾರದಿ ಮಾತು ಮೂರ್ಛ ಹೋಗಿಹುದಿಲ್ಲಿ

ಶ್ರೀ ಗೊಮ್ಮಟೇಶ್ವರ ಸನ್ನಿಧಿಯಲ್ಲಿ

**-ಕುವೆಂಪು**

ಶ್ರೀ ಗೋಮಟೇಶ್ವರಾ ಗೂಢತನ ಮೌನದಿಂದೇಕಾಯ್ದೆಯಾಗಿ ನೀನಿಂತು ನಿಂತು

ಶತಮಾನಗಳನಷ್ಟೆ ದಣಿವ ಕಾಣದೆ ಕಳೆದೆ? ಸ್ಯೆರಣೆಯದಾವುದೊ? ಯಾವ ಶಾಂತಿ

ನಿನ್ನ ಹೃದಯವನೊಲಿದು ನಿತ್ಯತೆಯ ನೀಡಿತ್ಯೆ ಕಾಲದಾ ಕೋಟಲೆಯ ಸಹಿಸುವಂತೆ

ನೀಲಭದೊಳು ಶಿರವ ಭೂತಳದಿ ಚರಣಗಳನ್ನಿರಿಸಿ ಪರವಿಹಗಳು ಸಂಧಿಸಿರುವೆ!

ನಿನ್ನ ಮೌನದ ಮೊಳಗನಾಲಿಸುತಲುಹುದೀ ಜಗಂ;

ನಿನ್ನ ಕಂಗಳ ಮಿಂಚ ನೋಡುತಿರೆ ಧರೆಯ ನಯನಂ;

ನಿನ್ನೆದೆಯ ಸಿಡಿಲೆರಗುತಿದೆ ವಿಸ್ಮಯಾಶ್ಚರ್ಯದಿಂ;

ನಿನ್ನ ದಯದಾ ವರ್ಷವಿಳಿಗೇವುದಾನಂದಮಂ!

**-ಕುವೆಂಪು**

ಕಲ್ಲ ಮೆಲ್ಲಿತು ಮಾಡಿ ಶಿಲ್ಪಿ ಕೂಗಿದ ಕರೆಗೆ ಭಕ್ತಿಲಂಪಟನಾಗಿ

ಬುವಿಗೆ ಬಂದು ಬೆಳುಗೊಳದ ಕುಟ್ಟುಟುಕು ಶಬ್ದಗಳ ಶಾಂತಿಯಂ

ಮಾಣು ಮಲೆಯಗ್ರದಲ್ಲಿ ಬೀಡ ಬಿಟ್ಟು

ರಾಕಾಸುಧಾಕರನ ಕಂಡರಿಸಿ ಸಮೆದಂಥ ರೂಪರೂಪಾರ್ವನು

ಸುತ್ತ ಚೆಲ್ಲಿ ಪರಮನೊಂದದ್ದುತದ ಸುಳಿವ ತೋರಲು

ಜಗಕೆ ಗೋಮಟೇಶ್ವರನಾಗಿ ನಿಂದೆ ದೇವ

**-ಜಿ.ಪಿ.ರಾಜರತ್ನಂ**



ಭಗವದಾಟೋಪಮದು

ಮಯ್ಯಾಂತು ನಿಂತಂತೆ;

ಪ್ರೇಮ, ದಯೆ, ಸತ್ಯ, ಸೌಂದರ್ಯ

ಭವ್ಯ ಸಾಕಾರಗೊಂಡಂತೆ;

ಗಗನದೌದಾರ್ಯಮಂ

ಕಡಲಗಾಂಭೀರ್ಯಮಂ

ಹಿಡಿದು ಕಡೆದಿಟ್ಟಂತೆ:

ಶೋಭಿಸುವ ಬೆಳೊಳದ ಗೋಮಟೇಶ,

ನೀನೆನಗೊಂದು ಮಹಾಕಾವ್ಯಂ **-ಜಿ.ಎಸ್.ಶಿವರುದ್ರಪ್ಪ**

ಎದೆಯಿದ್ದರಿಲ್ಲಿ ನಗು ನೋಡುವಂ

ಬತ್ತಲೆಗೆ ನಗುವ ಓ ಲಘು ಹೃದಯಿ !

ಇಲ್ಲಿ ಬಾಯಿಗೆ ಬೀಗ !

ನುಡಿಗೆ ಮೌನದ ಸಿಡಿಲು ಹೊಡೆದಂತಿರುವುದೀಗ !

-ಕುವೆಂಪು

**ಬಾಹುಬಲಿ ಸ್ವಾಮಿ ಸ್ತುತಿ ***

ಬಾಹುಬಲಿ ಸ್ವಾಮಿ ಜಗಕೆ ನೀ ಸ್ವಾಮಿ

ಶಾಂತಿಯ ಮೂರುತಿಯೇ, ನಮಿಪೆವು ಅನುದಿನವೂ, ನಮಿಪೆವು ಅನುದಿನವೂ

ಆಧಿನಾಥ ಕುವರ ಭರತನ ಸೋದರ

ಸೋದರನ ಗೆದ್ದೆಯಲ್ಲಾ, ರಾಜ್ಯವನ್ನೇ ಕೊಟ್ಟೆಯಲ್ಲಾ, ರಾಜ್ಯವನ್ನೇ ಕೊಟ್ಟೆಯಲ್ಲಾ

ನೋಡೆ ನೀ ಕಿರಿಯವ, ಆದೆ ನೀ ಹಿರಿಯವ

ವಿವೇಕ ನಿನ್ನದಾಗಿ, ತಾಳ್ಮೆಯ ಬಾಳಾಗಿ, ತಾಳ್ಮೆಯ ಬಾಳಾಗಿ

ಶಾಂತಿಯ ವದನ, ಕಾಂತಿಯ ನಿಲವು

ವಿಶ್ವಕೆ ಆದರ್ಶ, ನಿಮ್ಮಯ ದರ್ಶನವು, ನಿಮ್ಮಯ ದರ್ಶನವೂ

ಬೆಳಗೊಳ ರಾಜ, ಅಗಣಿತ ತೇಜಾ

ಅರಳಿದ ಬಿಳಿಕಮಲ, ನಿಮ್ಮಯ ಪದಯುಗಲ, ನಿಮ್ಮಯ ಪದಯುಗಲ

ಸುನಂದಾ ದೇವಿಯ ಗರ್ಭದಿ ಜನಿಸಿ

ಕೀರ್ತಿಯ ತಂದಿಹೆಯಾ, ಇಡಿಯ ಪ್ರಪಂಚದೊಳು, ಇಡಿಯ ಪ್ರಪಂಚದೊಳು.

* ಒಬ್ಬ  ಅನಾಮಿಕ ಕವಿ ಬರೆದ ಈ ಸ್ತುತಿ ಗೀತೆ ಅತ್ಯಂತ ಜನಪ್ರಿಯವಾಗಿದ್ದು ಅತ್ಯಂತ ಸಂಕ್ಷಿಪ್ತವಾಗಿ ಬಾಹುಬಲಿಯ ಕಥೆಯನ್ನು ಹೇಳುವ ಈ ಗೀತೆಯನ್ನು ಕೇಳಿದವರು ಭಾವುಕರಾಗದೇ ಉಳಿಯುವುದು ಕಷ್ಟ.







# ಚಿತ್ರ ಸಂಪುಟ


ಇವು ಕಪ್ಪ ಬಿಳುಪು ಚಿತ್ರಗಳು. ಅಂದರೆ ನಮ್ಮನ್ನು ಭೂತಕಾಲಕ್ಕೆ ತೆಗೆದುಕೊಂಡು ಹೋಗುವ ಚಿತ್ರಗಳು. ಇಲ್ಲಿ ಮಹಾರಾಜರು ಇದ್ದಾರೆ, ಮೊದಲ ಪ್ರಧಾನಿ ಇದ್ದಾರೆ. ದೇಶದ ಏಕೈಕ ಮಹಿಳಾ ಪ್ರಧಾನಿ ಆಗಿದ್ದವರು ಇದ್ದಾರೆ. ಏಲಾಚಾರ್ಯ ಪಟ್ಟ ಮುಟ್ಟಿದ ಮುನಿ ಮಹಾರಾಜರು ಇದ್ದಾರೆ.




ಚಿಕ್ಕ ಬೆಟ್ಟದ ಮೇಲೆ ಚುಕ್ಕೆಗಳಂತೆ ಕುಳಿತು ದೊಡ್ಡಬೆಟ್ಟದ ಬಾಹುಬಲಿ ಸ್ವಾಮಿಯ ಮಹಾ ಅಭಿಷೇಕ ನೋಡಿ ಪಾವನರಾದ ಸಾಮಾನ್ಯ ಜನರು ಇದ್ದಾರೆ. ಬಾಹುಬಲಿ ಮೂರ್ತಿಗೆ ಸಾವಿರ ವರ್ಷ ತುಂಬಿದ ನೆನಪೂ ಇಲ್ಲಿ ಇದೆ. ಒಂದು ಚಿತ್ರ ಏನೆಲ್ಲ ಹೇಳಬಹುದು ಎನ್ನುತ್ತಾರೆ. ಇನ್ನು ಅಷ್ಟೊಂದು ಚಿತ್ರಗಳು ಎಷ್ಟೊಂದು ಕಥೆ ಹೇಳಬಹುದು? ಈ ಚಿತ್ರಗಳನ್ನು ಒದಗಿಸಿದ ವಾರ್ತಾ ಇಲಾಖೆಗೆ ಹೃದಯ ಪೂರ್ವಕ ಕೃತಜ್ಞತೆಯ ನಮಸ್ಕಾರಗಳು.
















































## ಆಕರ ಗ್ರಂಥಗಳು


1. ಕರ್ನಾಟಕ ಪರಂಪರೆ ಸಂಪುಟ-1

ಮೈಸೂರು ಸರ್ಕಾರದ ಪ್ರಕಟಣೆ-1970

2. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

(ಕ್ರಿ.ಶ 450-1150) ಡಾ.ಎಂ.ಚಿದಾನಂದಮೂರ್ತಿ

ಸಪ್ನ ಬುಕ್ ಹೌಸ್ ಬೆಂಗಳೂರು

3. ಶ್ರವಣ ಬೆಳ್ಕೊಳ

ಷ.ಶೆಟ್ಟರ

ರೂವಾರಿ ಧಾರವಾಡ

ಮತ್ತು ಕರ್ನಾಟಕ ಪ್ರವಾಸ 1981

4. ಶ್ರವಣ ಬೆಳಗೊಳ ಒಂದು ಸಮೀಕ್ಷೆ

ಸಂ : ಡಾ.ಜಿ.ಎಸ್.ಶಿವರುದ್ರಪ್ಪ

ಬೆಂಗಳೂರು ವಿಶ್ವವಿದ್ಯಾಲಯ,

ಬೆಂಗಳೂರು 1983

5. ಹೊಮೇಜ್ ಟು ಶ್ರವಣಬೆಳಗೊಳ

ಸರಯೂ ದೋಶಿ

ಮಾರ್ಗ ಪಬ್ಲಿಕೇಷನ್ಸ್

1981

6. ಮಾಸ್ಟರ್ ಪೀಸಸ್ ಆಫ್ ಜೈನ್ ಪೇಂಟಿಂಗ್

ಸರಯೂ ದೋಶಿ

ಮಾರ್ಗ ಪಬ್ಲಿಕೇಷನ್ಸ್ 1981

7. ಗೊಮ್ಮಟೇಶ್ವರ ಕಮೆಮೊರೇಷನ್ ವಾಲ್ಯೂಂ

ಸಂ: ಡಾ.ಟಿ.ಜಿ.ಕಲಘಟಗಿ

ಎಸ್.ಡಿ.ಜೆ.ಎಂ.ಐ ಮ್ಯಾನೇಜಿಂಗ್ ಕಮಿಟಿ

ಶ್ರವಣಬೆಳಗೊಳ 1981

8. ಜೈನ ಟೆಂಪಲ್ಸ್ ಅಂಡ್ ಟೂರಿಸ್ಟ್ ಪ್ಲೇಸಿಸ್

ಆಫ್ ಕರ್ನಾಟಕ

ಪ್ರ : ಐಟಿಐ ಜೈನ ಅಸೋಸಿಯೇಷನ್

ಬನಶಂಕರಿ, ಬೆಂಗಳೂರು 1993

9. ಮಹಾಮಸ್ತಕಾಭಿಷೇಕ 1993 ಸ್ಮರಣ ಸಂಚಿಕೆ

ಸಂ : ಇ.ಆ.ಸೇತುರಾಂ

ಪ್ರ : ಮಹಾಮಸ್ತಕಾಭಿಷೇಕ ಆಚರಣೆ

ಪ್ರಚಾರ ಸಮಿತಿ ಶ್ರವಣಬೆಳಗೊಳ

10. ಓಪುಲೆಂಟ್ ಚಂದ್ರಗಿರಿ

ಡಾ.ಹಂಪ ನಾಗರಾಜಯ್ಯ

ಪ್ರ : ಎಸ್.ಡಿ.ಜೆ.ಎಂ.ಐ ಮ್ಯಾನೇಜಿಂಗ್ ಕಮಿಟಿ

ಶ್ರವಣಬೆಳಗೊಳ 2001

11. ರತ್ನಕರಂಡಕ ಶ್ರಾವಕಾಚಾರ

ಅನು : ಮಿರ್ಜಿ ಅಣ್ಣಾರಾಯ

ಪ್ರ : ಜೈನ ಸಂಸ್ಕೃತಿ

ಸಂರಕ್ಷಕ ಸಂಘ, ಸೊಲ್ಲಾಪುರ 1981

12. ಬಾಹುಬಲಿ ಸ್ಮರಣ ಸಂಚಿಕೆ -1990

ಭಗವಾನ್ ಬಾಹುಬಲಿ ಸ್ವಾಮಿ ಮಹಾ

ಮಸ್ತಕಾಭಿಷೇಕ ಸಮಿತಿ ಕಾರ್ಕಳ ದ.ಕ.

13. ಜೈನ ಧರ್ಮ

ಲೇ. ಮಿರ್ಜಿ ಅಣ್ಣಾರಾಯ

ಶಾಂತಿ ಸೇವಾ ಸದನ ಸೇಡಬಾಳ

ಬೆಳಗಾವಿ ಜಿಲ್ಲೆ

14. ಜೈನ ಧರ್ಮ

ಲೇ ಕೈಲಾಶ ಚಂದ್ರ ಶಾಸ್ತ್ರಿ

ಅನು : ಕೆ.ಭುಜಬಲಿ ಶಾಸ್ತ್ರಿ

ಬಿ.ದೇವಕುಮಾರ ಜೈನ

ಜೀವರಾಜ ಗ್ರಂಥಮಾಲ ಸೊಲ್ಲಾಪುರ

15. ಭಾರತೀಯ ಜೈನ ಸಂಸ್ಕೃತಿಗೆ

ಜೈನ ಧರ್ಮದ ಕೊಡುಗೆ

ಡಾ.ಹೀರಾಲಾಲ ಜೈನ

ಅನು : ಮಿರ್ಜಿ ಅಣ್ಣಾರಾಯ

ಲಾಲಚಂದ ಹಿರಾಚಂದ ದೋಶೀ

ಜೈನ ಸಂಸ್ಕೃತಿ ಸಂರಕ್ಷಕ ಸಂಘ

ಸೊಲ್ಲಾಪುರ



ಕರ್ನಾಟಕದ ಇತಿಹಾಸದಲ್ಲಿ ಶ್ರವಣಬೆಳಗೊಳಕ್ಕೆ ಬಹಳ ಮಹತ್ವದ ಸ್ಥಾನವಿದೆ. ಇಲ್ಲಿನ ವಿಂಧ್ಯಗಿರಿ ಹಾಗೂ ಚಂದ್ರಗಿರಿಗಳು ಐತಿಹಾಸಿಕ ಮತ್ತು ಧಾರ್ಮಿಕ ಕಾರಣಗಳಿಗಾಗಿ ಮಾತ್ರವಲ್ಲದೆ ಶಿಲ್ಪಕಲೆಯ ದೃಷ್ಟಿಯಿಂದಲೂ ಅನನ್ಯ ಎನ್ನುವಂಥ ತಾಣಗಳು. ವಿಂಧ್ಯಗಿರಿ ಬೆಟ್ಟದ ಮೇಲೆ ನಿಂತಿರುವ ಭಗವಾನ್ ಬಾಹುಬಲಿ ಪ್ರತಿಮೆ ಅಪ್ರತಿಮ ಸೌಂದರ್ಯಕ್ಕೆ ಹೆಸರಾದುದು. ಅದು ಕರ್ನಾಟಕದ ಹೆಮ್ಮೆಯನ್ನು ಜಾಗತಿಕ ಮಟ್ಟದಲ್ಲಿ ಬೆಳಗಿದ ಮೂರ್ತಿ,

ಭಗವಾನ್ ಬಾಹುಬಲಿ ಕೇವಲ ಒಂದು ಮೂರ್ತಿ ಮಾತ್ರವಲ್ಲ, ಇಡೀ ವಿಶ್ವಕ್ಕೆ ಶಾಂತಿಯ, ಅಹಿಂಸೆಯ ಮತ್ತು ತ್ಯಾಗದ ಮಹತ್ವವನ್ನು ತಿಳಿಸಿಕೊಟ್ಟ ಒಂದು ಬಹುದೊಡ್ಡ ಮೌಲ್ಯ. ಅಪ್ರತಿಮ ಶಿಲ್ಪ ಕೌಶಲ ಹಾಗೂ ಇಂಥ ಮಾನವೀಯ ಮೌಲ್ಯಗಳು ಒಂದು ಕಡೆ ಮೇಳೈಸುವುದು ಬಹಳ ವಿರಳ. ಅದು ಶ್ರವಣಬೆಳಗೊಳದ ಬಾಹುಬಲಿಗೆ ಮಾತ್ರ ಸಲ್ಲುವ ಮಹಿಮೆ.

ಇದೀಗ ಬೆಳಗೊಳದ ಬಾಹುಬಲಿಗೆ ಫೆಬ್ರವರಿಯಲ್ಲಿ 12 ವರ್ಷಗಳ ನಂತರ ಮಹಾಮಸ್ತಕಾಭಿಷೇಕ ನಡೆಯಲಿದೆ. ಸರ್ವ ಜನಾಂಗಗಳಿಗೆ ಸಮಾನ ಪ್ರಾತಿನಿಧ್ಯ ಕೊಡುವಲ್ಲಿ ನಂಬಿಕೆಯಿಟ್ಟಿರುವ ನಮ್ಮ ಸರ್ಕಾರ ಮಹಾಮಸ್ತಕಾಭಿಷೇಕದ ನಿಮಿತ್ತ ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಸಕಲ ಮೂಲ ಸೌಕರ್ಯಗಳನ್ನು ಶ್ರವಣಬೆಳಗೊಳ ಹಾಗೂ ಪರಿಸರದಲ್ಲಿ ಒದಗಿಸಿಕೊಟ್ಟಿದೆ. ಮಹಾಮಸ್ತಕಾಭಿಷೇಕದ ಸಮಯದಲ್ಲಿ ಕೇವಲ ಭಕ್ತಾದಿಗಳು ಮಾತ್ರವಲ್ಲದೇ ದೇಶ ವಿದೇಶಗಳ ಪ್ರವಾಸಿಗರೂ ಶ್ರವಣಬೆಳಗೊಳಕ್ಕೆ ಬರುತ್ತಾರೆ. ಅವರಿಗೆ ಎಲ್ಲ ರೀತಿಯ ಅನುಕೂಲ ಮಾಡಲಾಗಿದೆ.

ಈ ಉತ್ಸವ ಯಶಸ್ವಿಯಾಗಿ ನಡೆದು, ಹಿಂಸೆಯಿಂದ ತತ್ತರಿಸಿರುವ ವಿಶ್ವದಲ್ಲಿ ಶಾಂತಿ ನೆಲೆಸುವಂತೆ ಮಾಡಲಿ ಎಂದು ಹಾರೈಸುವೆ. ಈ ಸಂದರ್ಭದಲ್ಲಿ ಶ್ರವಣ ಬೆಳಗೊಳ ಹಾಗೂ ಭಗವಾನ್ ಬಾಹುಬಲಿಯ ಕುರಿತು ಅಧ್ಯಯನಪೂರ್ಣವಾದ 'ಗೊಮ್ಮಟ' ಎಂಬ ಈ ಪುಸ್ತಕವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕನ್ನಡ, ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಿ ಪ್ರಕಟಿಸುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಸಂಬಂಧಪಟ್ಟ ಎಲ್ಲರಿಗೂ ಅಭಿನಂದನೆಗಳು.

ಈ ಪವಿತ್ರ ಸಮಾರಂಭಕ್ಕೆ ಎಲ್ಲರಿಗೂ ಸ್ವಾಗತ ಮತ್ತು ಶುಭ ಹಾರೈಕೆಗಳು.

(ಸಿದ್ಧರಾಮಯ್ಯ)

ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ,

KARNATAKA VARTHE
www.karnatakavarthe.org
Printed at R.K Printers, Hassan Cell: 09448220300